CC-0. In Public Domain. Digitized by eGangotri

ಶ್ರೀ ಸಂತೋಷಿ ಮಾತಾ



Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಸಂತೋಷಿಮಾತಾ

(ಸಂತೋಷಿಮಾತ ವ್ರತ-ಕಥೆ, ಅನ್ನಪೂರ್ಣ ಮಹಿಮೆಯ ಸ್ತೋತ್ರ-
ಕಥೆ, ವರಮಹಾಲಕ್ಷ್ಮಿ ಕಥೆ, ಕೀರ್ತನೆ)

ಲೇಖಕರು :

ಕೃ. ನಾರಾಯಣರಾವ್

A. SUBRAHMANYA SHASTRY,
Photo & Book Seller,
SRINGERI - 577 139.

ಪ್ರಕಾಶಕರು :

ಮೆ॥ ಟಿ. ನಾರಾಯಣ ಅಯ್ಯಂಗಾರ್

ಪುಸ್ತಕ ವ್ಯಾಪಾರಿಗಳು ಹಾಗೂ ಪ್ರಕಾಶಕರು

ಬಳೇಪೇಟೆ, ಬೆಂಗಳೂರು-53

Sri Vidyabharathi Book Centre, Sringeri

CC-O. In Public Domain. Digitized by eGangotri

SHRI SHANTHOSHI MATHA

Published by M/s T. Narayana Iyengar, Book Seller & Publisher, Balepet, Bangalore-53.

Written by Kru. Narayana Rao.

ಹಕ್ಕನ್ನು ಕಾದಿರಿಸಲಾಗಿದೆ

ಪ್ರಥಮ ಮುದ್ರಣ : 1991

ಮುದ್ರಕರು :

ಗೀತಾಂಜಲಿ ಪ್ರಿಂಟ್ಸ್, ಸೌರಾಷ್ಟ್ರಪೇಟೆ ಬೆಂಗಳೂರು-53.

Sri Vidyabharathi Book Centre, Sringeri

CC-O. In Public Domain. Digitized by eGangotri

ಮುನ್ನುಡಿ

ನಾಸ್ತಿಕತೆಯು ಹೆಚ್ಚುತ್ತಿರುವ ಕಲಿಯುಗದ ಕೊನೆಯ ಪಾದದಲ್ಲಿ ನಾವಿರುವ ಇಂದಿನ ಯುಗ ದೈವಭಕ್ತಿ–ಭಾವನೆಯನ್ನೇ ಮರೆತು ಇಹಲೋಕದ ಆಸೆ–ಆಮಿಷಗಳಲ್ಲಿಯೇ ಮುಳುಗಿದೆ. ಧಾರ್ಮಿಕ ಹಬ್ಬ–ಹರಿದಿನಗಳ ಧ್ಯೇಯ–ಧೋರಣೆಗಳಿಂದ ದೂರ ಸರಿದು, ಅಜ್ಞಾನ, ಅವಿವೇಕದ ಕಾರ್ಗತ್ತಲಲ್ಲಿ ಕೊಳೆಯುತ್ತಿದೆ. ಅವಿವೇಕ–ಅನ್ಯಾಯದ ಅಕೃತ್ಯಗಳ ಪರಿಸರದಲ್ಲಿ ಬೆಳಕು ಕಾಡದೆ ಜೀವನವೇ ಬೆಂದು ಬೆಂಡಾಗುತ್ತಿದೆ.

ಪ್ರಸ್ತುತ ಪುಸ್ತಕ "ಶ್ರೀ ಸಂತೋಷಿಮಾತಾ" ದಲ್ಲಿ ಕೇವಲ ಮಹಾಮಾತೆಯ ಮಹಿಮೆ–ಸಿರಿಮೆಯೇ ಅಲ್ಲ; ದಿಕ್ಕರಿಯದ, ದಾರುಣ ದುಃಖದ ಜೀವನದಲ್ಲಿ ಮುಳುಗಿರುವ ಮಂದಿಗೆ ದಿವ್ಯ–ಭವ್ಯ ಬೆಳಕು ಭಕ್ತಿಯ ಪಂಪಶತೆಯಲ್ಲಿ ಕಂಡು ಬಂದಿದೆ. ಮನಃಪೂರ್ವಕ, ಶ್ರದ್ಧೆ–ಭಕ್ತಿಯಿಂದ ಆದ ಶಕ್ತಿ ಎನಿಸಿರುವ ಭಗವತಿಯನ್ನು ಭಜಿಸುವುದರಿಂದ ಹೇಗೆ ಪಾಮರನೂ ಪಾವನನೆನಿಸಬಲ್ಲ, ಬಡವನೂ ಬಲ್ಲಿದನಾಗಬಲ್ಲ ಎಂಬುದರ ಪರಿವೆಯನ್ನು ಮೂಡಿಸುವುದೇ ಈ ಕಿರು ಕೃತಿಯ ಮೂಲೋದ್ದೇಶ ಆಗಿದೆ. ಸಂಸ್ಕೃತ ಸೂಕ್ತಿ ಎನಿಸಿರುವ "ಮೂಕಂ ಕರೋತಿ ವಾಚಾಲಂ, ಪಂಘುಂ ಲಂಘತಿಗಿರಿ" ಎಂಬುದರ ಅರ್ಥ–ಸತ್ವವನ್ನು ಪ್ರತ್ಯಕ್ಷ ರೂಪದಲ್ಲಿ ವಾಚಕರಿಗೆ ಅರುಹುವುದೇ ಪುಸ್ತಕ ರಚನೆಯ ಗಮನಾರ್ಹ ಗುರಿ ಆಗಿದೆ.

ಈ ಪುಸ್ತಕವನ್ನು ಬರೆಯಲು ಪ್ರೋತ್ಸಾಹಿಸಿ ಪ್ರಕಾಶಿಸುತ್ತಿರುವ ಮೆಸರ್ಸ್ ಶ್ರೀ ನಾರಾಯಣ ಅಯ್ಯಂಗಾರ್ ಅವರಿಗೆ ಹಾಗೂ ನಲುವೆಯ ಓದುಗರಿಗೆ ಈ ಮೂಲಕ ಜಗನ್ಮಾತೆ ಸಕಲರಿಗೂ ಸನ್ಮಂಗಳವನ್ನು ಉಂಟು ಮಾಡಲಿ ಎಂದು ಹೃತ್ಪೂರ್ವಕವಾಗಿ ಹಾರೈಸುವ.

ಇಂತಿ,

ಕೃ. ನಾರಾಯಣರಾವ್

Sri Vidyabharathi Book Centre, Sringeri

23-8-91

CC-O. In Public Domain. Digitized by eGangotri

ವಿಷಯ ಸೂಚಿ

	ಪುಟ ಸಂಖ್ಯೆ
ವ್ರತ ನಿಯಮಾವಳಿ	9
ಸಂತೋಷಿಮಾತಾ ಅಷ್ಟೋತ್ತರ	12
ಸಂತೋಷಿಮಾತೆಯ ಕಥೆ	15
ಸಂತೋಷಿಮಾತೆಯ ಕೀರ್ತನೆಗಳು	50
ಅನ್ನಪೂರ್ಣ ಮಹಿಮೆಯ ಕಥೆ	51
ಅನ್ನಪೂರ್ಣ ದೇವಿಯ ಸ್ತೋತ್ರ	62
ವರಮಹಾಲಕ್ಷ್ಮಿ ಕಥೆ	65
ವರಮಹಾಲಕ್ಷ್ಮಿಯ ಕೀರ್ತನೆ	72

Sri Vidyabharathi Book Centre, Sringeri

CC-O. In Public Domain. Digitized by eGangotri



756.

Santosi Maa

Sri Vidyabharathi Book Centre, Sringeri

J.B. KHANNA & Co.,
10, DEVARAJA MUDALI S
MADRAS 600 003.

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಸಂತೋಷಿ ಮಾತಾ

(ಪೂಜಾವಿಧಿ, ಕಥಾವರಣ, ಕೀರ್ತನೆಗಳು)

ಇಂದಿನ ವಿಜ್ಞಾನ ಯುಗದಲ್ಲಿ ದೈವಿಕ ವಿಚಾರಗಳಿಗೆ ಹೆಚ್ಚಿನ ಮಹತ್ವ ಇಲ್ಲದಿರುವುದು ಭಾರತದಲ್ಲಂತೂ ಅತಿ ವಿಷಾದಕರ. ಅಲೌಕಿಕ ವಿಚಾರಗಳ ಬಗ್ಗೆ ಹಿಂದೆ ಇದ್ದ ಶ್ರದ್ಧೆ-ಭಕ್ತಿ ಇಂದು ಕಡಿಮೆ ಆಗುತ್ತಿದೆ. ಧಾರ್ಮಿಕ ಹಬ್ಬಗಳ ಆಚರಣೆಯ ಕಟ್ಟಲೆಗಳು ಸಡಿಲಗೊಳ್ಳುತ್ತಿವೆ, ಶಿಥಿಲವಾಗುತ್ತಿವೆ. ರಥೋತ್ಸವಗಳು, ಜಾತ್ರೆಗಳು ಮೊದಲಾದ ಸಂದರ್ಭಗಳಲ್ಲಿನ ಹಿಂದಿನ ಸಂಸ್ಕೃತಿ ಇಂದು ವಿಕೃತಿಗೊಳ್ಳುತ್ತಿರುವುದು ತುಂಬಾ ಶೋಚನೀಯ. ಹಬ್ಬ-ಹುಣ್ಣಿಮೆಗಳ ವ್ರತ ನಿಯಮಗಳು ಇಂದಂತೂ ಕಾಣೆ ಆಗಿವೆ. ಧಾರ್ಮಿಕ ವಲಯದ ವ್ಯಾಪಕ ಅಭ್ಯುದಯ ಆಗದ ಹೊರತು ಸಮಾಜದಿಂದ ಹಿಡಿದು ಸಮಗ್ರ ಭಾರತದವರೆಗೆ ಜನತೆಯ ಕಲ್ಯಾಣ ದಿಸೆಯಲ್ಲಿ ಸರ್ವಾಂಗೀಣ ವಿಕಾಸ ಉಂಟಾಗಲು ಸಾಧ್ಯವೇ ಇಲ್ಲ.

ಇಂದಿನ ಮಾನವ ಕೇವಲ ಯಾಂತ್ರಿಕ ಮನುಜನೆನಿಸಿದ್ದಾನೆ. ಜೀವನದ ಗುರಿ, ಉದ್ದೇಶ ಮೊದಲಾದ ಮೂಲಭೂತ ಅಡಿಗಲ್ಲುಗಳ ಅರಿವೇ ಅವನಲ್ಲಿ ಮೂಡಿಲ್ಲ. ಅಷ್ಟಿಷ್ಟು ಉಳಿದಿದ್ದುದೂ, ಇಂದು ಅಳಿಯುತ್ತಿದೆ. ಮಾನವನ ಮನಸ್ಸಿನಲ್ಲಿ ಅಸಂಖ್ಯಾತ ಕಷ್ಟ-ಕ್ಲೇಶಗಳ ಮುಳ್ಳುಗಳು ಚುಚ್ಚುತ್ತಿವೆ. ದಾರಿದ್ರ್ಯದ ಬವಣೆಯಲ್ಲಿ ಸಿಲುಕಿ, ಅವನ ಮುಖ ಸುಕ್ಕುಗಟ್ಟುತ್ತಿದೆ. ಭವಸಾಗರದಿಂದ ಪಾರಾಗದ ಮಾರ್ಗವಾಗಿದೆ. ಅವನ ಹೃದಯ ಸ್ಪಂದಿಸುತ್ತಿದೆ, ಕಂಪಿಸುತ್ತಿದೆ. ಈ ಎಲ್ಲಾ ಈತಿ-ಬಾಧೆಗಳಿಂದ ತಪ್ಪಿಸಿಕೊಳ್ಳಲು ವ್ರತನಿಯಮಗಳಲ್ಲಿ ನಿಷ್ಠೆ ಇರುವುದು, ನಿಷ್ಠೆಯಿಂದ ವ್ರತಗಳನ್ನು ಆಚರಿಸುವುದು, ಅತ್ಯಗತ್ಯವೆನಿಸಿದೆ. ಇಂತಹ ವ್ರತಗಳಲ್ಲಿ "ಶ್ರೀ ಸಂತೋಷಿ ಮಾತಾ ವ್ರತವೂ ಒಂದು"

Sri Vidyabharathi Book Centre, Sringeri

CC-O. In Public Domain. Digitized by eGangotri

ವ್ರತನಿಷ್ಠ ಜನರು ಈ ಮೂಲಕ ತಮ್ಮ ಕಷ್ಟ ಕಂಟಕಗಳಿಂದ ಪಾರಾಗಿರುವು ಸಾಕಷ್ಟು ಸಾಕ್ಷ್ಯಾಧಾರಗಳಿದ್ದು ಮತಿ ಇದ್ದೂ ಮೂಢರಂತೆ, ಕಣ್ಣಿದ್ದೂ ಕುರುಡರಂತೆ ಲೌಕಿಕ ಅನೀತಿ ಕೃತ್ಯಗಳಲ್ಲಿ ತೊಡಗಿ, ಧರ್ಮ ನೀತಿಯ ನೆಲೆಯಿಂದ ದೂರವಾಗುತ್ತಿರುವುದನ್ನು ನಾವು ಕಣ್ಣಾರೆ ಕಾಣುತ್ತಿದ್ದೇವೆ. ಮತಿಯನ್ನು ಮಾಣಿಕ್ಯದಂತೆ ಹೊಳೆಯುವಂತೆ ಮಾಡಲು, ಕುರುಡುತನದಂತಹ ಅಜ್ಞಾನ ದೂರವಾಗಿ, ಜ್ಞಾನದ ದೀವಿಗೆಯನ್ನು ಪ್ರಜ್ವಲಗೊಳಿಸಲು ವ್ರತಗಳು ಸಹಾಯಕ ಎನಿಸಿವೆ.

ಇಂತಹ ವ್ರತಗಳಲ್ಲಿ ಶುಕ್ರವಾರದ ಹಬ್ಬದ ವ್ರತಗಳು ಭಾರತದಲ್ಲಿ ಹಿಂದೂ ಜನಾಂಗದ ಧಾರ್ಮಿಕ ಉಸಿರು ಎನಿಸಿದೆ. ಇಂತಹ ಸಾಂಸ್ಕೃತಿಕ ಶುಕ್ರವಾರದ ಹಬ್ಬಗಳಲ್ಲಿ "ಶ್ರೀ ಸಂತೋಷಿ ಮಾತಾ" ವ್ರತದ ಹಬ್ಬವೂ ಒಂದು ಹಬ್ಬವನ್ನು ಆಚರಿಸುವುದು ತುಂಬಾ ಸರಳ. ಆದರೆ ಪರಿಣಾಮಕಾರಿ ಫಲ, ಈ ಮಹಾ ಮಾತೆಯ ಪೂಜೆಗೆ ಮುಖ್ಯವಾಗಿ ಬೇಕಾದುದು ಶ್ರದ್ಧೆ ಹಾಗೂ ಭಕ್ತಿ. ಕೇವಲ ಇಷ್ಟರಿಂದಲೇ ಈಕೆಯ ಪ್ರೀತಿ-ದಯೆಯ ಕೃಪೆಗೆ ಪಾತ್ರರಾಗಿ, ಲೌಕಿಕ ವಿವಿಧ ಬಾಧೆಗಳಿಂದ ಮುಕ್ತರಾಗಬಹುದು. ಹೃನ್ಮಂದಿರದಲ್ಲಿ ನೆಲೆಗೊಳಿಸಿಕೊಂಡು, ಸದಾ ಕಾಲವೂ ಸ್ಮರಣೆ ಮಾಡುತ್ತಿದ್ದರೂ ಸಾಕು, ಈ ಮಹಾಮಾತೆ ಆದಿಶಂಕರಿಯ ಅಭಯ ಹಸ್ತವನ್ನು ಪಡೆಯಬಹುದು. ಭಕ್ತಿರೂಪದ ಪ್ರೇಮಕ್ಕಿಂತಲೂ ಮಿಗಿಲಾದ ಯಾವುದನ್ನೂ ದೇವಿ ಅಪೇಕ್ಷಿಸಳು. ಈ ಪ್ರೇಮ ಧಾರೆಯ ಮುಂದೆ ಈ ತಾಯಿ ಭಕ್ತ-ಭಕ್ತೆಯರ ಕೈಗೊಂಬೆ ಆಗುವಳು ಮನಸ್ಸಿನಲ್ಲಿ ಯಾವ ಕಲ್ಮಷಕ್ಕೂ ಎಡೆಕೊಡದೆ ಕಾಯಾ-ವಾಚಾ-ಮನಸಾ ಭಜಿಸುತ್ತಿದ್ದರೂ ಸಾಕು, ಈಕೆಯ ಕಾರುಣ್ಯ ಕೃಪೆ ಸುಲಭವಾಗಿಯೇ ಲಭ್ಯ. ಸಕಲ ಜೀವಿಗಳಲ್ಲಿಯೂ ವ್ಯಾಪಿತವಾಗಿರುವ ಈ ಮಹಾಮಾತೆಯ ಮಹಿಮೆ ಅಪಾರ.

ಶ್ರದ್ಧಾಳುಗಳು ಇಂದ್ರಿಯ ನಿಗ್ರಹ ಶಕ್ತಿಯನ್ನು ವೃದ್ಧಿಸಿಕೊಂಡು ಈಕೆಯ ಪಾದಾರವಿಂದಗಳಿಗೆ ಮಾರು ಹೋಗಬೇಕು. ಭಕ್ತಿಯಿಂದ ಈಕೆಯ ನಾಮಸ್ಮರಣೆ ಮಾಡುತ್ತಿದ್ದರೂ ಸಾಕು, ಕೀರ್ತನೆಗಳಲ್ಲಿ ಕೊಂಡಾಡುತ್ತಿದ್ದರೂ ಸಾಕು, ಮುಕ್ತಿಯ ಬಾಗಿಲು ತಾನೇ ತಾನಾಗಿ ತೆರೆಯಲ್ಪಡುವುದು, ಅದೃಷ್ಟ

Sri Vidyabharathi Book Centre, Sringeri

CC-O. In Public Domain. Digitized by eGangotri

ಹಾಗೂ ಭಾಗ್ಯದ ಬಾಗಿಲು ತೆರೆದು, ದಿವ್ಯ ಬೆಳಕಿನಲ್ಲಿ ನಮ್ಮೆಲ್ಲರನ್ನೂ ಮಿಂದಿಸುವುದು, ಮಾನವನ ಸಕಲ ಪಾಪಗಳೂ ಕಳಚಿ ಹೋಗುವುವು. ಆತ್ಮೋದ್ಧಾರದ ದಾರಿ ಕಾಣುವುದು ಕೇವಲ ಸಿಹಿ-ಸವಿಯ, ನಿರ್ಮಲ ಮನದ ಮಾತುಗಳೇ ಸಾಕು, ಈ ಮಹಾಮಾತೆಯನ್ನು ಸಂತುಷ್ಟಿಸಲು ಸುಲಭ ಸಾಧ್ಯ.

ಈ ವಿಚಾರ ಈಗಂತೂ ಎಲ್ಲೆಲ್ಲೂ ಜನಮನದಲ್ಲಿ ಮೂಡಿಬರುತ್ತಿದೆ. ಆದರೂ ತ್ವರಿತಗೊಳ್ಳಬೇಕಿದೆ. ಭಕ್ತಿಯ ಭಾವ ಗಂಗೆ ಹೃದಯ ಮಂದಿರದಲ್ಲಿ ನಿರಾತಂಕವಾಗಿ ಹರಿದು, ಹರುಷಗೊಳಿಸಬೇಕಿದೆ. ವಿವಿಧ ಮಲಿನತೆಗಳಿಂದ ಮನಸ್ಸನ್ನು ದೂರಮಾಡಿ, ಕೊಳೆ ಇಲ್ಲದಂತೆ ತೊಳೆಯಲು ತಾಯಿಯ ಸಂಕೀರ್ತನೆಯೊಂದೇ ಸಾಕು. ಆದರೆ ವಿಕಾರ ಮನಸ್ಸಿಗೆ ಎಡೆಗೊಡದಿರುವುದು ಅನಿವಾರ್ಯ, ಅತ್ಯಗತ್ಯ.

ಸಂತೋಷಿ ಮಾತೆ ಯಾರು?

ಗಣೇಶ ಪುರಾಣದಲ್ಲಿ ಸಂತೋಷಿ ಮಾತೆಯ ಜನ್ಮ ವೃತ್ತಾಂತ ವಿವರವಾಗಿ ಸ್ಪಷ್ಟಪಡಿಸಿದೆ. ಅದೊಂದು ದಿನ ಗೌರಿ-ಶಂಕರರ ಪ್ರೀತಿಯ ಪುತ್ರನಾದ ಗಣಪತಿಯು ಶಿವನ ಪುತ್ರಿಯಾದ ಮಾನಸಾದೇವಿ ಎಂಬ ನಾಗಕನ್ಯೆಯೊಂದಿಗೆ ಕೈಲಾಸ ಪರ್ವತದಲ್ಲಿ ಕುಳಿತು ವಿನೋದವಾಗಿ ಮಾತಾಡುತ್ತಿದ್ದನು. ಆ ದಿನ ರಕ್ಷಾ ಬಂಧನದ ದಿನವಾದ್ದರಿಂದ ಮಾನಸಾದೇವಿಯು ತನ್ನ ಸಹೋದರನಾದ ವಿನಾಯಕನ ಕೈಗೆ ರಕ್ಷಾಸೂತ್ರವನ್ನು ಪ್ರೀತ್ಯಾದರದಿಂದ ಕಟ್ಟಿದಳು. ಇದನ್ನು ಕಂಡು ಕುತೂಹಲಗೊಂಡ ಗಣಪತಿಯ ಮಕ್ಕಳಾದ ಲಾಭ ಹಾಗೂ ಕ್ಷೇಮ ಎಂಬುವವರು ಮಾನಸಾದೇವಿಯ ಬಳಿ ಬಂದು ತಮಗೂ ರಕ್ಷೆ ಕಟ್ಟಲು ಪೀಡಿಸಿದರು. ಮಾನಸಾ ದೇವಿಯು ಮಮತೆಯಿಂದ ಆ ಮಕ್ಕಳನ್ನು ಮುದ್ದಿಸುತ್ತಾ ಹೇಳಿದಳು—"ಮಕ್ಕಳಿರಾ, ರಕ್ಷಾ ಸೂತ್ರವನ್ನು ಸೋದರಿಯರು ಮಾತ್ರ ಸೋದರರಿಗೆ ಕಟ್ಟಬೇಕು. ಆದ್ದರಿಂದ ನನ್ನನ್ನು ವೃಥಾ ಪೀಡಿಸಬೇಡಿ."

ಬೇಸರಗೊಂಡ ಇಬ್ಬರೂ ಮಕ್ಕಳೂ ತಂದೆಯ ಬಳಿಗೆ ಬಂದರು. ತಮಗೊಬ್ಬ ತಂಗಿಯನ್ನು ಕೊಡುವಂತೆ ಪ್ರೀತಿಯಿಂದ ಕಾಡಿ-ಬೇಡಿದರು. ಮಕ್ಕಳ ಮನೋಭಿಲಾಷೆಯನ್ನು ಈಡೇರಿಸಲು ಅವರನ್ನು ಮಂದಹಾಸದೊಂದಿಗೆ ವಿನಾಯಕ ಸಮಾಧಾನಪಡಿಸಿದ. ಸಮಾಧಾನಪಡಿಸುತ್ತಿದ್ದಂತೆ ಅವನ ಕಣ್ಣಿನಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಜ್ವಲಿಸುವ ಬೆಳ್ಳಿಯಂತಹ ಬೆಳಕು ಹೊರಬಂತು. ಅದು ಅಲ್ಲಿಯೇ ಇದ್ದ ಒಂದು ಕಮಲದಲ್ಲಿ ಸೇರಿತು. ಆ ಕಮಲದಿಂದ ಪ್ರಸನ್ನ ಮುಖದ ಬಾಲಕಿ ಉದ್ಭವಿಸಿದಳು. ಮಂದಸ್ಮಿತ ಮುಖದ ಆಕೆಗೆ ತನ್ನ ನಾಲ್ಕು ಕೈಗಳಲ್ಲಿ ಒಂದರಲ್ಲಿ ಖಡ್ಗ, ಎರಡನೆಯದರಲ್ಲಿ ಶೂಲ, ಮೂರನೆಯದರಲ್ಲಿ ಪಾತ್ರೆ ಹಾಗೂ ನಾಲ್ಕನೆಯ ಕೈಯಲ್ಲಿ ಅಭಯವನ್ನು ಸೂಚಿಸುತ್ತಾ ಸಂತೋಷ ಚಿತ್ತಳಂತೆ ಕಂಡು ಬಂದಳು. ಎಲ್ಲರೂ ಆಕೆಯನ್ನು ಸಂತೋಷದ ಮುಖದ ಈ ಬಾಲೆ ಸದಾ ಕಾಲವೂ ಭಕ್ತರ, ದೀನ-ದಲಿತರ ದುಃಖ ನಿವಾರಣೆ ಮಾಡುವ ಮಾತೆಯೇ ಆಗಿರಲಿ ಎಂದು ಹಾರೈಸಿದರು. ಅವರೆಲ್ಲರ ಹಾರೈಕೆಯ ಫಲವಾಗಿಯೇ ಈ ಬಾಲಕಿಯೇ ಮುಂದೆ "ಸಂತೋಷಿ ಮಾತಾ" ಎಂಬ ಹೆಸರಿನಿಂದ ಭಕ್ತ ಕೋಟಿಯ ಪೂಜೆಗೆ ಪಾತ್ರಳಾದಳು.

ಮಹಾಲಕ್ಷ್ಮಿ ದೇವಿಯನ್ನು ಪೂಜಿಸುವುದರಿಂದ ಧನಪ್ರಾಪ್ತಿ ಆಗುವುದು. ವರಸರಸ್ವತಿ ದೇವಿಯ ಆರಾಧನೆಯಿಂದ ವಿದ್ಯೆ ಸಿದ್ಧಿಸುವುದು. ಶಕ್ತಿ ಬಲಗಳನ್ನು ಬಯಸುವವರು ಶಕ್ತಿಮಾತೆಯಾದ ಪಾರ್ವತಿಯ ಮೊರೆ ಹೋಗುವರು. ಅಂತೆಯೇ ಸಂತೋಷಿ ಮಾತೆಯನ್ನು ಶ್ರದ್ಧೆ-ಭಕ್ತಿಯಿಂದ ಪೂಜಿಸುವುದರ ಮೂಲಕ, ನಿಷ್ಠೆಯಿಂದ ವ್ರತವನ್ನು ಕೈಗೊಂಡು ಪೂರೈಸುವುದರ ಮೂಲಕ ಸಕಲ ಇಷ್ಟಾರ್ಥಗಳೂ ಸಿದ್ಧಿಸುವುದು ಎಂಬ ಪೂರ್ಣ ಭರವಸೆ, ನಂಬುಗೆ ಭಕ್ತ ಕೋಟಿಗಿದೆ. ಆದ್ದರಿಂದಲೇ ಭಾರತಾದ್ಯಂತ ಇಂದು ಸಂತೋಷಿಮಾತೆಯ ಪೂಜಾ-ವ್ರತಗಳು "ನಿಷ್ಠೆ-ನಿಯಮಗಳೊಂದಿಗೆ ಶಾಸ್ತ್ರೋಕ್ತ ರೀತಿಯಲ್ಲಿ ನಡೆದು ಬರುತ್ತಿದೆ. ಮಹಾ ಗಣಪತಿಯ ಪ್ರೀತಿಯ ಪುತ್ರಿಯಾದ ರೀತಿಯಲ್ಲಿ ತ್ರಿಮೂರ್ತ್ಯಾತ್ಮ ರೂಪಿಣಿಯರ ಸರ್ವ ಗುಣಗಳೂ, ಸಕಲಶಕ್ತಿಗಳೂ ಇವೆ ಎಂಬುದೇ ಭಕ್ತರ ನಿರ್ಧಾರಿತ ವಿಶ್ವಾಸ.

ನಿಷ್ಠೆ-ನಿಯಮಗಳೊಂದಿಗೆ, ಶದ್ಧೆ-ಭಕ್ತಿಯಿಂದ ಪೂಜಿಸುವ ಭಕ್ತರಿಗೆ ಯಾವ ರೀತಿ ಬಾಧೆಯೂ ಇರದು. ತ್ರಯ-ತಾಪಗಳು ಕಾಡವು. ಶತೃ ಭಯ ಇರದು. ರೋಗ-ರುಜಿನಗಳು ಸಂಭವಿಸವು. ಗ್ರಹಬಾಧೆಗಳಿಂದ ದೂರವಾಗುವರು, ವಿಯೋಗ-ವಿರಹಾದಿ ಸಂಕಟದಿಂದ ಮುಕ್ತರಾಗುವರು, ಕನ್ನಿಕೆಯರಿಗೆ ಬೇಗ ಉತ್ತಮ ವರ ಪ್ರಾಪ್ತಿ [illegible] ಉದ್ಯೋಗ ಇಲ್ಲದವರಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಉದ್ಯೋಗಗಳು ದೊರಕುವುವು. ಮಕ್ಕಳಿಲ್ಲದವರಿಗೆ ಮಕ್ಕಳಾಗುವುವು, ಕಲಹ ಗಳು ದೂರವಾಗುವುವು. ಧನಕನಕ ಸಂಪತ್ತು ಶ್ರೀ ವೃದ್ಧಿಸುವುದು, ಸುಖ, ಶಾಂತಿ, ಸಂಪತ್ತು ಶಾಶ್ವತವಾಗಿ ಉಳಿಯುವುದು.

ಹೀಗೆ ಸಂತೋಷಿಮಾತೆಯ ಮಹಿಮೆ ಅತೀತ, ಅಪಾರ ಭಕ್ತರ ಬಗ್ಗೆ ನಗೆಯ ಕೃಪೆ ಆಶೀರ್ವದಲಿಂತೋದ್ಧಾರ, ದೀನರ ದುಃಖ ನಿವಾರಣೆಯೇ ಈಕೆಯ ದಿನಚರಿ, ಬಡವ-ಬಲ್ಲಿದ, ಮುದುಕರು-ಮಕ್ಕಳು, ಸ್ತ್ರೀ-ಪುರುಷರು ಸರ್ವರೂ ಈಕೆಯ ಆರಾಧನೆಗೆ ಅರ್ಹರು. ಆರಾಧನೆಗೆ ಮುಖ್ಯವಾಗಿ ಬೇಕಾದ ಕಾಣಿಕೆ ಎಂದರೆ ಭಕ್ತಿ-ಭಾವುಕತೆ, ಭಾವ-ತನ್ಮಯತೆ ಇಷ್ಟಿದ್ದರೆ ಸಾಕು, ಸರ್ವರೂ ಮಾತೆಯ ಮಮತೆಗೆ, ತಾಯಿಯ ಕರುಣೆಗೆ ಪಾತ್ರರಾಗದಿರರು.

ವ್ರತ-ನಿಯಮಾವಳಿಗಳು :—

ಸಂತೋಷಿ ಮಾತೆಯ ವ್ರತ ನಿರತರೆನಿಸುವವರ ಮೊದಲ ಅರ್ಹತೆ ಎಂದರೆ ನಿರ್ಮಲ ಹೃದಯ, ನಿಷ್ಕಲ್ಮಷ ಮನಸ್ಸು, ಆತ್ಮ ನಿವೇದನೆ, ವ್ರತ ಮಾಡುವವರು ಮುಂಜಾನೆಯೇ ಎದ್ದು ಸ್ನಾನಾಹ್ನಿಕಗಳನ್ನು ಮುಗಿಸಿ, ದೇಹ ಹಾಗೂ ಚಿತ್ತಶುದ್ಧಿಯನ್ನು ಪಡೆದಿರಬೇಕು. ಪೂಜೆ-ಪುರಸ್ಕಾರಗಳಿಗೆ ಬೇಕಾದ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಳ್ಳಬೇಕು. ಯೋಗ್ಯ ಬ್ರಾಹ್ಮಣೋತ್ತಮರಿಂದ ವ್ರತ ಕಾರ್ಯವನ್ನು ಪೂರೈಸಬೇಕು.

ಈ ವ್ರತವನ್ನು ಹದಿನಾರು ಶುಕ್ರವಾರಗಳಲ್ಲೂ ನಿರಾತಂಕವಾಗಿ ನಡೆಸ ಬೇಕು. ಸಂಕಲ್ಪ ಸಿದ್ಧಿಯ ನಂತರ ಉದ್ಯಾಪನೆಯ ಪರ್ವವನ್ನು ಸಂಭ್ರಮ ದಿಂದ ಆಚರಿಸಬೇಕು ಆಕಸ್ಮಾತ್ ವ್ರತಾಚರಣೆಯ ಕಾರ್ಯಗಳು ನಡೆಯು ತ್ತಿರುವಾಗ ಆಕಸ್ಮಿಕ ಅಡಚಣೆಗಳು ಉಂಟಾದರೆ ವ್ರತವನ್ನು ನಿಲ್ಲಿಸಬಾರದು. ಯೋಗ್ಯರೆನಿಸಿದ ಬೇರೆ ಯಾರ ಕೈಲಾದರೂ ಮಾಡಿಸಬೇಕು.

ವ್ರತ ಮುಗಿಯುವವರೆಗೂ ಮನೋನೈರ್ಮಲ್ಯಕ್ಕೆ, ಉಪವಾಸಾದಿ ನಿಯಮಗಳಿಗೆ ಬದ್ಧರಾಗಿರಬೇಕು. ಹಸನ್ಮುಖಿಗಳಾಗಿರಬೇಕು. ಇಲ್ಲದ ಚಿಂತೆಗಳಿಗೆ ಮನಸ್ಸಿನಲ್ಲಿ ಎಡೆ ನೀಡಿರಬಾರದು. ಶುಚಿರ್ಭೂತರಾಗಿ, ಶಾಂತ ಚಿತ್ತರಾಗಿ, ಶ್ರದ್ಧೆಯಿಂದ ವ್ರತ-ನಿಯಮಗಳನ್ನು ಪರಿಪಾಲಿಸಬೇಕು. ವ್ರತ

Sri Vidyabharathi Book Centre, Sringeri

CC-O. In Public Domain. Digitized by eGangotri

ವನ್ನು ಮಾಡುವ ಸಮಯದಲ್ಲಿ ಬೇಸರಿಸಬಾರದು. ಕಾದಾಟ, ಕೂಗಾಟ, ಪರನಿಂದೆ ಮೊದಲಾದ ಕ್ಷುಲ್ಲಕ ವಿಚಾರಗಳಿಗೆ ಗಮನ ಕೊಡದೆ ಸಂತೋಷದ, ಹುರುಪು, ಉಲ್ಲಾಸದ ಮನದೊಂದಿಗಿರಬೇಕು. ವ್ರತ ಆಚರಿಸುವ ದಿನ ಹುಳಿಯನ್ನು ಸೇವಿಸಬಾರದು. ಕೊನೆಯಲ್ಲಿ ಮಾಡುವ ಉದ್ಯಾಪನೆಯ ಅಡಿಗೆಯಲ್ಲೂ ಹುಳಿ ಉಪಯೋಗಿಸಲೇಬಾರದು. ಹಾಗೆ ಉಪಯೋಗಿಸಿದರೆ ವ್ರತಭಂಗವಾದಂತೆಯೇ. ಸಂತೋಷಿ ಮಾತೆಯ ಕೋಪಕ್ಕೆ ಪಾತ್ರ ರಾದಂತೆಯೇ, ಪ್ರತಿ ಶುಕ್ರವಾರವೂ ವ್ರತವನ್ನು ಮಾಡುವಾಗ ಹೋಮಾದಿ ಗಳನ್ನು ನಡೆಸುತ್ತಲೇ ಇರಬೇಕು. ಓಂ ಓಂ ಶ್ರೀ ಸಂತೋಷಿ ಮಹಾಮಾತೇ ಸ್ವಾಹಾ" ಎಂಬ ದ್ವಾದಶಾಕ್ಷರ ಮಹಾಮಂತ್ರವನ್ನು ನೂರೆಂಟು ಬಾರಿ ಜಪಿಸಿ, ಪೂಜಿಸಬೇಕು ಹವನ-ಹೋಮಗಳ ಸಮಯದಲ್ಲಿ ಹಸುವಿನ ತುಪ್ಪವನ್ನೇ ಬಳಸಬೇಕು. ಸವಿಧಿ, ಎಳ್ಳು ಬಳಸುವ ವಸ್ತುಗಳಲ್ಲಿ ಮುಖ್ಯ ಒಂಬತ್ತು ಮಂದಿ ಬಾಲಕ-ಬಾಲಕಿಯರಿಗೆ ಮೃಷ್ಟಾನ್ನ ಭೋಜನ ಮಾಡಿಸಬೇಕು. ಅವರೆಲ್ಲರಿಗೂ ಫಲ ತಾಂಬೂಲ ಕೊಡಬೇಕು. ಬಾಲಕಿಯರು ಕನ್ಯೆಯರೇ ಆಗಿರಬೇಕು. ದಕ್ಷಿಣಾದಿಗಳನ್ನು ಅವರ್‍ಯಾರಿಗೂ ಕೊಡಬಾರದು.

ಉದ್ಯಾಪನೆಯ ದಿನ ಮನೆಯನ್ನು ತಳಿರು-ತೋರಣಗಳಿಂದ ಅಲಂಕರಿಸ ಬೇಕು ರಂಗವಲ್ಲಿ ಸ್ಮರಣೆಯ ಕಾರ್ಯವನ್ನು ಶ್ರದ್ಧೆಯಿಂದ ಮಾಡಿ ಮುಗಿಸ ಬೇಕು. ಸಂತೋಷಿಮಾತೆಯ ಪಟವನ್ನಿಟ್ಟು, ವಿವಿಧ ರೀತಿಯಲ್ಲಿ ಶಕ್ತ್ಯಾನು ಸಾರ ಭಕ್ತಿ ಸ್ಫೂರ್ತಿಸುವಂತೆ ಅಲಂಕಾರ ಮಾಡಬೇಕು. ಆ ದಿನವೂ ಕೂಡ ಕನ್ಯೆಯರಿಗೆ, ಬ್ರಾಹ್ಮಣೋತ್ತಮರಿಗೆ ಶಕ್ತ್ಯಾನುಸಾರ ಭೋಜನದ ವ್ಯವಸ್ಥೆ ಇರಬೇಕು. ಹುಳಿಯನ್ನು ಉಪಯೋಗಿಸಿರಬಾರದು.

ಇಷ್ಟೇ ಅಲ್ಲದೆ ಮಾನಸಿಕ ವಿಕಾರತೆಗೆ ಅವಕಾಶವನ್ನು ಕೊಡುವ ಮಾಂಸ ಮದ್ಯಗಳನ್ನು ಬಳಸಬಾರದು. ಸದಾಚಾರ ಹಾಗೂ ಸತ್ಯ-ಧರ್ಮಪರಾಯಣತೆಗೆ ನಿಷ್ಠೆ ನೀಡಬೇಕು. ಈ ನಿಷ್ಠೆ ಕರ್ತೃವಿನಲ್ಲೇ ಅಲ್ಲದೆ ಮನೆ ಮಂದಿ ಎಲ್ಲರಲ್ಲೂ ತುಂಬಿರಬೇಕು. ಯಾರೊಬ್ಬರೂ ಅರಿಷಡ್ವರ್ಗಗಳಿಗೆ ಬಲಿಯಾಗಬಾರದು.

ವ್ರತಾಚರಣೆಯ ದಿನ ಶುಕ್ರವಾರವೇ ಆಗಿರಬೇಕು. ಆ ದಿನ ಕರ್ತೃ ಅಂದರೆ ವ್ರತ [illegible] ಅಶಕ್ತರಾದವರು

Sri Vidyabharathi Book Centre, Sringeri

CC-O. In Public Domain. Digitized by eGangotri

ಒಪ್ಪತ್ತು ಏನಾದರೂ ಸಾತ್ವಿಕ-ಸಪ್ಪೆ ಆಹಾರವನ್ನು ಸೇವಿಸಬಹುದು. ಅಡಿಗೆ ವಸ್ತುಗಳಾದರೆ ಉಪ್ಪು, ಹುಳಿ, ಖಾರ ಏನನ್ನೂ ಬಳಸಿರಬಾರದು.

ವ್ರತಾಚರಣೆ ತುಂಬಾ ಸರಳ, ಕಾಲು ಮೀಟರಿನಷ್ಟು ಬಿಳಿಯ ದಾರ ವನ್ನು ತೆಗೆದುಕೊಂಡರೂ ಸಾಕು. ಅದನ್ನು ಇಪ್ಪತ್ತೊಂದು ತುಂಡುಗಳಾಗಿ ಕತ್ತರಿಸಿ, ಆ ತುಂಡು ದಾರಗಳನ್ನು ಗಂಟು ಹಾಕಬೇಕು. ಗಂಟು ಹಾಕಿದ ದಾರವನ್ನು ನೀರಿನಲ್ಲಿ ನೆನೆಸಿ, ಅರಿಶಿನದಲ್ಲಿ ಅದ್ದಬೇಕು. ಗಂಡಸರು ಕಂಕಣ ದಂತೆ ಕೈಗೆ ಕಟ್ಟಿಕೊಳ್ಳಬಹುದು. ಹೆಂಗಸರಾದರೆ ಹಾರದ ರೀತಿಯಲ್ಲಿ ಕೊರ ಳಿಗೆ ಹಾಕಿಕೊಳ್ಳಬಹುದು.

ಸಾರಣೆ-ಓರಣೆ ಮಾಡಿ, ರಂಗವಲ್ಲಿ, ತಳಿರು ತೋರಣ, ಬಾಳೆಕಂಬ ಹಾಗೂ ಹೂಮಾಲೆಗಳಿಂದ ಅಲಂಕರಿಸಿದ ಭಾಗದಲ್ಲಿ ಪೂಜಾ ಮಂಟಪವನ್ನು ನಿರ್ಮಿಸಬೇಕು, ಅಲ್ಲಿಯೇ ಕಲಶ ಸ್ಥಾಪನೆ ಮಾಡಬೇಕು. ಅನುಕೂಲವಿದ್ದ ವರು ಕಲಶದ ಮೇಲೆ ತೆಂಗಿನಕಾಯಿ ಇಡುವುದರ ಜೊತೆಗೆ ಅದನ್ನು ರೇಷ್ಮೆ ಬಟ್ಟೆ, ಮೂಗುತಿ ಹಾಗೂ ಬೆ-ಡೋಲೆಯಿಂದ ಅಲಂಕರಿಸಲೂಬಹುದು. ಕಲಶದ ಹಿಂದೆ ಮಹಾಗಣಪತಿ, ಮಹಾವಿಷ್ಣು, ಪಾರ್ವತಿ ಪರಮೇಶ್ವರ, ಲಕ್ಷ್ಮಿ -ಸರಸ್ವತಿಯರ ಭಾವಪಟಗಳನ್ನು ಇಟ್ಟು ಪುಷ್ಪಗಳಿಂದ ಅಲಂಕರಿಸಿ ಪೂಜಿಸಿರ ಬೇಕು. ತದನಂತರ ಕಳಸವನ್ನೇ ಮಾತೆಯೆಂದು ಭಾವಿಸಿ ಗಂಧ, ಹೂವು, ಅರಿಶಿನ-ಕುಂಕುಮ, ಅಕ್ಷತೆ, ಊದುಬತ್ತಿ ಮೊದಲಾದುವುಗಳಿಂದ ಸಾಂಗೋ ಪಾಂಗವಾಗಿ ಪೂಜಾರ್ಚನೆ ಮಾಡಬೇಕು.

ಪೂಜೆಗೆ ಬೆಲ್ಲ ಹುರಿಗಡಲೆ ಮುಖ್ಯ, ಅವೆರಡರಲ್ಲೂ ಸ್ವಲ್ಪ ಭಾಗವನ್ನೂ ವ್ರತಕೈಗೊಂಡವರು ಪೂಜೆ ಮುಗಿಯುವವರೆಗೂ ಕೈಯಲ್ಲಿ ಹಿಡಿದುಕೊಂಡಿದ್ದು ಪೂಜಾ ನಂತರ ಗೋಮಾತೆಗೆ ತಿನ್ನಿಸಬೇಕು. ಮಿಕ್ಕ ಕಡಲೆ-ಬೆಲ್ಲವನ್ನು ಕಳಸದ ಬಳಿಯೇ ಇಟ್ಟಿದ್ದು, ಪೂಜೆ ಮುಗಿದ ಮೇಲೆ ಬಂದಿರುವ ಭಕ್ತಾದಿ ಜನ ರಿಗೆ ಹಂಚಬೇಕು.

ಕೊನೆಯಲ್ಲಿ ಉದ್ಘಾಟನೆಯ ಹಬ್ಬದ ಅಡಿಗೆ ಮಾಡಿ, ಒಂಭತ್ತು ಮಂದಿ ಸೋದರ-ಸೋದರಿಯರಿಗೆ, ಬ್ರಾಹ್ಮಣರಿಗೆ ಉಣಬಡಿಸಬೇಕು. ಯಾವುದೇ ಭಕ್ಷ್ಯ ಭೋಜ್ಯಕ್ಕೂ ಹುಳಿ ಸೋಕಿಸಬಾರದು. ಆ ದಿನ ದೇವಿಯ ಮುಂದೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಪೂಜಾದಿಗಳು, ಅನ್ನ ಸಂತರ್ಪಣೆ, ಸರ್ವರ ಊಟೋಪಚಾರಗಳು ಮುಗಿಯುವ ವರೆಗೂ ತುಪ್ಪದ ದೀಪ ಉರಿಯುತ್ತಿರಬೇಕು.

ವ್ರತಕ್ಕೆ ಬೇಕಾದ ಮುಖ್ಯ ಸಾಮಗ್ರಿಗಳು :

1) ಶ್ರೀ ಸಂತೋಷಿಮಾತೆಯ ಸುಂದರವಾದ ಚಿತ್ರಪಟ, 2) ಶುದ್ಧ ವಾದ ಮಣೆ 3) ಪೂರ್ಣ ಕಳಸ, 4) ಮಾವಿನ ಎಲೆ, 5) ಬಾಳೆಕಂಬ ಗಳು, 6) ತೆಂಗಿನಕಾಯಿಗಳು, 7) ತುಪ್ಪ, 8) ಊದುಬತ್ತಿ, 9) ಹಣ್ಣುಗಳು, 10) ಎಲೆ–ಅಡಿಕೆ, 11) ಕರ್ಪೂರ, 12) ಬೆಲ್ಲ, 13) ಹುರಿಗಡಲೆ, 14) ಅಕ್ಕಿ, 15) ಒಂದು ತಾಮ್ರದ ಬಿಂದಿಗೆಯಲ್ಲಿ ನೀರು 16) ಗಂಧಾಕ್ಷತೆ, 17) ಘಂಟೆ, 18) ಪುಷ್ಪಮಾಲೆ ಹಾಗೂ ಬಿಡಿ ಹೂವು, 19) ಪಂಚಾಮೃತಕ್ಕೆ ಬೇಕಾದ ಸಾಮಾನುಗಳು. ಇವುಗಳಲ್ಲಿ ಅತಿ ಮುಖ್ಯವೆಂದರೆ ಬೆಲ್ಲ, ಹುರಿಗಡಲೆ.

ವ್ರತಾರಂಭ :

ಆಚಮ್ಯದನಂತರ ಪ್ರಾರ್ಥನಾ ಶ್ಲೋಕಗಳನ್ನು ಪಠಿಸಿ, ಪೃಥ್ವೀಪೂಜೆ, ಕಳಸಪೂಜೆಯ ನಂತರ ಘಂಟಾ ಪೂಜೆ, ದೀಪದ ಪೂಜೆಯನ್ನೂ ಮಂತ್ರೋಚ್ಚಾರಣೆಯೊಂದಿಗೆ ಮಾಡಬಹುದು. ವಿಘ್ನೇಶ್ವರನ ಪೂಜೆಯೂ ಮುಗಿದನಂತರ ನವಗ್ರಹ–ದಿಕ್ಪಾಲಕರ ಪೂಜೆ ಮುಗಿಸಿ ಭಕ್ತಿಯಿಂದ ಸಂತೋಷಿಮಾತೆಯ ಅಷ್ಟೋತ್ತರ ಶತನಾಮಾವಳಿಯನ್ನು ಜಪಿಸಬೇಕು—

ಓಂ ಸಂತೋಷಿ ಮಾತೃ ದೇವತಾಯೈ ನಮಃ
ಓಂ ಕಮಲಾಸನಾಯೈ ನಮಃ
ಓಂ ಕಾರುಣ್ಯೈ ನಮಃ
ಓಂ ಕಿಶೋರಿಣ್ಯೈ ನಮಃ
ಓಂ ಕೀರ್ತಿದಾಯೈ ನಮಃ
ಓಂ ಕುಂದರದನಾಯೈ ನಮಃ
ಓಂ ಕೂಟಸ್ಥಾಯೈ ನಮಃ
ಓಂ ಕೇಶವಾರ್ಚಿತಾಯೈ ನಮಃ
ಓಂ ಕೌತುಕಾಯೈ ನಮಃ
ಓಂ ಕಂಬುಕಂಠಾಯೈ ನಮಃ 10
ಓಂ ಖಡ್ಗಧಾರಿಣ್ಯೈ ನಮಃ

Sri Vidyabharathi Book Centre, Sringeri

CC-O. In Public Domain. Digitized by eGangotri

ಓಂ ಗಗನಚಾರಿಣ್ಯೈ ನಮಃ
ಓಂ ಗಂಧಪ್ರಿಯಾಯೈ ನಮಃ
ಓಂ ಗಾಯತ್ರ್ಯೈ ನಮಃ
ಓಂ ಗೀತ ಪ್ರಿಯಾಯೈ ನಮಃ
ಓಂ ಗಾಡಪ್ರಿಯಾಯೈ ನಮಃ
ಓಂ ಗೂಢಾತ್ಮಿಕಾಯೈ ನಮಃ
ಓಂ ಗೋರರೂಪಿಣ್ಯೈ ನಮಃ
ಓಂ ಗೌರ್ಯೈ ನಮಃ
ಓಂ ಘಂಟಾರವಾಯೈ ನಮಃ 20
ಓಂ ಘೋಷಣಾಯೈ ನಮಃ
ಓಂ ಚಂದ್ರಾನನಾಯೈ ನಮಃ
ಓಂ ಚಾಮೀಕರಾಂಗಾಯೈ ನಮಃ
ಓಂ ಚಿತ್ ಸ್ವರೂಪಿಣ್ಯೈ ನಮಃ
ಓಂ ಚೂಡಾಮಣ್ಯೈ ನಮಃ
ಓಂ ಚೇತನಾಯೈ ನಮಃ
ಓಂ ಛಾಯಾಯೈ ನಮಃ
ಓಂ ಜಗದ್ಧಾತ್ರ್ಯೈ ನಮಃ
ಓಂ ಜಾತಿಪ್ರಿಯಾಯೈ ನಮಃ
ಓಂ ಜೀಮೂತನಾದಿನ್ಯೈ ನಮಃ 30
ಓಂ ಜೇತ್ರೇ ನಮಃ
ಓಂ ಜ್ಞಾನದಾಯೈ ನಮಃ
ಓಂ ಝಲ್ಲರೀ ಪ್ರಿಯಾಯೈ ನಮಃ
ಓಂ ಟಂಕಾರ ಪ್ರಿಯಾಯೈ ನಮಃ
ಓಂ ಡಮರು ಪ್ರಿಯಾಯೈ ನಮಃ
ಓಂ ಢಕ್ಕಾವಾದ್ಯ ಪ್ರಿಯಾಯೈ ನಮಃ
ಓಂ ತತ್ತ್ವಸ್ವರೂಪಿಣ್ಯೈ ನಮಃ
ಓಂ ತಾಪಸಪ್ರಿಯಾಯೈ ನಮಃ
ಓಂ ತೀರ್ಥಪ್ರಿಯಾಯೈ ನಮಃ
ಓಂ ತುಷಾರ ಪ್ರಿಯಾಯೈ ನಮಃ 40
ಓಂ ತೂಷ್ಣೀ ಶೀಲಾಯೈ ನಮಃ
ಓಂ ತೇಜಸ್ವಿನ್ಯೈ ನಮಃ
ಓಂ ತ್ರಪಾಯೈ ನಮಃ
ಓಂ ತ್ರಾಣದಾಯೈ ನಮಃ
ಓಂ ತ್ರಿಗುಣಾತ್ಮಿಕಾಯೈ ನಮಃ
ಓಂ ತ್ರ್ಯಂಬಕಾಯೈ ನಮಃ
ಓಂ ತ್ರಯೋಧರ್ಮಾಯೈ ನಮಃ
ಓಂ ದಕ್ಷಾಯೈ ನಮಃ
ಓಂ ದಾಡಿಮಪ್ರಿಯಾಯೈ ನಮಃ
ಓಂ ದಿನಕರಪ್ರಭಾವಾಯೈ ನಮಃ 50
ಓಂ ದೀನಪ್ರಿಯಾಯೈ ನಮಃ
ಓಂ ದುರ್ಗಾಯೈ ನಮಃ
ಓಂ ದೂರ್ವಾಪ್ರಿಯಾಯೈ ನಮಃ
ಓಂ ದೇವಪೂಜಿತಾಯೈ ನಮಃ
ಓಂ ದೈವಜ್ಞಾಯೈ ನಮಃ
ಓಂ ದೋಲಾಪ್ರಿಯಾಯೈ ನಮಃ
ಓಂ ಧೃತಯೇ ನಮಃ
ಓಂ ಧನದಾಯೈ ನಮಃ
ಓಂ ಧರ್ಮಪ್ರಿಯಾಯೈ ನಮಃ
ಓಂ ಧಾತ್ರೇ ನಮಃ 60
ಓಂ ಧೀಮತ್ಯೈ ನಮಃ
ಓಂ ಧೂರ್ತನಾಶಿನ್ಯೈ ನಮಃ
ಓಂ ಧೃತಯೇ ನಮಃ
ಓಂ ಧೈರ್ಯಾಯೈ ನಮಃ
ಓಂ ನಂದಾಯೈ ನಮಃ

Sri Vidyabharathi Book Centre, Sringeri

CC-O. In Public Domain. Digitized by eGangotri

ಓಂ ನಾದಪ್ರಿಯಾಯೈ ನಮಃ
ಓಂ ನಿರಂಜನಾಯೈ ನಮಃ
ಓಂ ನೀತಿದಾಯೈ ನಮಃ
ಓಂ ನುತಿಪ್ರಿಯಾಯೈ ನಮಃ
ಓಂ ನೂತನಾಯೈ ನಮಃ 70
ಓಂ ನೇತ್ರೇ ನಮಃ
ಓಂ ನೈಗಮಾಯೈ ನಮಃ
ಓಂ ಪದ್ಮಜಾಯೈ ನಮಃ
ಓಂ ಪಾಯಸ ಪ್ರಿಯಾಯೈ [ನಮಃ
ಓಂ ಪಿಂಗಳವರ್ಣಾಯೈ ನಮಃ
ಓಂ ಪೀಠಪ್ರಿಯಾಯೈ ನಮಃ
ಓಂ ಪೂಜಾಯೈ ನಮಃ
ಓಂ ಫಲದಾಯೈ ನಮಃ
ಓಂ ಬಹುರೂಪಿಣ್ಯೈ ನಮಃ
ಓಂ ಬಾಲಾಯೈ ನಮಃ 80
ಓಂ ಭಗವತ್ಯೈ ನಮಃ
ಓಂ ಭಕ್ತಪ್ರಿಯಾಯೈ ನಮಃ
ಓಂ ಭಾರತ್ಯೈ ನಮಃ
ಓಂ ಭೀಮಾಯೈ ನಮಃ
ಓಂ ಭೂಷಿತಾಯೈ ನಮಃ
ಓಂ ಭೇಷಜಾಯೈ ನಮಃ
ಓಂ ಭೈರವ್ಯೈ ನಮಃ
ಓಂ ಭಗವತ್ಯೈ ನಮಃ
ಓಂ ಮಂಗಳಾಯೈ ನಮಃ
ಓಂ ಮಾತ್ರೇ ನಮಃ 90
ಓಂ ಮೀನಾಕ್ಷ್ಯೈ ನಮಃ
ಓಂ ಮುಕ್ತಾಮಣಿ ಭೂಷಿತಾಯೈ [ನಮಃ
ಓಂ ಮೂಲಧಾರಾಯೈ ನಮಃ
ಓಂ ಮೇದಿನ್ಯೈ ನಮಃ
ಓಂ ಮೈತ್ರ್ಯೈ ನಮಃ
ಓಂ ಮೋಹಿನ್ಯೈ ನಮಃ
ಓಂ ಮೋಕ್ಷದಾಯಿನ್ಯೈ ನಮಃ
ಓಂ ಮಂದಾರಮಾಲಿನ್ಯೈ ನಮಃ
ಓಂ ಯಶೋದಾಯೈ ನಮಃ
ಓಂ ರಕ್ತಾಂಬರಾಯೈ ನಮಃ 100
ಓಂ ಲಲಿತಾಯೈ ನಮಃ
ಓಂ ವತ್ಸಪ್ರಿಯಾಯೈ ನಮಃ
ಓಂ ಶರಣಾಯೈ ನಮಃ
ಓಂ ಷಟ್ಕರ್ಮಪ್ರಿಯಾಯೈ ನಮಃ
ಓಂ ಸಂಸಿದ್ಧ್ಯೈ ನಮಃ
ಓಂ ಸಂತೋಷಿಣ್ಯೈ ನಮಃ
ಓಂ ಹಂಸಪ್ರಿಯಾಯೈ ನಮಃ
ಓಂ ಸಂತೋಷಿಮಾತೃದೇವತಾಯೈ [ನಮಃ 108]

ಬ್ರಾಹ್ಮಣ ಶ್ರೇಷ್ಠರಾದವರಿಂದ ಅಷ್ಟೋತ್ತರ ಶತನಾಮಾವಳಿಯನ್ನು ಹೇಳಿಸಲು ಸಾಧ್ಯವಿಲ್ಲದವರು ತಾವೇ ಭಕ್ತಿಯಿಂದ ತಮ್ಮ ಕುಲದೇವತೆಯನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಆರಾಧಿಸುವಂತೆ ಆರಾಧಿಸಲೂಬಹುದು. ಆರಾಧನೆಯಲ್ಲಿ ಮನಃಶುದ್ಧಿ, ಮನಶ್ಶಾಂತಿ, ಮನೋಭಕ್ತಿ ಪ್ರಮುಖವೆಂಬುದನ್ನು ಮರೆಯಬಾರದು.

ಶ್ರೀ ಸಂತೋಷಿ ಮಾತೆಯ ಕಥೆ

ಶ್ರೀ ಸಂತೋಷಿ ಮಾತೆಯ ಕಥೆಗೆ ಮೂಲ ಆಧಾರ "ಗಣೇಶ ಪುರಾಣ" ಗ್ರಂಥವೇ, ಇದೊಂದು ಪ್ರಾಚೀನ ಗ್ರಂಥ, ವಿಘ್ನೇಶ್ವರನ ವಿವಿಧ ಪವಾಡಗಳ, ಜನಹಿತ ಕಲ್ಯಾಣ ಕಾರ್ಯಗಳ ಭವ್ಯ ಭಕ್ತಿ ಭಾವನೆಗಳ ದಿವ್ಯ ಗ್ರಂಥ

ಹಿಂದೊಮ್ಮೆ ನೈಮಿಶಾರಣ್ಯದಲ್ಲಿ ಸೂತ ಪುರಾಣಿಕರಿದ್ದರು, ಪೂಜನೀಯರೆನಿಸಿದ ಇವರು ಸಕಲ ಶಾಸ್ತ್ರ ಪಾರಂಗತರು, ಸರ್ವವಿಚಾರಗಳನ್ನೂ ಲೌಕಿಕ–ಅಲೌಕಿಕ ರೀತಿಯಲ್ಲಿ ತಿಳಿಸುವುದರಲ್ಲಿ ಕಥಾ ಶೈಲಿಯನ್ನು ಅನುಸರಿಸುತ್ತಿದ್ದವರು. ಅಷ್ಟೇ ಸರಳ–ಶಾಂತ–ಸೌಮ್ಯ ಸ್ವಭಾವದವರು. ಒಂದು ಬಾರಿ ಶೌನಕಾದಿ ಮುನಿವರೇಣ್ಯರು ಇವರನ್ನು ಪ್ರಶ್ನಿಸಿದರು "ತ್ರಿಕಾಲ ಜ್ಞಾನಿವರ್ಯರೇ, ಸದಾ ದುಃಖಾದಿ ದಾರುಣತೆಯಲ್ಲೇ ಮುಳುಗಿರುವ ಈ ಮಾನವರು ದುಃಖದಿಂದ ಪಾರಾಗಿ, ಸದಾ ಸಂತೋಷಚಿತ್ತದಿಂದಿರಲು ಯಾವುದೂ ಮಾರ್ಗವೇ ಇಲ್ಲವೇ ?"

ಸೂತ ಮುನಿವರ್ಯರಿಗೆ ಶೌನಕಾದಿಗಳ ಈ ಜಟಿಲ ಪ್ರಶ್ನೆ ಸೂಕ್ತವೆನಿಸಿತು. ಸಾಂದರ್ಭಿಕವೆನಿಸುವಂತೆ ತೋರಿತು. ಅವರು ಹೇಳಿದರು. "ತಮ್ಮ ಪ್ರಶ್ನೆ ಸೂಕ್ತವೆನಿಸಿದೆ, ದುಃಖತಪ್ತನಾಗಿರುವ ಮಾನವನು ಅದರ ಪರಿಹಾರೋಪಾಯದ ಕಡೆ ಆಲೋಚಿಸುವುದೇ ಅಪರೂಪ. ತಮ್ಮೆಲ್ಲರ ಗಮನ ಈ ವಿಚಾರದ ಕಡೆ ಹರಿದಿರುವುದು ಸುಕೃತ, ಶುಭ ಸೂಚಕ ಸಂತೋಷದಿಂದಿರುವವನಿಗೆ ಸದಾ ಶಾಂತಿ–ಸೌಖ್ಯ ಲಭಿಸುತ್ತದೆ. ಉತ್ತಮ ಲೋಕವೂ ಸದ್ಗತಿಯ ರೂಪದಲ್ಲಿ ದೊರೆಯುತ್ತದೆ. ನಾವೆಲ್ಲರೂ ಇದಕ್ಕಾಗಿಯೇ ಸಂತೋಷದಿಂದಿರಲು ಪ್ರಯತ್ನಿಸುತ್ತಿರಬೇಕು.

ಸೂತ ಮುನಿಗಳ ಮುದ್ದಾದ ಮಾತು ಶೌನಕಾದಿಗಳನ್ನು ಆಕರ್ಷಿಸಿತು. ಅವರು ಮತ್ತಷ್ಟು ಕುತುಹಲದಿಂದ ಕೆರಳಿದವರಂತೆ ಪ್ರಶ್ನಿಸಿದರು—"ಸಕಲ ಶಾಸ್ತ್ರ ಪಾರಂಗತರೇ, ತಮ್ಮ ಸಲಹೆ ನಮ್ಮೆಲ್ಲರಿಗೂ ಸೂಕ್ತ ಎನಿಸಿದೆ. ಆದರೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂತಹ ಸಂತೋಷವನ್ನು ಪಡೆಯಲು ನಾವು ಯಾವ ದೇವತೆಯನ್ನು ಆರಾಧಿಸಬೇಕು ? ಅವರು ಯಾರು ? ಸ್ವಲ್ಪ ವಿವರವಾಗಿ ತಿಳಿಸಬೇಕು."

ಸೂತ ಮುನಿಗಳು ಸಂತೋಷಚಿತ್ತರೆನಿಸಿ ಹೇಳತೊಡಗಿದರು. ಸಾವಧಾನವಾಗಿ ಕೇಳಿ ತುಂಬಾ ಹಿಂದೆ ಕೈಲಾಸ ಪುರಿಯಲ್ಲಿ ಶ್ರಾವಣ ಶುದ್ಧ ಪೌರ್ಣಮಿಯ ಶುಕ್ರವಾರ ಪರಮೇಶ್ವರನ ಔರಸ ಪುತ್ರಿಯಾದ ಮಾನಸಾದೇವಿ ಎಂಬ ನಾಗಕನ್ನಿಕೆಯು ತನ್ನ ಸೋದರನಾದ ವರಸಿದ್ಧಿ ವಿನಾಯಕನಿಗೆ ರಕ್ಷಾಬಂಧನದ ಕುರುಹಾಗಿ ರಕ್ಷೆಯನ್ನು ಕಟ್ಟಿದಳು. ಇದನ್ನು ಆಸಕ್ತಿಯಿಂದ ನೋಡುತ್ತಿದ್ದ ಗಣಪನ ಮಕ್ಕಳಾದ ಕ್ಷೇಮ-ಲಾಭ ಎಂಬುವವರು ತಮಗೂ ರಕ್ಷಾ ಸೂತ್ರವನ್ನು ಕಟ್ಟಲು ಕಾಡಿಸಿ-ಪೀಡಿಸತೊಡಗಿದರು. ಮಾನಸಾದೇವಿಗೆ ಮಕ್ಕಳೆಂದರೆ ಸ್ವಭಾವತಃ ಮುದ್ದು. ಅವರಿಬ್ಬರನ್ನೂ ಅಪ್ಪಿ, ಮುದ್ದಾಡುತ್ತಾ ಹೀಗೆ ಹೇಳಿದಳು. "ಮುದ್ದು ಮಕ್ಕಳಿರಾ, ರಕ್ಷಾ ಸೂತ್ರವನ್ನು ನಾನು ನಿಮಗೆ ಕಟ್ಟಬಾರದು. ಅದನ್ನು ಸೋದರಿಯರು ಸೋದರರಿಗೆ ಮಾತ್ರ ಕಟ್ಟುವುದು ಧರ್ಮ ಸಂಗತಿ."

ಈಗ ತುಂಟ ಗಣಪತಿಯ ತುಂಟ ಮಕ್ಕಳಾದ ಅವರಿಬ್ಬರೂ ತಂದೆಯ ಬಳಿಗೇ ಬಂದರು. ತಂದೆಯ ಸೊಂಡಿಲಮೇಲೆ ತಮ್ಮ ಪುಟ್ಟ ಪುಟ್ಟ ಕೋಮಲವಾದ ಕೈಗಳನ್ನು ಆಡಿಸುತ್ತಾ ಕೇಳಿ ಪ್ರಾರ್ಥಿಸಿಕೊಂಡರು. "ಅಪ್ಪಾಜಿ, ನಮಗೆ ಜೀವನದಲ್ಲಿ ಸೋದರಿ ಇಲ್ಲದೆ ತುಂಬಾ ಬೇಸರ ಆಗಿದೆ. ನೀನೆಷ್ಟಾದರೂ ನಮ್ಮಿಬ್ಬರ ಪ್ರೀತಿಯ ಅಪ್ಪ, ನಮಗಾಗಿ ಒಬ್ಬ ಸುಂದರ ಸೋದರಿಯನ್ನು ಕರುಣಿಸಲಾರೆಯಾ ?"

ಮೋದ ಪ್ರಿಯನಾದ ಗಣಪನಿಗೆ ಮಕ್ಕಳ ಮಾತು ಹಿತವೆನಿಸಿತು. ಅವರನ್ನು ಪ್ರೀತ್ಯಾದರದಿಂದ ನೋಡತೊಡಗಿದ. ನೋಡುತ್ತಿದ್ದಂತೆ ಅವನ ಪಿಳಿ ಪಿಳಿ ಕಣ್ಣುಗಳಿಂದ ತಂಪನೆಯ ಸೊಂಪಿನ ಬೆಳಕು ಹೊರ ಹೊಮ್ಮಿತು. ಆ ಬೆಳಕು ಅಲ್ಲಿಯೆ ಇದ್ದ ಕಮಲದಲ್ಲಿ ಸೇರಿತು, ಸೇರುತ್ತಿದ್ದಂತೆ ಆ ಕಮಲ ಕುಸುಮ ಷೋಡಶ ವರ್ಷದ ಸುಂದರ ಸದ್ಬುದ್ಧಿಯ ಕುಮಾರಿಯ ರೂಪ ತಾಳಿತು. ಚತುರ್ಭುಜೆ ಎನಿಸಿದ ಆಕೆ ಒಂದು ಕೈಲಿ ಖಡ್ಗ ಹಿಡಿದಿದ್ದಳು,

Sri Vidyabharathi Book Centre, Sringeri

CC-O. In Public Domain. Digitized by eGangotri

ಇನ್ನೊಂದು ಕೈಯಲ್ಲಿ ಶೂಲ ಮತ್ತೊಂದು ಕೈಯಲ್ಲಿ ಸುವರ್ಣ ಕಲಶ, ನಾಲ್ಕನೆಯ ಕೈ ಎಲ್ಲರಿಗೂ ಅಭಯ ನೀಡುವ ಹಸ್ತದಂತೆ ಕಂಡಿತು. ಮುಖದಲ್ಲಿ ಮಂದಹಾಸದ ಚಿರ ಮಿನುಗು, ಸಂತೋಷದ ಅಲೆ-ಅಲೆಗಳ ತೇಜಸ್ಸು ನೆರೆದಿದ್ದ ಯಕ್ಷ, ಗಂಧರ್ವ, ಕಿನ್ನರ, ದೇವತೆಗಳಾದಿಯಾಗಿ ಸರ್ವರೂ ಇಂತಹ ಮಾತೆಯ ಸಂತೋಷದ ಮುಖ ಕಮಲವನ್ನು ಕಂಡು ಆನಂದಿಸಿದರು. ನುತಿಸುತ್ತಾ ನಲಿದಾಡಿದರು. "ಸಂತೋಷಿ ಮಾತಾ" ಎಂಬ ಉದ್ಗಾರ ಸರ್ವರ ಬಾಯಿಂದಲೂ ಒಂದೇ ಬಾರಿಗೆ ಬಂದಿತು. ಲಾಭ-ಕ್ಷೇಮರ ಮುಂದೆ ನಿಂತಿದ್ದ ಆ ಮಾತೆ ಸಕಲ ವಿಚಾರವನ್ನೂ ತಿಳಿದ ಪ್ರಾಜ್ಞೆಯಂತೆ ಅವರಿಬ್ಬರಿಗೂ ತಾನೇ ಸಂತೋಷದಿಂದ ರಕ್ಷೆಯ ಸೂತ್ರ ಕಟ್ಟಿದಳು. ಎಲ್ಲೆಲ್ಲೂ "ಜೈ ಸಂತೋಷಿ ಮಾತಾ" "ನಮೋ ನಮೋ ಸಂತೋಷೀ ಮಾತಾ" ಎಂಬ ಜಯ ಘೋಷ ಮಂಡಾರರವದಲ್ಲಿ ಮಾರ್ಮುಡಿಸತೊಡಗಿತು.

ಸುರ ಮುನಿಜನರ ನಡುವೆ ತ್ರಿಲೋಕ ಸಂಚಾರಿಗಳೂ, ತ್ರಿಕಾಲ ಜ್ಞಾನಿಗಳೂ ಆದ ನಾರದರೂ ಇದ್ದರು. ಅವರು ಸಲಹೆ ನೀಡಿದರು. "ನಮ್ಮ ವಿಘ್ನ ವಿನಾಶಕನಾದ ಗಣಪತಿಯ ತನುಜೆ ಎನಿಸಿರುವ ಈ ಕುಮಾರಿ ನಿಜಕ್ಕೂ ಸಕಲಗುಣ ಸಂಪನ್ನಳೇ ಅಲ್ಲದೆ ಸರ್ವಶಕ್ತಿ ಧಾರಿಣಿಯೂ ಎನಿಸಿದ್ದಾಳೆ. ಆದ್ದರಿಂದ ಲಾಭ-ಕ್ಷೇಮಂದಿರಿಗೆ ಸಂತೋಷ ನೀಡಿದಂತೆ ಮೂಜಗದಜನರಿಗೂ ಸಂತೋಷವನ್ನು ಕರುಣಿಸಿ ಸಂತೋಷವನ್ನು ಸತತವೂ ಕೊಡುವ ಮಾತೆಯೇ ಆಗಿರಲಿ. ಈಕೆಗೆ ಇಟ್ಟಿರುವ ಹೆಸರೂ ಸಹ ಅನ್ವರ್ಥ ಹಾಗೂ ಸಾರ್ಥಕನಾಮವಾಗಿ ಉಳಿಯಲಿ. ಶುಕ್ರವಾರದ ದಿನಗಳಲ್ಲಿ ನಿಷ್ಠೆ-ನಿಯಮಗಳಿಂದ ಈಕೆಯನ್ನು ಪೂಜಿಸುವ ರಾಜ-ರಂಕ, ಬಡವ-ಬಲ್ಲಿದರೆಲ್ಲರಿಗೂ ಈಕೆ ಅವರ ಮನೋಭಿಲಾಷೆಗಳನ್ನು ಈಡೇರಿಸುತ್ತಿರಲಿ.

ಸೂತ ಮುನಿಗಳ ವ್ಯಾಖ್ಯಾನ ಶೌನಕಾದಿ ಮುನಿಗಳಿಗೆ ಅತುಲನೀಯ ಆನಂದವನ್ನೇ ನೀಡಿತು. ಅವರು ಮರು ಪ್ರಶ್ನಿಸಿದರು. "ಹಿರಿಯರೇ ತಾವು ಈಕೆಯ ಜನ್ಮ ವೃತ್ತಾಂತದ ಬಗ್ಗೆ ತುಂಬಾ ಸ್ವಾರಸ್ಯವಾಗಿ ತಿಳಿಸಿದಿರಿ. ಆದರೆ ಈಕೆಯ ವ್ರತವನ್ನು ಆಚರಿಸುವ ಕಟ್ಟಳೆಗಳ ಬಗ್ಗೆಯೂ ಕೃಪೆ ಮಾಡಿ ತಿಳಿಸಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸೂತ ಮುನಿಗಳು ಸ್ವಭಾವತಃ ಪರಹಿತಾಕಾಂಕ್ಷಿಗಳು, ಲೋಕ ಕಲ್ಯಾಣ ಕರ್ತರು, ಅದೇ ಮಂದಹಾಸದೊಂದಿಗೆ ತಮ್ಮ ವ್ಯಾಖ್ಯಾನವನ್ನು ಮುಂದುವರಿಸಿದರು. "ಶೌನಕಾದಿ ಮುನಿ ಪುಂಗವರೇ, ಈ ಮಾತೆಯ ವ್ರತ ವಿಧಾನದ ವಿಧಿ ನಿಯಮಗಳು ತುಂಬಾ ಸರಳ. ಸದ್ಭಾವನೆಯ, ಸಹೃದಯದ, ಸನ್ನಡತೆಯ ಸಜ್ಜನರು ಯಾರು ಬೇಕಾದರೂ ಈ ವ್ರತವನ್ನು ಕೈಗೊಳ್ಳಬಹುದು. ಈ ವ್ರತಾಚರಣೆಗೆ ಚೈತ್ರ ಮಾಸದಿಂದ ಫಾಲ್ಗುಣ ಮಾಸದವರೆಗೆ ಯಾವಾಗ ಬೇಕೆನಿಸಿದರೂ ಅವಕಾಶ ಮಾಡಿಕೊಳ್ಳಬಹುದು. ಜ್ಯೇಷ್ಠ, ಆಷಾಢ, ಪುಷ್ಯ ಮಾಸಗಳು ಮಾತ್ರ ಈ ವ್ರತಾಚರಣೆಗೆ ಸರಿಯಾದ ಕಾಲವಲ್ಲ. ಮಿಕ್ಕ ಒಂಭತ್ತು ತಿಂಗಳುಗಳಲ್ಲಿ ಎಂದೇ ಬೇಕಾದರೂ, ಯಾರೇ ಆದರೂ ವ್ರತಾಚರಣೆ ಮಾಡಬಹುದು. ಶುಕ್ರವಾರದಂದೇ ಸದಾ ಈ ವ್ರತವನ್ನು ಆಚರಿಸುತ್ತಿರಬೇಕು. ಮೂರು ವಾರಗಳಿಂದ ಹಿಡಿದು ಇಪ್ಪತ್ತೊಂದು ಶುಕ್ರವಾರಗಳವರೆಗೆ ಎಷ್ಟಾದರೂ ವ್ರತಗಳನ್ನೂ ಮಾಡಬಹುದು. ವ್ರತದ ದಿನ ಕಟ್ಟುನಿಟ್ಟಿನ ನಿಷ್ಠೆ ನಿಯಮಗಳ ಶ್ರದ್ಧೆ-ಭಕ್ತಿ ಅತ್ಯಗತ್ಯ. ಅಂದು ಸಂಪೂರ್ಣವಾಗಿ ದೈಹಿಕ ಸುಖಾದಿಗಳನ್ನು ಮರೆಯಬೇಕು. ಉಪವಾಸವಿರಬೇಕು, ವೃದ್ಧರೂ, ಶಕ್ತಿ, ಹೀನರೂ ಆದವರು ಹುಳಿಯಿಲ್ಲದ ಸಾತ್ವಿಕ ಆಹಾರಗಳನ್ನು ವ್ರತಾನಂತರ ಉಪಯೋಗಿಸಬಹುದು. ಹಾಸಿಗೆ ಮೊದಲಾದವುಗಳ ಉಪಯೋಗ ಅಂದು ನಿಷೇಧ. ಜಗಳ, ಕದನ, ಪರನಿಂದೆ ಮೊದಲಾದ ಮನೋವಿಕಾರಗಳಿಗೆ ಎಡೆ ನೀಡಬಾರದು.

ಮುಂಜಾನೆಯೇ ಪ್ರಾತಃರ್ವಿಧಿ ಹಾಗೂ ಸ್ನಾನಾಹ್ನಿಕಗಳನ್ನು ಮುಗಿಸಿ, ಶುದ್ಧ ಚಿತ್ತರೆನಿಸಿ, ಶುಭ್ರವಸ್ತ್ರಧಾರಿಗಳಾಗಿ ಪೂಜಾಭವನಕ್ಕೆ ಬರಬೇಕು ಎತ್ತರದ ಜಾಗದಲ್ಲಿ ಸಂತೋಷಿಮಾತೆಯ ಸುಂದರ ಮುಖಪಟವನ್ನಿಟ್ಟು ಪತ್ರ ಪುಷ್ಪಾದಿಗಳಿಂದ ಅಲಂಕರಿಸಬೇಕು. ಆ ಪಟದ ಮುಂದೆ ಪೂರ್ಣ ಕಳಶವನ್ನಿಟ್ಟು, ಎಣ್ಣೆಯ ದೀಪಗಳಿಂದ ಬೆಳಗಿಸಬೇಕು. ತದನಂತರ ಆಚಮನ, ಸಂಕಲ್ಪ ಮುಗಿಸಿ, ಮಹಾ ವಿಘ್ನೇಶ್ವರನಿಗೆ ಅಗ್ರಪೂಜೆ ಸಲ್ಲಿಸಬೇಕು. ಕಲಶಪೂಜೆ ನೆರವೇರಿಸಬೇಕು ನವಗ್ರಹ ಹಾಗೂ ದಿಕ್ಪಾಲಕರ ಪೂಜೆಯ ನಂತರ ಇನ್ನೊಂದು ಕಲಶದ ಮೇಲೆ ಪಾತ್ರೆಯನಿಟ್ಟು ಅದರಲ್ಲಿ ಹುಂಗಡಲೆ ಬೆಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ತುಂಬಿಟ್ಟು, ಭಕ್ತಿಯಿಂದ ಮಾತೆಯನ್ನು ಪ್ರಾರ್ಥಿಸಿಕೊಳ್ಳಬೇಕು. ಪೂಜಾ ಕರ್ತೃ ವ್ರತಮುಗಿಯುವವರೆಗೂ ಕೈಯಲ್ಲಿ ಕಡಲೆ, ಬೆಲ್ಲ ಹಿಡಿದಿದ್ದು, ವ್ರತದ ನಂತರ ಅದನ್ನು ಗೋವಿಗೆ ತಿನ್ನಿಸಬೇಕು. ಕಲಶ ಪೂಜೆಯನಂತರ ಶ್ರದ್ಧೆಯಿಂದ ಕಥೆಯನ್ನು ಹೇಳಿಸಿ, ಶ್ರವಣ ಮಾಡಬೇಕು.

ಕಥಾ ಶ್ರವಣದ ನಂತರ ಮತ್ತೆ ಪೂಜೆ ಮಾಡಿ, ಪ್ರಸಾದವನು ಮೂರು ಭಾಗಗಳಲ್ಲಿ ವಿಂಗಡಿಸಬೇಕು. ಒಂದು ಭಾಗವನ್ನು ವ್ರತವನ್ನು ನೆರವೇರಿಸಿಕೊಟ್ಟ ಬ್ರಾಹ್ಮಣನಿಗೆ, ಇನ್ನೊಂದು ಭಾಗವನ್ನು ಗೋಮಾತೆಗೆ ತಿನ್ನಿಸಬೇಕು. ಮೂರನೆಯ ಭಾಗದ ಕಡಲೆ-ಬೆಲ್ಲವನ್ನು ನೆರೆದಿರುವ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗದ ರೂಪದಲ್ಲಿ ನೀಡಬೇಕು. ಇಷ್ಟೆಲ್ಲಾ ಆದ ನಂತರವೇ ಮನೆಯವರು ಪ್ರಸಾದವನ್ನು ಸ್ವೀಕರಿಸಬೇಕು. ವ್ರತಾಚರಣೆಯ ಸಮಯದಲ್ಲ ಕರ್ತೃ ಪರಿಜನರೊಂದಿಗೆ ಆನಂದೋತ್ಸಾಹದಿಂದ ಕೂಡಿರಬೇಕು. ಮುಖದಲ್ಲಿ ಮ್ಲಾನತೆ, ಮೌನ, ಖೇದ ಮೊದಲಾದ ಕಲಂಕ ಕಲುಷಿತ ಭಾವನೆಗಳು ಇರಬಾರದು. ಅಭೀಷ್ಟ ಪೂರ್ಣತೆಯ ನಂತರ ವ್ರತೋದ್ಯಾಪನೆ ಅತ್ಯಗತ್ಯ. ಉದ್ಯಾಪನೆಯ ದಿನ ಬ್ರಾಹ್ಮಣ, ಮುತ್ತೈದೆ ಹಾಗೂ ಎಂಟು ಮಂದಿ ಮಕ್ಕಳಿಗಾದರೂ ಮೃಷ್ಟಾನ್ನ ಭೋಜನ ಮಾಡಿಸಬೇಕು, ಎಲ್ಲರಿಗೂ ಊಟದ ನಂತರ ಫಲ–ಪುಷ್ಪ–ವಸ್ತ್ರಾದಿಗಳನ್ನು ನೀಡಿ ಸತ್ಕರಿಸಬೇಕು, ದಕ್ಷಿಣೆಯ ರೂಪದಲ್ಲಿ ಯಾರಿಗೂ ದುಡ್ಡು–ಕಾಸು ಕೊಡಬಾರದು. ಕೊಟ್ಟ ಹಣದಿಂದ ಯಾರಾದರೂ ಹುಳಿ ತಿಂಡಿ ತಿಂದಿರಬಹುದೆಂಬ ಸಂದೇಹಕ್ಕೆ ಅವಕಾಶ ಕೊಡಬಾರದು ಮರುದಿನ ಬೇಕಾದರೆ ಊಟೋಪಚಾರ ನಡೆಸಿ, ದಕ್ಷಿಣೆ ನೀಡಬಹುದು. ಹೀಗೆ ಈ ವ್ರತವನ್ನು ಶ್ರದ್ಧೆ–ಭಕ್ತಿಯಿಂದ ಲೋಪವಿಲ್ಲದಂತೆ ಮಾಡಿದರೆ ಕೈಗೊಂಡವರ ಸಕಲ ಇಷ್ಟಾರ್ಥಗಳೂ ಈಡೇರುವುದರ ಜೊತೆಗೆ ಲೋಕ ಕಲ್ಯಾಣವೂ ಉಂಟಾಗದಿರದು."

ಶೌನಾಕದಿ ಮುನಿಗಳಿಗೆ ವ್ರತ-ನಿಯಮಾವಳಿಗಳ ಬಗ್ಗೆ ತಿಳಿದು ಮತ್ತಷ್ಟು ಹರ್ಷ ಉಂಟಾಯಿತು. ಈಗ ಮತ್ತೊಂದು ಪ್ರಶ್ನೆ ಸೂತ ಮುನಿವರ್ಯರ ಮುಂದೆ ಇಟ್ಟರು. "ಶಾಸ್ತ್ರಾದಿಗಳ ತಜ್ಞರೇ, ತಮ್ಮಿಂದ ಸಂತೋಷಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾತೆಯ ವ್ರತ ನಿಯಮಗಳನ್ನು ತಿಳಿದು ಸಂತೋಷಪಟ್ಟಿದ್ದೇವೆ. ಕೃಪೆ ಮಾಡಿ ಈ ಮಹಾ ಮಾತೆಯ ಮಹಿಮೆಯ ಬಗ್ಗೆಯೂ ವಿವರವಾಗಿ ತಿಳಿಸಿ."

ಸೂತ ಮುನಿಗಳು ಈಗ ಸಂತೋಷಿಮಾತೆಯ ಮಹಾತ್ಮೆಯನ್ನು ತದೇಕ ಚಿತ್ತದಿಂದ ತಿಳಿಸತೊಡಗಿದರು. "ತುಂಬಾ ಹಿಂದೆ ಕಾಶೀನಗರದ ಹಳ್ಳಿಯೊಂದ ರಲ್ಲಿ ಒಬ್ಬಳು ವಿಧವೆ ಇದ್ದಳು, ಆಸ್ತಿಪಾಸ್ತಿ ಜಮೀನಿತ್ತು. ಮನೆಯಲ್ಲಿ ದನ ಕರುಗಳಿದ್ದವು, ದವಸ ಧಾನ್ಯ ತುಂಬಿತ್ತು. ಏಳು ಮಂದಿ ಗಂಡು ಮಕ್ಕಳು, ಕಿರಿಯವನ ವಿನಃ ಮಿಕ್ಕೆಲ್ಲರಿಗೂ ಮದುವೆ ಆಗಿತ್ತು. ಕಿರಿಯವನು ಎಲ್ಲರ ದೃಷ್ಟಿಯಲ್ಲೂ ಪೆದ್ದ. ಅವನ ಬಗ್ಗೆ ಎಲ್ಲರಿಗೂ ತಾತ್ಸಾರವೇ, ಬೇಸರವೇ. ಆದರೂ ಜನ ನಿಂದೆಯಿಂದ ಪಾರಾಗಲು ಅವನಿಗೂ ಒಬ್ಬ ಹಳ್ಳಿಯ ಪೆದ್ದಿ ಯನ್ನೇ ಹುಡುಕಿ ಮದುವೆ ಮಾಡಿದಳು. ಪೆದ್ದನ ಹೆಸರು ಪದ್ಮನಾಭ ಪೆದ್ದಿಯ ಹೆಸರು ಪದ್ಮಾವತಿ. ಪದ್ಮನಾಭನಿಗೆ ದೇವರ ನಾಮವನ್ನು ಹಾಡುವು ದೆಂದರೆ ತುಂಬಾ ಆಸೆ. ಹಾಡುಗಾರಿಕೆಯನ್ನು ಶಾಸ್ತ್ರೋಕ್ತವಾಗಿ ಕಲಿಯ ದಿದ್ದರೂ ರಾಗವಾಗಿ, ಅರ್ಥಪೂರ್ಣವಾಗಿ ಹಾಡುವ ಕಲೆ ಇವನಿಗೆ ಒಲಿದು ಬಂದಿತ್ತು. ಎಲ್ಲರೂ ಇವನ ಇಂಪಾದ, ದನಿಗೂಡಿದ ಹಾಡನ್ನು ಕೇಳಿ ಮೈ ಮರೆಯುತ್ತಿದ್ದರು.

ಆದರೆ ಮನೆಯಲ್ಲಿ ಇವನು ಯಾರಿಗೂ ಬೇಡದ ಕಸ. ಅವನ ಹೆಂಡತಿ ಎಲ್ಲರ ಪಾಲಿಗೂ ನಾಯಿ ಮುಟ್ಟಿದ ತಟ್ಟೆ. ತೌರು ಮನೆಯಿಂದ ಬಂದಂದಿ ನಿಂದಲೂ ಪದ್ಮಾವತಿ ಅತ್ತೆ, ಅತ್ತಿಗೆ, ನಾದಿನಿ, ಭಾವಂದಿರ ಮೂದಲಿಕೆಯ ಮಾತುಗಳಿಗೆ ಸಿಕ್ಕಿಹಾಕಿಕೊಂಡಿದ್ದಳು. ಚಿಗುರು ಯೌವನದ ಈ ಕುಮಾರಿಗೆ ಇಲ್ಲಿನ ವ್ಯವಹಾರ ಕಸಿವಿಸಿ ಎನಿಸಿತ್ತು. ಈ ಮನೆಯಲ್ಲಿ ನನಗಂತೂ ಯಾವ ಸ್ಥಾನ-ಮಾನವೂ ಇಲ್ಲ, ಗೌರವ-ಆದರ ಇಲ್ಲ, ಆದರೂ ಚಿಂತೆ ಇಲ್ಲ. ಆದರೆ ನನ್ನ ಅವರು ಎಷ್ಟಾದರೂ ಮನೆಯ ಮಗನಲ್ಲವೇ ? ತಾಯಿಗೆ ಮಗನಲ್ಲವೇ ? ಏಕೆ ದಿನವೂ ಇವರೆಲ್ಲರೂ ತಿಂದುಂಡ ಎಂಜಲು ಅನ್ನವನ್ನೇ ನಮ್ಮಿಬ್ಬರಿಗೂ ಬಡಿಸುತ್ತಾರೆ ? ಮನೆಯವರೆಲ್ಲರಿಗೂ ಮೈತುಂಬಾ ಬಟ್ಟೆ, ನಮಗೆ ಮಾತ್ರ ಛಿದ್ರ-ಚಿಂದಿ ... ಮಂದಿಗೆಲ್ಲಾ ಹೆಚ್ಚು

Sri Vidyabharathi Book Centre, Sringeri

CC-O. In Public Domain. Digitized by eGangotri

ದುಡಿಯುವವರು, ಬೆವರು ಸುರಿಸುವವರು ಗಾಣದ ಎತ್ತಿನ ಹಾಗೆ ಹಗಲಿರುಳೂ ಶ್ರಮಿಸುವವರು. ಆದರೆ ಹೊಟ್ಟೆ ತುಂಬಾ ಅನ್ನ ಇಲ್ಲ, ಮೈ ಮುಚ್ಚುವಷ್ಟು ಬಟ್ಟೆ ಇಲ್ಲ. ನನಗೇನೇ ಅವಮಾನವಾದರೂ ಸಹಿಸಿಕೊಂಡಿರಬಲ್ಲೆ, ಎಷ್ಟಾದರೂ ನಾನು ಇವರ ದೃಷ್ಟಿಯಲ್ಲಿ ಹೊರಗಿನಿಂದ ಬಂದವಳು. ಆದರೆ ನನ್ನ ಇವರು ? ಮನೆ ಮಗನಾಗಿ, ಮೈ ಮುರಿದು ದುಡಿದರೂ ಇಷ್ಟೊಂದು ಅವಹೇಳನ ದೃಷ್ಟಿಗೆ ಗುರಿಯಾದರೇ !

ಮನೆ ಮುಂದೆ ಇದ್ದ ಮುರುಕು ಗೋಡೆಯಮೇಲೆ ಬೆರಣಿ ತಟ್ಟುತ್ತಾ ಯೋಚಿಸುತ್ತಿದ್ದಂತೆ ಸ್ತ್ರೀ ಸಹಜ ಸ್ವಭಾವದಂತೆ ಕಣ್ಣಂಚುಗಳಲ್ಲಿ ನೀರು ತುಂಬಿತು. ಸಗಣಿ ಕೈಯಿಂದಲೇ ಕಣ್ಣೊರಸಿಗೊಂಡಳು. ನಿಟ್ಟುಸಿರು ಬಿಡತೊಡಗಿದಳು. ಅದೇ ವೇಳೆಗೆ ಪದ್ಮನಾಭ ಅಲ್ಲಿಗೆ ಬಂದ ಹೆಂಡತಿಯ ಕಣ್ಣುಗಳಲ್ಲಿ ಕಣ್ಣೀರು ಕಂಡ. ಹೆಂಡತಿಯ ಕಣ್ಣಿನ ಕಣ್ಣೀರು ಅವನ ಮನಸ್ಸನ್ನು ಕೆಂಡದಂತೆ ಸುಡತೊಡಗಿತು. ಗಾಬರಿ ಹದ್ದು ಮೀರಿತು.

"ಯಾಕೇ ಪದ್ಮೂ, ಪೆದ್ದಿಯಂತೆ ಹೀಗೆ ಅಳುತ್ತಿದ್ದೀ ?" ಎಂದು ತನ್ನ ಪೆದ್ದತನವನ್ನೇ ತಿಳಿಯದೆ ಮುಗ್ಧ ಮಗುವಿನಂತೆ ವಿಚಾರಿಸಿದ.

ಗಂಡನ ಲೋಕವ್ಯವಹಾರವನ್ನೇ ತಿಳಿಯದ ಹಾಲಿನಂತಹ ಮನಸ್ಸನ್ನು ಕಂಡು ಪದ್ಮಾವತಿಯ ಮನ ಮತ್ತಷ್ಟು ಮರುಗಿತು. ಕೊರಗಿ–ಸೊರಗಿತು. ನಿಟ್ಟುಸಿರು ನಿಂತು ಅಳುವಿನ ಬಿಕ್ಕು ಪ್ರಾರಂಭಿಸಿತು. ಮನೋವ್ಯಾಕುಲವನ್ನು ತಡೆಯಲಾರದೆ ಅವನ ಎದೆಯ ಮೇಲೆ ಮುಖವಿಟ್ಟು, ಸಗಣಿ ಕೈಗಳನ್ನು ಹಿಂದಕ್ಕೆ ತೆಗೆದುಕೊಂಡು, ಬಿಕ್ಕಿ ಬಿಕ್ಕಿ ಅಳತೊಡಗಿದಳು. ಪದ್ಮನಾಭನಿಗೋ ಪರಮಾಶ್ಚರ್ಯ. ಅವಳನ್ನು ಪ್ರೀತ್ಯಾದರಗಳಿಂದ ಅಪ್ಪಿಕೊಂಡು ಕಳಕಳದಿಂದ ಕೇಳಿದ—"ಏಯ್, ನಿನಗೇನಾಗಿದೆಯೇ ? ಯಾಕೆ ಹೀಗೆ ಬೆಳಿಗ್ಗೆ ಎದ್ದವಳೇ ಅಳುತ್ತಿದ್ದೀ ?" ಅವನ ಅಂತರಂಗ ಅವನಾಕೆಯ ಹೃದಯದ ಬಾಗಿಲು ತಟ್ಟಿತು.

ಅಳುವಿನ ಬಿಕ್ಕಳಿಕೆಯನ್ನು ತಡೆಯಲು ಯತ್ನಿಸುತ್ತಾ ಪದ್ಮಾವತಿ ಹೇಳಿ

Sri Vidyabharathi Book Centre, Sringeri

CC-O. In Public Domain. Digitized by eGangotri

ದಳು—"ನೀವು ಬೇಗ ಯಾವ ಮಾತಿಗೂ ಕೋಪ ಮಾಡಿಕೊಳ್ಳುತ್ತೀರಿ. ನೀವು ಕೋಪ ಮಾಡಿಕೊಳ್ಳದೆ ಶಾಂತಚಿತ್ತರಾಗಿ ಕೇಳುವುದಾದರೆ ನಾನು ಧೈರ್ಯವಾಗಿ ಹೇಳುತ್ತೇನೆ." ಇನ್ನೂ ಬಿಕ್ಕಳಿಕೆ ಬರುತ್ತಲೇ ಇತ್ತು.

ಪದ್ಮನಾಭನಿಗೆ ಹೆಂಡತಿಯ ಮಾತನ್ನು ಕೇಳುತ್ತಿದ್ದಂತೆ ಕುತೂಹಲ ಕೆರಳಿತು, ಆಸಕ್ತಿ ಹೆಚ್ಚಿತು. ಅವಳ ಕೆದರಿದ ತಲೆಗೂದಲನ್ನು ನೇವರಿಸುತ್ತಾ, ಎದೆಯಲ್ಲೇ ಹುದುಗಿದ್ದ ಬಾಡಿದ ಮೊಗದ ಬೆದರುಗಣ್ಣುಗಳನ್ನೇ ನೋಡುತ್ತಾ ಹೇಳಿದ—"ಇಲ್ಲ, ಧೈರ್ಯವಾಗಿ ಹೇಳು ಏಕಿಷ್ಟು ಖಿನ್ನಳಾಗಿರುವೆ ? ಬಿಕ್ಕುವಂತಹ ಬಿಕ್ಕಟ್ಟು ಈ ಮನೆಯಲ್ಲಿ ನಿನಗೇನು ಕಂಡು ಬಂತು ?"

ಪದ್ಮಾವತಿ ಸ್ವಲ್ಪ ಧೈರ್ಯ ತಂದುಕೊಂಡು, ಮೃದುವಾಗಿ ತೇವದ ಕಣ್ಣುಗಳಿಂದಲೇ ಕನಿಕರದಿಂದ ತನ್ನ ಗಂಡನ ಕಡೆ ನೋಡುತ್ತಾ ಹೇಳಿದಳು. "ಈ ಮನೆಯಲ್ಲಿ ನನಗೇನೇ ಅವಮಾನವಾಗಲಿ, ಹೇಗಾದರೂ ಮಾಡಿ ಸಹಿಸಿಕೊಂಡಿರಬಲ್ಲೆ. ಆದರೆ ನನ್ನ ಹೃದಯದಲ್ಲಿ ನೆಲೆಸಿರುವ ನಿಮಗೂ ಅವಮಾನವಾದರೆ ನಾನು ಹೇಗೆ ತಾನೇ ಸಹಿಸಿಕೊಂಡಿರಬಲ್ಲೆ ?"

ಪದ್ಮನಾಭನಿಗೆ ಪದ್ಮಾವತಿಯ ಮಾತು ಒಗಟಾಗಿ ತೋರಿತು. ಬಿಡಿಸದ ಸಮಸ್ಯೆಯಂತೆ ಕಂಡುಬಂದಿತು. ಆದರೂ ಸಾವಧಾನದಿಂದ ಅವಳ ಮಾತನ್ನು ಆಲಿಸುತ್ತಾ ಹೇಳಿದ—"ಪದ್ಮಾ, ತಿಳಿಸುವ ವಿಚಾರವನ್ನು ಮುಚ್ಚುಮರೆ ಇಲ್ಲದೆ ತಿಳಿಸಬಾರದಾ ? ನಿನಗಾಗಲಿ, ನನಗಾಗಲಿ ಈ ಮನೆಯಲ್ಲಿ ಆಗುತ್ತಿರುವ ಅವಮಾನವಾದರೂ ಏನು ? ಹೇಳಲು ಏಕೆ ಹೀಗೆ ಅನುಮಾನಿಸುತ್ತಿರುವೆ ? ನನ್ನ ಬಳಿ ಹೇಳಲೂ ನಿನಗೆ ಇಷ್ಟೊಂದು ಅಳುಕೇಕೆ ?"

ಪದ್ಮಾವತಿಗೆ ಈಗ ಇನ್ನೂ ಧೈರ್ಯ ಮಾತಾಡಲು ಬಂತು. ದೇವರೇ ಗತಿ ಅಂದುಕೊಂಡು ಮನಸ್ಸಿನಲ್ಲಿದ್ದ ಮಾತನ್ನು ಮುಚ್ಚಿಡದೆ ತಿಳಿಸಿದಳು. "ಈ ಮನೆಯಲ್ಲಿ ನಮ್ಮಿಬ್ಬರನ್ನೇ ಎಲ್ಲರೂ ಕಸಕ್ಕಿಂತಲೂ ಕೀಳಾಗಿ ಕಾಣುತ್ತಿದ್ದಾರೆ. ಈ ಮನೆಮಂದಿಯಲ್ಲಿ ವೈಮನಸ್ಯ ಕಾಲುಂಡು ಹರಡಿಕೊಂಡು ದುಡಿಯುತ್ತಿರುವವರು

Sri Vidyabharathi Book Centre, Sringeri

CC-O. In Public Domain. Digitized by eGangotri

ನಾವಿಬ್ಬರೇ. ಆದರೂ ಅವರೆಲ್ಲರಿಗೂ ಅಂದವಾದ ಬಟ್ಟೆಗಳು, ನಮಗೆ ಮಾತ್ರ ಹರುಕು ಚಿಂದಿ, ಊಟದಲ್ಲೂ ಅಷ್ಟೆ ಮನೆಮಂದಿ ಎಲ್ಲಾ ಮಾಡಿ ಮುಗಿಸಿದ ನಂತರ ಮಿಕ್ಕ ಎಂಜಲು ಎಲೆಗಳುಗಳನ್ನು ಕೂಡಿಸಿ ನಮಗೆ ಬಡಿಸುವರು. ಇದನ್ನು ನಾನಂತೂ ಮನೆಯನ್ನು ಮುರಿಯಲು ಇಷ್ಟಿಸದೆ ಸಹಿಸಿಕೊಂಡಿರಬಲ್ಲೆ. ಆದರೆ ನೀವೂ ತಿನ್ನುವುದನ್ನು ನಾನು ಹೇಗೆ ತಾನೇ ನೋಡಿಕೊಂಡಿರಲಿ ? ಸಹಿಸಿಕೊಂಡಿರಲಿ ? ಸುಮ್ಮನಿರಲಿ ? ಬೇಕಾದರೆ ನೀವೇ ಎಂದಾದರೂ ಪರೀಕ್ಷೆ ಮಾಡಿನೋಡಿ."

ನಿಜಕ್ಕೂ ಪದ್ಮನಾಭನಿಗೆ ತನ್ನ ಪತ್ನಿ, ಪದ್ಮಾವತಿಯ ಮಾತುಗಳನ್ನು ಕೇಳುತ್ತಿದ್ದಂತೆ ತಲೆಯ ಮೇಲೆ ಸಿಡಿಲೆರಗಿದಂತಾಯಿತು. ಎಲ್ಲಿಲ್ಲದ ಕೋಪ ಬಂತು. ಮನೆಮಂದಿಯ ಮೇಲಲ್ಲ. ಕೈಹಿಡಿದ ಮಡದಿಯ ಮೇಲೆ. "ಏನಂದೆ? ನನ್ನ ಹೆತ್ತ ತಾಯಿ ನನಗೆ ಇಂತಹ ಮೋಸ ಮಾಡುತ್ತಾಳಾ ? ಮಕ್ಕಳನ್ನು ವಂಚಿಸುತ್ತಾಳಾ ? ನೀನೇ ಈ ಮನೆಯಿಂದ ನನ್ನನ್ನು ಬೇರೆ ಕರೆದುಕೊಂಡು ಹೋಗಲು ಈ ರೀತಿ ಹೊಂಚು ಹಾಕುತ್ತಿಲ್ಲ ತಾನೇ ? ಇರಲಿ, ನಾನೇ ಪ್ರತ್ಯಕ್ಷವಾದರೂ ಪ್ರಮಾಣಿಸಿನೋಡುತ್ತೇನೆ. ನಿನ್ನ ಮಾತು ಸುಳ್ಳೇನಾದರೂ ಆಗಿದ್ದರೆ ಆಗಲೇ ನಿನ್ನ ತಲೆ ಕತ್ತರಿಸಿ ನಮ್ಮೂರ ದೇವತೆ ಬಲಿಕೊಡುತ್ತೇನೆ." ಎಂದು ಅಬ್ಬರಿಸುತ್ತಾ ಎದೆಗೆ ಅಪ್ಪಿದ್ದ ಪದ್ಮಾವತಿಯನ್ನು ಎದೆಯ ಮೇಲೆ ಹಾವು ಹರಿದಾಡಿತೇನೋ ಎನ್ನುವಂತೆ ಅತ್ತ ಎಸೆದು, ಹೊರಟು ಹೋದನು. ಮೊದಲೇ ಕಂಗೆಟ್ಟಿದ್ದ ಪದ್ಮಾವತಿ ಕಸಿವಿಸಿಗೊಂಡಳು. ಮುಂದೆ ಏನು ಅಪಾಯ ಉಂಟಾಗುವುದೋ ಎಂದು ಕನವರಿಸಿ, ಮತ್ತೆ ಕಣ್ಣೀರು ಸುರಿಸ ತೊಡಗಿದಳು.

ಅಂದು ದೀಪಾವಳಿ ಹಬ್ಬ. ಹಳ್ಳಿಯಲ್ಲೆಲ್ಲಾ ಮನೆ ಮುಂದೆ ದೀಪಗಳ ಸಾಲುಗಳು ಸಾಲಂಕೃತಗೊಂಡಿದ್ದುವು. ವಿಧವೆಯ ಮನೆಯೂ ವೈಭವದಿಂದ ಕೂಡಿತ್ತು. ವಿವಿಧ ಸಿಹಿತಿಂಡಿಗಳ ವಾಸನೆ ಮೂಗು ಬಡಿಯುತ್ತಿತ್ತು. ಲಾಡು, ಜಿಲೇಬಿ, ಕಜ್ಜಾಯ ತಟ್ಟೆಗಳಲ್ಲಿ ಸೇರಿಸಲ್ಪಟ್ಟಿದ್ದುವು. ಪದ್ಮನಾಭ ಯಾರಿಂಗೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಣದಂತೆ ಊಟದ ಫಡಶಾಲೆಯ ಬಾಗಿಲ ಹಿಂದೆ ಅವಿತು ನಿಂತ. ನಡೆಯ ಬಹುದಾದ ಘಟನೆಗಳನ್ನು ಕಣ್ಣಲ್ಲಿ ಕಣ್ಣಿಟ್ಟು ವೀಕ್ಷಿಸತೊಡಗಿದ. ಮಧ್ಯಾಹ್ನದ ವೇಳೆ ಆಯಿತು. ಊಟದ ಸಮಯ ಬಂತು. ತಾಯಿ ಎಂದಿನಂತೆ ಪದ್ಮನಾಭ ಪದ್ಮಾವತಿಯರ ವಿನಹ ಎಲ್ಲರನ್ನೂ ಮುದ್ದಾಗಿ ಹೆಸರು ಹಿಡಿದು ಕೂಗುತ್ತಾ ಊಟಕ್ಕೆ ಕರೆದಳು. ಬೇಡ ಬೇಡವೆಂದರೂ ಮತ್ತು ಮತ್ತಷ್ಟು ಭಕ್ಷ್ಯಗಳನ್ನು ಪ್ರೀತಿಯ ಮಾತುಗಳೊಂದಿಗೆ ಉಣಬಡಿಸಿದಳು. ಸೊಗಡಸ್ತಾಗಿ ಊಟ ನಡೆದ ನಂತರ ಅಷ್ಟಷ್ಟು ಎಲೆಗಳಲ್ಲೇ ಬಿಟ್ಟು, ಎಲ್ಲರೂ ಕೈತೊಳೆದುಕೊಳ್ಳಲು ಹೊರ ಬಂದರು. ಕೈತೊಳೆದುಕೊಂಡರು. ಮನೆಯ ಸೊಸೆಯರು ವೀಳೆ-ಅಡಿಕೆ ತಾಂಬೂಲದ ಪೆಟ್ಟಿಗೆಯೊಂದಿಗೆ ತಮ್ಮ ತಮ್ಮ ಇನಿಯಂದಿಕ ಬಳಿಗೆ ಸಡಗರ ಸಂಭ್ರಮದೊಂದಿಗೆ ಸಾಗಿದರು.

ವಿಧವೆ ಎಲೆಗಳಲ್ಲಿದ್ದ ಎಂಜಲು ಲಾಡು ಪುಡಿಗಳನ್ನೆಲ್ಲಾ ಒಟ್ಟುಗೂಡಿಸಿದಳು. ಗುಂಡಗೆ ಲಾಡು ಮಾಡಿದಳು. ಅದೇ ರೀತಿ ಎಂಜಲು ತಿಂಡಿಗಳನ್ನೇ ಇನ್ನೊಂದು ಎಲೆಯ ಮೇಲೆ ಜೋಡಿಸಿದಳು, ಎಂಜಲೆಲೆಗಳನ್ನು ಎತ್ತಿಹಾಕಿ, ಕಿರಿಯ ಮಗನನ್ನು ಕರೆದಳು. "ಲೋ ಪೆದ್ದಾ, ಎಲ್ಲಿ ಹಾಳಾಗಿ ಹೋದ್ಯೋ? ಬಂದು ತಿಂದು ಎಲ್ಲಾದ್ರು ಹೋಗೋ ಉಂಡಾಡಿ ಗುಂಡಾ."

ಬಾಗಿಲ ಮರೆಯಲ್ಲೇ ನಡೆದ ಘಟನೆಗಳನ್ನೆಲ್ಲಾ ಕಣ್ಣಾರೆ ವೀಕ್ಷಿಸಿದ. ತಾಯಿಯ ಹೃದಯ ಹೀನ ಮಾತುಗಳನ್ನು ಕಿರಿಯ ಮಗ ಆಲಿಸಿದ. ಅವನಿಗೆ ಅಮ್ಮನ ಬಗ್ಗೆ ಅಸಹ್ಯ ಭಾವನೆ ಮೂಡಿತು. ಮನೆಯ ಬಗ್ಗೆಯೇ ಮನಸ್ಸು ಬೇಸರಗೊಂಡಿಂತು. ನಿಧಾನವಾಗಿ ಬಾಗಿಲ ಮರೆಯಿಂದ ಹೊರ ಬಂದ. ಬಾಡಿದ, ನೊಂದ-ಬೆಂದ ಮನದ ಭಾವವನ್ನು ಮುಖದಲ್ಲಿ ಮೂಡಿಸುತ್ತಾ ಹೇಳಿದ. "ಅಮ್ಮ ನನಗೆ ಈ ಊಟವೂ ಬೇಡ, ಈ ಮನೆಯೂ ಬೇಡ. ನಾನೇ ದೂರ ಎಲ್ಲಿಗಾದರೂ ಹೋಗಿ, ದುಡಿಮೆ ಮಾಡುತ್ತೇನೆ. ನಿಮ್ಮೆಲ್ಲರ ಕೀಳು ದೃಷ್ಟಿ ಇನ್ನು ನಮ್ಮಿಬ್ಬರ ಮೇಲೆ ಬೀಳದಿದ್ದರೆ ಸಾಕು."

ವಿಧವೆಗೆ ರೇಗಿ ಹೋಯಿತು. "ಏನೋ ಇದ್ದೂ, ಹಬ್ಬದ ದಿನ ನಿನ್ನ

Sri Vidyabharathi Book Centre, Sringeri

CC-O. In Public Domain. Digitized by eGangotri

ರಾದ್ಧಾಂತ ? ಇದೆಲ್ಲಾ ಆ ಚಂಡಾಲೀನೇ ಕಲಿಸಿಕೊಟ್ಟಳೋ, ಇಲ್ಲವೇ ನೀನೇ ಕಲಿತುಕೊಂಡು ಬಂದೋ ? ಹೋಗೋ, ಎಲ್ಲಿ ಹಾಳಾಗಿ ಹೋಗ್ತಿಯೋ ಹೋಗೋ. ಆ ನಿನ್ನ ರಾಣೀನೂ ಕರೆಕೊಂಡೇ ಹೋಗೋ ಇಲ್ಲಿ ಏನೂ ಹೋಗಲ್ಲ." ಎಂದು ಮೂಗು-ಮೂತಿ ತಿರುಗಿಸಿದಳು.

ಪದ್ಮನಾಭನಿಗೆ ತಾಯಿ ನಿಜಕ್ಕೂ ಉರುಮಾರಿಯಂತೆ ಕಂಡಳು ಆದರೂ ತಾಳ್ಮೆಗೆಡದೆ ಹೇಳಿದ. "ಸಾಕಮ್ಮಾ, ನಿನ್ನ ಬಾಯಿಂದ ಬಂದ ಮಾತುಗಳೇ ಮಾತೃವಾತ್ಸಲ್ಯ ಹೇಗಿದೆ, ಎಷ್ಟಿದೆ ಎಂಬುದನ್ನು ಸಾಬೀತು ಪಡಿಸುತ್ತಿದೆ. ನನಗೆ ಯಾರೂ ಏನೂ ಹೇಳಿ ಕೊಟ್ಟಿಲ್ಲ. ಹಾಗೆಲ್ಲಾ ಹೇಳಿ ಕೊಟ್ಟರೂ. ಕಲಿಯುವ ದಡ್ಡ ನಾನಲ್ಲ. ನನ್ನ ಹೆಂಡತಿಯನ್ನೂ ಈಗಲೇ ಕರೆದುಕೊಂಡ, ಹೋದರೆ ಜನ ನಿನ್ನನ್ನೇ ನಿಂದಿಸುತ್ತಾರೆ. ನನ್ನನ್ನೂ ದೂಷಿಸುತ್ತಾರೆ. ಆದ್ದರಿಂದ ಅವಳನ್ನು ಕೆಲಕಾಲ ಇಲ್ಲೇ ಬಿಟ್ಟು ಹೋಗುತ್ತೇನೆ ಹೇಗಾದರೂ ನಿಮಗೆ ಕಸ-ಮುಸುರೆಗಳಿಗೆ ಒಬ್ಬ ಕೆಲಸಗಾತಿ ಬೇಕೇ ಬೇಕಲ್ಲಾ ! ಕೆಲಕಾಲದ ನಂತರ ನಾನೂ ಜನರ ಮುಂತೆ ದುಡಿಯುವವನಂತೆ ನಿಂತು ಅವಳನ್ನೂ ಕರೆದುಕೊಂಡು ಹೋಗುತ್ತೇನೆ." ಎನ್ನುತ್ತಾ ಅಲ್ಲಿ ಅರೆ ಘಳಿಗೆಯೂ ನಿಲ್ಲದೆ ಮನೆಯ ಹೊರಗೆ ಇನ್ನೂ ಮೋಟು ಗೋಡೆಯ ಮೇಲೆ ಸಗಣಿಯನ್ನು ಚಂಡಿನಂತೆ ಗುಂಡು ಮಾಡಿಕೊಂಡು ಬೆರಣಿ ತಟ್ಟುತ್ತಿದ್ದ ಪದ್ಮಾವತಿಯ ಬಳಿಗೆ ಬಂದ.

ಗಂಡನನ್ನು ಈ ರೀತಿ ಎಲ್ಲಿಗೋ ಹೊರಟು ನಿಂತಿರುವುದನ್ನು ಕಂಡು ಪದ್ಮಾವತಿ ಗಾಬರಿಗೊಂಡಳು. ಗಾಬರಿಯ ಕಣ್ಣುಗಳಿಂದಲೇ ಅವನನ್ನು ಎವೆ ಇಕ್ಕದೆ ನೋಡತೊಡಗಿದಳು. ಮಂದಹಾಸದೊಂದಿಗೆ ತನ್ನ ಮುಂದಗ ಮನೆಯ ಕಡೆ ನೋಡುತ್ತಾ ಪದ್ಮನಾಭ ಹೇಳಿದ. "ಪದ್ಮಾ, ನೀನು ಹೇಳುತ್ತಿದ್ದ ಪ್ರತಿಯೊಂದು ಮಾತೂ ಅಕ್ಷರಶಃ ನಿಜ ಎಂದು ಈ ದಿನ ಅರ್ಥ ಮಾಡಿಕೊಂಡೆ ಇನ್ನೊಂದು ಅರೆ ಘಳಿಗೆಯೂ ಈ ಮನೆಯಲ್ಲಿ ನಾನೂ ಇರಲಾರೆ. ಎಲ್ಲಾದರೂ ದೂರ ಹೋಗಿ ದುಡಿಯಲು ಯತ್ನಿಸುತ್ತೇನೆ. ಬೇಗ ನಿನ್ನನ್ನೂ ನನ್ನ ಬಳಿಗೇ ಕರೆಯಿಸಿಕೊಳ್ಳುತ್ತೇನೆ. ಧೈರ್ಯ ತಂದುಕೊಂಡು, ನನಗಾಗಿ ನೀನು

Sri Vidyabharathi Book Centre, Sringeri

CC-O. In Public Domain. Digitized by eGangotri

ಹೇಗಾದರೂ ಈ ನರಕದ ಮನೆಯಲಿಯೇ ಜೀವನ ಸಾಗಿಸುತ್ತಿರು. ದಿನ ಕಳೆಯುತ್ತಿರು.

ಗಂಡನ ಮಾತ-ಗಳನ್ನು ಕೇಳುತ್ತಿದ್ದಂತೆ ಅವಳಿಗೆ ಕರುಳೇ ಬಾಯಿಗೆ ಬಂದಂತಾಯಿತು. ಜೀವನದ ಸುತ್ತಲೂ ಕತ್ತಲೆಯೇ ಕೋಟೆ ಕಟ್ಟುತ್ತಿರುವಂತೆ ಭಾಸವಾಯಿತು ಆದರೂ ದೇವರೇ ತನ್ನ ಗಂಡನಿಗೆ ಸದ್ಬುದ್ಧಿ ಕೊಟ್ಟರ ಬಹುದೆಂದು ಭಾವಿಸಿ, ಸ್ವತಃ ಧೈರ್ಯ ತಂದುಕೊಂಡು ಹಾಗೆಯೇ ಆವನತ್ತ

ಕಣ್ಣರಳಿಸುತ್ತಾ ಹೇಳಿದಳು "ಹೇಗಾದರೂ ನೀವು ಹಿಂದಿರುಗುವವರೆಗೂ ನಾನು ಇಲ್ಲಿಯೇ ದುಃಖದಲ್ಲಿ ಕಾಲ ಹಾಕುತ್ತೇನೆ. ನಿಮ್ಮ ನೆನಪಿಗಾಗಿ ನನಗೆ ಏನಾದರೂ ಕೊಟ್ಟು ಹೋಗಬಾರದಾ ?" ಅವಳ ಕಣ್ಣುಗಳಲ್ಲಿ ಆಶೆ-ಆಕಾಂಕ್ಷೆ ತುಂಬಿ ತುಳುಕಿತ್ತು.

ಪದ್ಮನಾಭನಿಗೆ ತನ್ನ ಪತ್ನಿಯ ಬಗ್ಗೆ ಅಭಿಮಾನ, ಆದರ ವೃದ್ಧಿಸಿತು. ತನ್ನ ಕೈ ಬೆರಳಿನಿಂದ ಉಂಗುರವನ್ನು ಕಳಚಿ, ಅಳವ ಬೆರಳಿಗಿಡುತ್ತಾ ಹೇಳಿದ. "ಪದ್ಮಾ, ನಾನೇನೋ ನೆನಪಿನ ರೂಪದಲ್ಲಿ ನನ್ನಲ್ಲಿದ್ದುದನ್ನು ಕೊಟ್ಟೆ, ನೀನೇನು ಕೊಡುತ್ತೀ ?"

ಪದ್ಮಾಳ ಹೃದಯ ಹಲುಬಿತು, ಮನಸ್ಸು ಮರುಕದಲ್ಲಿ ಹೊಯ್ದಾಡಿತು. ಆದರೂ ಗಂಡನು ಹೊರಟಿರುವ ಸಮಯದಲ್ಲಿ ಅಳು-ಅಳುಕು ಭಾವನೆ ತರ ಕೂಡದೆಂದು ನಿರ್ಧರಿಸಿ, ಮನಸ್ಸನ್ನು ತಾನೇ ಸ್ಥಿಮಿತಕ್ಕೆ ತಂದುಕೊಂಡಳು. ಮತ್ತೆ ಹಾಗೆಯೇ ಗಂಡನ ಕಡೆ ನೋಡುತ್ತಾ ಹೇಳಿದಳು. "ನನ್ನ ಪ್ರೀತಿ ಪ್ರೇಮ ಈ ಎರಡು ಭಾವನೆಗಳೇ ನಿಮಗೆ ಕಾಣಿಕೆ ಇದಕ್ಕಿಂತಲೂ ಮಿಗಿಲಾದುದು ಬೇರೇನೂ ನನ್ನ ಬಳಿ ಇಲ್ಲ. ಆದರೂ ನೆನಪು ಉಳಿದಿರಲು ನೋಡಿ, ನನ್ನ ಹಸ್ತವನ್ನು ನಿಮ್ಮ ಎದೆಯ ಮೇಲೆ ಒತ್ತಿರುತ್ತೇನೆ. ಈ ಗುರುತೇ ಕಡೆಯವರೆಗೂ ನಿಮಗೆ ನನ್ನ ನೆನಪಿನ ಕಾಣಿಕೆ ಆಗಿರಲಿ ಎಂದು ಸಗಣಿ ಕೈಯಿಂದಲೇ ಪದ್ಮನಾಭನ ಎದೆಯ ಮೇಲೆ ನಿಧಾನವಾಗಿ ಒತ್ತಿದಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ಪದ್ಮನಾಭನಿಗೆ ಆನಂದ-ಅಳು ಒಟ್ಟಿಗೆ ಒಮ್ಮೆಲೇ ಉಂಟಾಯಿತು. ತನ್ನ ಮುದ್ದಿನ ಮಡದಿಯನ್ನು ಬರಸೆಳೆದು, ಅಪ್ಪಿ-ಮುದ್ದಾಡಿ, ಬೇಗ ಹಿಂದಿರುಗಿ ಬರುವ ಆಶ್ವಾಸನೆ ನೀಡಿ, ಅಲ್ಲಿಂದ ಗುರಿ ಮುಟ್ಟುವ ಮನಸ್ಸಿನಲ್ಲಿಯೇ ಪ್ರಯಾಣ ಬೆಳೆಸಿದ. ತನ್ನ ಗಂಡ ದೂರದಲ್ಲಿ ಕಾಣಿಸುತ್ತಿರುವವರೆಗೂ ಪದ್ಮಾವತಿ ನೋಡುತ್ತಲೇ ನಿಂತಳು ಅತ್ತೆ "ಏನೇ ಮಾಡ್ತಿದ್ದೀ ?" ಎಂದು ಗತ್ತು ಹಾಕಿದಾಗಲೇ ಅವಳಿಗೆ ಈ ಲೋಕದ ಪರಿವೆ ಉಂಟಾದದ್ದು.

ಬೇಗ-ಬೇಗ ಬೆರಣಿಗಳನ್ನು ತಟ್ಟಿ, ಕಸ ಮುಸುರೆಯ ಕೆಲಸ ಮುಗಿಸುತ್ತಿದ್ದಂತೆ ಅತ್ತೆಯ ಅಬ್ಬರ ಕೇಳಿಸಿತು. "ಇನ್ನೂ ಏನೋ ಮಾಡ್ತಿದ್ದೀ ? ಬೇಗ ಕೈ ತೊಳೆದುಕೊಂಡು ರೊಟ್ಟಿ ತಿಂದು, ಕಾಡಿಗೆ ಹೋಗಿ ಸೌದೆ ಮುರಿದುಕೊಂಡು ಬಾ. ಇಲ್ಲಾ ನಿನ್ನ ಗಂಡನ ದಾರೀಲೇ ನೀನೂ ಹೊರಟುಹೋಗು." ಎಂದು ರೇಗಾಡುತ್ತಾ ಒಣಗಿದ ಆಲದ ಎಲೆಯ ಮೇಲೆ ಒಣಕಲು-ಸೀಕಲು ರೊಟ್ಟಿ ಇಟ್ಟಳು. ತೆಂಗಿನ ಚಿಪ್ಪಿನಲ್ಲಿ ನೀರು ತಂದಿಟ್ಟಳು. ಗಂಡನು ಮರೆಯಾದ ಮೊದಲ ದಿನವೇ ಕಹಿ ಅನುಭವವನ್ನು ಪಡೆದರೂ ತಾಳ್ಮೆಗೆಡಲಿಲ್ಲ. ಗಂಡನಿಗೆ ಅಶುಭ ಆಗದಿರಲೆಂದು ಕಣ್ಣಲ್ಲಿ ನೀರೂ ಹಾಕಲಿಲ್ಲ. ಪಾಲಿಗೆ ಪರಮಾತ್ಮನು ಕೊಟ್ಟಿದ್ದೇ ಪರಮಾನ್ನ ಎಂಬಂತೆ ಬೇಗ ಬೇಗ ರೊಟ್ಟಿ ತಿಂದು ತೆಂಗಿನ ಚಿಪ್ಪಿನಲ್ಲಿಯೇ ನೀರು ಕುಡಿದು, ಒಣಗಿದ ಸೌದೆ ಮುರಿದು ತರಲು ಕಾಡದಾರಿ ಹಿಡಿದಳು.

ಹೀಗೇಯೇ ದಿನಗಳುರುಳಿದವು, ತಿಂಗಳುಗಳು ಕಳೆದುವು, ವರ್ಷಗಳೂ ಮುಗಿದುಹೋದವು. ಪದ್ಮನಾಭನೂ ಹಿಂದಿರುಗಿ ಬರಲಿಲ್ಲ. ಪದ್ಮಾವತಿಗೂ ನರಕಯಾತನೆ ಈ ಮನೆಯಲ್ಲಿ ತಪ್ಪಲಿಲ್ಲ. ಮೈ ಕೈ ತುಂಬಾ ಮೂಳೆಗಳು ಎಣಿಸುವಂತೆ ಕಾಣಿಸತೊಡಗಿದುವು ಕಣ್ಣು ಗುಳಿ ಬೀಳತೊಡಗಿದುವು. ಆದರೂ ತನ್ನ ಗಂಡ ಹಿಂದಿರುಗದೆ ಇರನು ಎಂಬ ಪೂರ್ಣ ಭರವಸೆಯಿಂದ ದಿನಗಳನ್ನು ತಳ್ಳತೊಡಗಿದಳು.

ಇತ್ತ ಪದ್ಮನಾಭ ಹಳ್ಳಿ ಬಿಟ್ಟವನು ಚಾಕರಿ ಹುಡುಕುತ್ತಾ ದೂರ,

Sri Vidyabharathi Book Centre, Sringeri

CC-O. In Public Domain. Digitized by eGangotri

ತುಂಬಾ ದೂರ ಬಂದ ಚಾಕರಿಗಾಗಿ ಅವನು ಸುತ್ತದ ಜಾಗವಿಲ್ಲ. ಕೇಳದ ಬೇಡದ ಜನರಿಲ್ಲ ಇಷ್ಟಾದರೂ ಯಾರೊಬ್ಬರೂ ಅಕ್ಷರ ಜ್ಞಾನವೇ ಇಲ್ಲದ, ಲೋಕಾನುಭವವನ್ನೇ ಕಾಣದ ಈ ಪೆದ್ದನಿಗೆ ಕೆಲಸ ಕೊಡಲು ಮುಂದೆ ಬರಲಿಲ್ಲ ಅಲ್ಲೊಂದು ನಗರ, ನಗರದಾಚೆ ಒಂದು ಪಾಳುಬಿದ್ದ ಪಾರ್ವತಿಯ ದೇಗುಲ· ದಣಿದು ಸಾಕಾಗಿದ್ದ ಪದ್ಮನಾಭನು ಮಾತೆ ಪಾರ್ವತಿಗೆ ನಮಸ್ಕರಿಸುತ್ತಾ ಭಕ್ತಿ ಯಿಂದ ಹಾಡತೊಡಗಿದ. ಹಾಡುತ್ತಿದ್ದಂತೆ ಕಣ್ಣಲ್ಲಿ ನೀರು ಕಿತ್ತು ಬಂತು ಕಣ್ಣೀರಕೋಡಿ ಮಾತೆಯ ಅಡಿದಾವರೆಗಳ ಮೇಲೆ ಹರಿದು ಹೋಯಿತು. ಕುಸಿದು, ತಾಯಿಯ ಪಾದಗಳ ಮೇಲೆ ಪ್ರಜ್ಞೆತಪ್ಪಿಬಿದ್ದ. ಮತ್ತೆ ಕಣ್ಣು ಬಿಟ್ಟಾಗ ಒಬ್ಬ ಸಾಹುಕಾರ ಅವನ ಮೈದಡವುತ್ತಿದ್ದ.

ಪದ್ಮನಾಭನಿಗೆ ಪ್ರಜ್ಞೆ ಬರುತ್ತಿರುವುದನ್ನು ಕಂಡು ಸಾಹುಕಾರನ ಮುಖದಲ್ಲಿ ದಯೆಯ ಭಾವನೆ ಇಣುಕಿತು. ನಿಧಾನವಾಗಿ ವಿಚಾರಿಸಿದ– "ಯಾರಪ್ಪಾ ನೀನು ? ಎಲ್ಲಿಂದ ಬರುತ್ತಿದ್ದೀ ? ಏಕೆ ಹೀಗೆ ಪ್ರಜ್ಞೆತಪ್ಪಿ ಬಿದ್ದಿದ್ದೀ ?"

ಪದ್ಮನಾಭನ ಕಣ್ಣುಗಳು ಮತ್ತೆ ಕಣ್ಣೀರ ಧಾರೆಯನ್ನು ಹರಿಸತೊಡಗಿದವು. ಆದರೂ ಬಿಕ್ಕುತ್ತಾ ತನಗೊದಗಿರುವ ಕಷ್ಟ–ಕಂಟಕಗಳ ಬಗ್ಗೆ ಏನೊಂದನ್ನು ಮುಚ್ಚಿಡದೆ ವರದಿ ಒಪ್ಪಿಸಿದ. ಸಾಹುಕಾರ ಸ್ವಭಾವತಃ ಕರುಣಾಳು, ತಾನೂ ನೊಂದ ಹೃದಯದೊಂದಿಗೆ ಕಣ್ಣೀರು ಸುರಿಸಿದ. ಅವನ ದೊಂದು ದೊಡ್ಡ ಅಂಗಡಿ ಇತ್ತು. ಅದು ನಗರದಲ್ಲೇ ದೊಡ್ಡ ಅಂಗಡಿ. ಆದರೆ ನಂಬಿಕೆಯಿಂದ ಕೆಲಸ ಮಾಡುವ ಆಳು ಕಾಳುಗಳು ದೊರೆಯದೆ ಸಾಕಷ್ಟು ನಷ್ಟವನ್ನು ಅನುಭವಿಸುತ್ತಿದ್ದ. ಇಂತಹ ದುಃಖ ಜೀವಿಯನ್ನು ನೌಕರನನ್ನಾಗಿ ನೇಮಿಸಿಕೊಂಡರೆ ತನಗೆ ತೊಂದರೆ ಕಡಿಮೆಯಾಗುವುದೆಂದು ಭಾವಿಸಿದ. ಎದುರಿಗಿದ್ದ ಮಾತೆ ಪಾರ್ವತಿಯ ವಿಗ್ರಹಕ್ಕೆ ಮನಸ್ಸಿನಲ್ಲಿಯೇ ವಂದಿಸಿದ, ಸ್ತುತಿಸಿದ. ಪದ್ಮನಾಭನನ್ನು ಸಂತೈಸಿ ತನ್ನ ಮನೆಗೆ ಕರೆತಂದ ಅಂಗಡಿಯ ಉಸ್ತುವಾರಿಯನ್ನು ಅವನಿಗೆ ವಹಿಸಿದ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕೆಟ್ಟ ಭಾವನೆಯೇ ಏನೆಂಬುದನ್ನು ಅರಿಯದ ಪದ್ಮನಾಭ ಪ್ರಾಮಾಣಿಕತೆಯಿಂದ, ಮುನ್ನೆಚ್ಚರಿಕೆಯಿಂದ ವ್ಯೈ ಎಲ್ಲಾ ಕಣ್ಣಾಗಿಸಿಕೊಂಡು ಅಂಗಡಿಯ ಆಗು-ಹೋಗುಗಳ ಬಗ್ಗೆ ಗಮನ ಹರಿಸತೊಡಗಿದ. ಅಂಗಡಿಯ ತುಂಬಾ ಇದ್ದ ಕೆಲಸಗಾರರಿಗೆ ಈಗ ತಮ್ಮ ಕುಹಕದ ಕೈ ಚಳಕ ತೋರಿಸಲು ಸಾಧ್ಯವಾಗಲಿಲ್ಲ. ಎಲ್ಲರೂ ಪದ್ಮನಾಭನನ್ನು ಮನಸ್ಸಿನಲ್ಲೇ ನಿಂದಿಸುತ್ತಾ ಕೆಲಸ ಮಾಡತೊಡಗಿದರು ಅಂಗಡಿಯ ಲಾಭ ಈಗ ಮೂರ್ಮಡಿಸಿತು. ಸಾಹುಕಾರನಿಗೂ ಸಂತೋಷವಾಯಿತು. ಪದ್ಮನಾಭನನ್ನು ಅಂಗಡಿಯ ಲಾಭದಲ್ಲಿ ಪಾಲುದಾರನನ್ನಾಗಿ ಮಾಡಿಕೊಂಡ ಪದ್ಮನಾಭನಿಗೆ ಕೆಲಸಗಾರರ ಮೇಲೆ ಎಲ್ಲಿಲ್ಲದ ಕರುಣೆ, ಅವರೆಲ್ಲರೂ ತನ್ನನ್ನು ನಿಂದಿಸುತ್ತಿರುವುದು ತಿಳಿದಿದ್ದರೂ ತಾನು ಅವರನ್ನು ದ್ವೇಷಿಸಲಿಲ್ಲ. ಪ್ರೀತಿಸತೊಡಗಿದ, ಅವರ ಸಂಬಳಗಳನ್ನು ಹೆಚ್ಚಿಸಿದ. ಮನೆ ಮಕ್ಕಳ ಹೊಟ್ಟೆ-ಬಟ್ಟೆಯ ಕಡೆಗೇ ಅಲ್ಲದೆ ವಿದ್ಯಾಭ್ಯಾಸದ ಕಡೆಗೂ ಗಮನ ಹರಿಸತೊಡಗಿದ. ಈಗ ಅವರೆಲ್ಲರಿಗೂ ಪದ್ಮನಾಭ ದೇವರಂತೆಯೇ ತೋರಿದ. ಯಾರೊಬ್ಬರ ಮನದಲ್ಲಿಯೂ ಅವನ ಬಗ್ಗೆ ಈ ದ್ವೇಷ ಮನೋಭಾವನೆ, ತಾತ್ಸಾರ ಮನೋಭಾವನೆ ಉಳಿದಿರಲಿಲ್ಲ. ಪ್ರೀತ್ಯಾದರಗಳ ಪೂಜ್ಯ ಭಾವನೆ ವೃದ್ಧಿಸತೊಡಗಿತು.

ದಿನ ಕ್ರಮೇಣ ಸಾಹುಕಾರ ಅಂಗಡಿಯನ್ನು ಪ್ರಾಮಾಣಿಕನೂ, ಕರ್ತವ್ಯ ನಿಷ್ಠನೂ ಆದ ಪದ್ಮನಾಭನಿಗೇ ಮಾಡಿ, ತಾನು ನೆಮ್ಮದಿಯಿಂದ ಗಳಿಸಿದ್ದ ಹಣದಿಂದಲೇ ಮನೆಯಲ್ಲಿದ್ದು ತನ್ನ ಮಡದಿ ಮಕ್ಕಳ ಯೋಗಕ್ಷೇಮವನ್ನು ನೋಡಿಕೊಳ್ಳತೊಡಗಿದ. ಪದ್ಮನಾಭನೂ ಈಗ ನಿರಕ್ಷರ ಕುಕ್ಷಿ ಆಗಿದ್ದರೂ ವ್ಯವಹಾರ ಚತುರ ನೆನಿಸಿದ್ದ. ಸಮಾಜದ ಬಹುಮುಖಗಳನ್ನು ಚೆನ್ನಾಗಿ ಕಂಡಿದ್ದ. ಆದರೂ ಸಿರಿಸಂಪದ ಇವನಲ್ಲಿ ವೃದ್ಧಿಸಿದಷ್ಟೂ ಸೌದಾರ್ಯ ಹಾಗೂ ದರ್ಯಾದ ಭಾವನೆ ಹೃದಯದಲ್ಲಿ ಬೇರೂರ ತೊಡಗಿದುವು. ಎಲ್ಲೆಲ್ಲೂ ಪದ್ಮನಾಭಾನ ಹೆಸರು ಮನೆ ಮಾತಾಗತೊಡಗಿತು.

ಇತ್ತ ಪದ್ಮಾವತಿ ಕಂಗಾಲಾಗಿ, ಕಂಗೆಟ್ಟು ಎಂದಿನಂತೆ ಅತ್ತೆಯ ಮನೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಲ್ಲಿ ಕಷ್ಟ ಕಾರ್ಪಣ್ಯಗಳಿಗೆ ಸಿಲುಕಿ, ಗಂಡನು ಹಿಂದಿರುಗಿ ಎಂದು ಬಂದಾನೋ ಎಂದು ಕಾದು-ಕಾದು ಬೇಸತ್ತಿದ್ದರೂ ಸಹ ನಿರಾಶಳಾಗಲು ಮನಸ್ಸಾಗಲಿಲ್ಲ. ಕೆಲಸ ಕಾರ್ಯಗಳ ಗಡಿಬಿಡಿಯಲ್ಲಿ ವರೆಕಂತೆ ದುಃಖವನ್ನು ತಳ್ಳುತ್ತಾ ಬರುತ್ತಿದ್ದಳು. ಒಂದು ದಿನ ಕಾಡಿನಲ್ಲಿ ಸೌದೆ ತರಲು ಬಂದಿದ್ದಾಗ ಅಲ್ಲೊಂದು ಗುಂಪು ಕಾಣಿಸಿತು. ಎಲ್ಲರೂ ಹೆಂಗಸರೇ ಅವರ ಮುಖದಲ್ಲಿ ಸಂಭ್ರಾಮ-ಸಡಗರ ಅಲೆಗಳನ್ನು ಎಬ್ಬಿಸುತ್ತಿದ್ದುವು ಹೊಸ ಉಡುಗೆಗಳನ್ನು ಉಟ್ಟಿದ್ದರು. ಹಣೆಯಲ್ಲಿ ಶೋಭಿಸುವ ಸಿಂಧೂರ ಮುಖದಲ್ಲಿ ಅರಿಶಿನದ ಆನಂದ್, ಆಕರ್ಷಣೆ ಬಳಿಯಲ್ಲಿಯೇ ಪೂಜಾ ಸಾಮಗ್ರಿಗಳು. ಇಲ್ಲಿ ಏನು ನಡೆಯುತ್ತಿರಬಹುದು? ಎಂದು ತಿಳಿಯುವ ಕುತೂಹಲದಿಂದಲೇ ಅಲ್ಲಿಗೆ ಧಾವಿಸಿ ಬಂದಳು ಅದೂ ಒಂದು ಪಾಳು ಬಿದ್ದ ಗುಡಿ ಗುಡಿಯೊಳಗೊಂದು ಭವ್ಯಮೂರ್ತಿ. ದೀಪಾಲಂಕಾರದ ಬೆಳಕಿನಲ್ಲಿ ಪ್ರಜ್ವಲಿಸುತ್ತಿತ್ತು. ತಳಿರು-ತೋರಣಗಳ, ಸುಗಂಧ ಬತ್ತಿಗಳ ಸುವಾಸನೆಯಿಂದ ಎಂತಹವರಿಗೂ ಅವ್ಯಕ್ತ ಭಕ್ತಿ ಭಾವನೆಯನ್ನು ಮೂಡಿಸುತ್ತಿತ್ತು.

ನಿಧಾನವಾಗಿ ಅವರ ಬಳಿಗೆ ಬಂದು ಪ್ರಶ್ನಿಸಿದಳು— "ತಾಯಿಗಳಿರಾ, ಈ ಪಾಳುಗುಡಿಯಲ್ಲಿ ನೀವೆಲ್ಲಾ ಏನು ಮಾಡುತ್ತಿದ್ದೀರಿ?"

ಅವರು ಪದ್ಮಾವತಿಯ ಕಡೆಯೇ ನೋಡುತ್ತಾ ಕನಿಕರದಿಂದ ಹೇಳಿದರು-- "ಇದು ಪಾಳುಗುಡಿ ಆದರೂ ಇದರಲ್ಲಿ ನೆಲೆಸಿರುವ ತಾಯಿ ನಿತ್ಯಸುಖಿ, ಚಿರ ಶಾಂತಮೂರ್ತಿ. ಸಂತೋಷವದನೆ, ದುಃಖಿಗಳ ದುಃಖದ ಕೂಗನ್ನು ಎಷ್ಟೇ ದೂರದಲ್ಲಿದ್ದರೂ ಆಲಿಸಿ, ಥಟ್ಟನೆ ಕನಿಕರದಿಂದ ಅವರದ ದುಃಖ ದುಗುಡಗಳನ್ನು ಹೋಗಲಾಡಿಸುವ ಉದಾರ ಮನೋಭಾವಿನಿ. ಈಕೆಯನ್ನು ಕುರಿತೇ ನಾವೆಲ್ಲಾ ಶುಕ್ರವಾದ ದಿನವಾದ ಇಂದು ವ್ರತ ಆಚರಿಸಿದೆವು. ವ್ರತವೂ ಮುಗಿದಿದೆ. ಬಾ ತಂಗಿ, ನೀನೂ ಕೂಡ ತಾಯಿಯ ಪ್ರಸಾದ, ಕಡಲೆ-ಬೆಲ್ಲ ತಿನ್ನು ಎನ್ನುತ್ತಾ ಕಲಶದಲ್ಲಿದ್ದ ಕಡಲೆ ಬೆಲ್ಲದಲ್ಲಿ ಸ್ವಲ್ಪ ಭಾಗವನ್ನು ಅವಳಿಗೂ ಕೊಟ್ಟರು. ಹಸಿದಿದ್ದ ಅವಳಿಗೆ ನೀ ತಾಯಿ ಮಕ್ಕಳಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಿಕ್ಕಿದಷ್ಟು ಸಂತೋಷ ಆಯಿತು. ಭಕ್ತಿಯಿಂದ ಎರಡೂ ಕೈಯೊಡ್ಡಿ ಪ್ರಸಾದ ವನ್ನು ಪಡೆದಳು. ಎರಡೂ ಕಣ್ಣುಗಳಿಗೆ ಒತ್ತಿಕೊಂಡು, "ತಾಯಿ ನನ್ನನ್ನು ಅಗಲಿ ದೂರ ಹೋಗಿರುವ ಗಂಡನನ್ನು ಎಲ್ಲೇ ಇದ್ದರೂ ಸುರಕ್ಷಿತವಾಗಿಟ್ಟಿರಮ್ಮಾ, ನನ್ನ ಮಾಂಗಲ್ಯ ಭಾಗ್ಯದ ಸಂರಕ್ಷಣೆಯು ಹೊರೆ. ನೀನಲ್ಲದೆ ಇನ್ಯಾರು ತಾನೇ ಹೊರುವರಮ್ಮಾ?" ಎಂದು ಗಳಗಳನೆ ಮೂರ್ತಿಯ ಮುಂದೆ ಅಳತೊಡಗಿದಳು.

ನೆರೆದಿದ್ದ ನಾರಿಯರಿಗೆ ಪದ್ಮಾವತಿಯ ಬಗ್ಗೆ ತೀವ್ರವಾದ ಅನುಕಂಪ ಉಂಟಾಯಿತು. ಅಯ್ಯೋಪಾಪ, ತುಂಬಾ ನೊಂದು-ಬೆಂದ ಜೀವಿಯಂತೆ ಕಾಣಿಸುತ್ತಿದ್ದಾಳೆ, ಎಂದು ಕರುಣೆಯಿಂದ ಕೇಳಿದರು-- "ಯಾಕಮ್ಮಾ, ನಿನಗೇನು ಕಷ್ಟ ಸಂಭವಿಸಿದೆ? ನಿನ್ನ ಗಂಡ ಎಲ್ಲಿಗೆ ಹೋಗಿದ್ದಾನೆ? ಹೀಗೇಕೆ ಅವನನ್ನೇ ನೆನೆದು ಬಿಕ್ಕಿ ಬಿಕ್ಕಿ ಅಳುತ್ತಿದ್ದೀ?" ಎಂದು ಸಂತೈಸುತ್ತಾ, ಸಾಂತ್ವನಗೊಳಿಸುತ್ತಾ ಕೇಳಿದರು ಪದ್ಮಾವತಿಗೆ ಅವರ ಮಾತುಗಳು ತುಂಬಾ ಸಹಾನುಭೂತಿ ನೀಡಿತು. ತನ್ನ ದುಃಖದ ಕಡೆಯನ್ನೆಲ್ಲಾ ಕೂಲಂಕಷವಾಗಿ ತಿಳಿಸಿ, ಹೃದಯ ಹಗುರ ಮಾಡಿಕೊಂಡು, ಅವರಲ್ಲಿ ಒಬ್ಬ ವೃದ್ಧೆ ಪದ್ಮಾವತಿಯನ್ನು ಮಗಳಂತೆ ಮೈದುಡುವುತ್ತಾ ಹೇಳಿದಳು – "ಮಗಳೇ, ನೀನು ಈ ಮಾತೆಯ ವ್ರತವನ್ನು ಏಕೆ ಕೈಗೊಳ್ಳಬಾರದು? ವ್ರತಕ್ಕೆ ಮುಖ್ಯವಾಗಿ ಬೇಕಾದದ್ದು ಪರಿಶುದ್ಧ ಮನಸ್ಸು ಪವಿತ್ರವೆನಿಸಿದ ಭಕ್ತಿ. ಎಂತಹ ಬಡವರೂ ಈ ತಾಯಿಯ ವ್ರತವನ್ನು ಮಾಡಬಹುದು. ನೀನೂ ಮಾಡು ತಾಯಿ ತುಂಬಾ ಕರುಣಾಮಯಿ ನಿನ್ನ ದುಃಖದ ಕೂಗನ್ನು ಕೇಳುವಳು. ನಿನ್ನ ಗಂಡನು ಎಲ್ಲಿದ್ದರೂ ಈಕೆಯೇ ಕರೆತಂದು ನಿನಗೆ ಒಪ್ಪಿಸುವಳು.

ಪದ್ಮಾವತಿಗೆ ಯಾವುದೋ ಅವ್ಯಕ್ತ ಬೆಳಕು ಅಂತರಂಗದಲ್ಲಿ ಮೂಡುತ್ತಿರುವಂತೆ ಭಾಸವಾಯಿತು. ಅಜ್ಜಿ, ನಾನೊಬ್ಬ ದೀನ ದರಿದ್ರ ದುಃಖಿನಿ, ವ್ರತ ಮಾಡುವ ಆಸೆಯೇನೋ ಹೆಚ್ಚುತ್ತಿದೆ? ಆದರೆ ಹೇಗೆ ಆಚರಿಸುವುದು?

Sri Vidyabharathi Book Centre, Sringeri

CC-O. In Public Domain. Digitized by eGangotri

ಇದಕ್ಕೆ ತಗುಲುವ ಖರ್ಚು-ವೆಚ್ಚ ಹೇಗೆ ಸರಿತೂಗಿಸುವುದು ? ಖಿನ್ನವದನ ಳಾಗಿ ಹೇಳುತ್ತಾ ನಿಟ್ಟುಸಿರುಬಿಟ್ಟಳು

ವೃದ್ಧನಾರಿ ಪದ್ಮಾವತಿಯನ್ನು ತನ್ನ ಮಗಳೆಂದೇ ತಿಳಿದು ಸಂತೈಸುತ್ತಾ ಸಮಾಧಾನ ಹೇಳಿದಳು--"ಅಯ್ಯೋ ಹುಚ್ಚಿ, ಇದಕ್ಕಾಗಿ ನೀನೇಕಿಷ್ಟು ಚಿಂತಿಸುತ್ತೀ ? ಈ ವ್ರತವನ್ನು ಶ್ರದ್ಧೆ ಭಕ್ತಿಯಿಂದ ಆಚರಿಸಿದವರಿಗೆ ಎಷ್ಟೇ ದಷ್ಟ ದಾರಿದ್ರ್ಯವಿದ್ದರೂ ನಾಶವಾಗುತ್ತದೆ ಲಕ್ಷ್ಮಿ ಒಲಿಯುತ್ತಾಳೆ. ಮನಸ್ಸಿನ ಚಿಂತೆಗಳೆಲ್ಲಾ ನಿವಾರಣೆ ಆಗುತ್ತದೆ, ಮಕ್ಕಳಿಲ್ಲದವರಿಗೆ ಮಕ್ಕಳಾಗುತ್ತದೆ ಗಂಡ ಅಗಲಿ ದೂರ ಹೋಗಿದ್ದರೆ ತಾಯಿಯ ಕೃಪೆಯಿಂದ ಬೇಗ ಹಿಂದಿರುಗಿ ಬರುತ್ತಾನೆ. ಕುಮಾರಿಯರಿಗೆ ಮನಪೇಕ್ಷಿತ ವರನು ದೊರೆಯುತ್ತಾನೆ. ನ್ಯಾಯಾಲಯಗಳಲ್ಲಿ ತುಂಬಾ ದಿನದಿಂದ ಜರುಗುವ ಮೊಖದ್ದಮೆಗಳು ಖುಲಾಸೆ ಆಗುತ್ತವೆ. ಏನೇ ಮನಸ್ಸಿನಲ್ಲಿ ಅಶಾಂತಿ ಇದ್ದರೂ ದೂರ ಆಗಿ, ಶಾಂತಿ-ಸುಖ-ಸಂಪತ್ತು ದೊರೆಯುತ್ತವೆ

ಈ ವ್ರತವನ್ನು ನಿನ್ನಂತಹ ಬಡತಿಯೂ ಆಚರಿಸಬಹುದು. ಕೇವಲ ಇಪ್ಪತ್ತೈದು ಪೈಸೆ ಕೊಟ್ಟು ಕಡಲೆ-ಬೆಲ್ಲ ಕೊಂಡುಕೊ. ಇದರ ಮೇಲೆ ನಿನ್ನ ಶಕ್ತಿ ಸಾಮರ್ಥ್ಯ ಇದ್ದಷ್ಟು ಕೊಂಡುಕೊಳ್ಳಬಹುದು. ಶುಕ್ರವಾರದ ದಿನ ವ್ರತವನ್ನು ಆಚರಿಸು. ಆ ದಿನ ಉಪವಾಸ ಇರಬೇಕು. ಕಥೆಯನ್ನು ಯಾರಿಂದಲಾದರೂ ಹೇಳಿಸಿ ಶ್ರದ್ಧೆ-ಭಕ್ತಿಯಿಂದ ಕೇಳಬೇಕು. ಯಾರೂ ಹೇಳುವವರು ಸಿಕ್ಕದಿದ್ದರೆ ಮಾತೆಯ ಮೂರ್ತಿಯ ಮುಂದೆ ತುಪ್ಪದ ದೀಪ ಹಚ್ಚಿ, ಭಕ್ತಿಯಿಂದ ಕೈ ಜೋಡಿಸಿ ಪ್ರಾರ್ಥಿಸಿಕೊಂಡರೂ ಸಾಕು. ಆದರೆ ಕಾರ್ಯ ಸಿದ್ಧಿಸುವವರೆಗೂ ಮಾತೆಯನ್ನು ನಂಬಿ, ಪ್ರತಿ ಶುಕ್ರವಾರ ವ್ರತವನ್ನು ತಪ್ಪದೆ ಆಚರಿಸುತ್ತಿರಬೇಕು. ಮಾತೆ ಕರುಣಾಮಯಿ ಖಂಡಿತ ಭಕ್ತರನ್ನು ಕೈ ಬಿಡುವುದಿಲ್ಲ. ಅವರಲ್ಲೂ ನಿನ್ನಂತಹ ದುಃಖದಲ್ಲೇ ಮುಳುಗಿರುವ ದೀನ ಹೆಣ್ಣನ್ನಂತೂ ಬೇಗ ಉದ್ಧಾರ ಮಾಡುವಳು. ತಾಯಿ ದೀನೋದ್ಧಾರೆ ಎಂಬುದನ್ನು ಮರೆಯಬೇಡ. ಪ್ರತಿ ಶುಕ್ರವಾರ ಕಡಲೆ-ಬೆಲ್ಲವನ್ನು ವ್ರತದ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಮಯದಲ್ಲಿ ಕೈಯಲ್ಲಿ ಹಿಡಿದಿರು. ಪೂಜೆ ಮುಗಿದ ನಂತರ ಮಕ್ಕಳಿಗೆ, ಮುತ್ತೈದೆಯರಿಗೆ ಹಂಚಿಬಿಡು.

ನಿನ್ನ ಇಷ್ಟಾರ್ಥ ಸಿದ್ಧಿಸಿದನಂತರ ಉದ್ಯಾಪನೆ ಕಾರ್ಯ ಮಾಡು. ಅಂದು ಹಬ್ಬದ ಅಡಿಗೆ ಮಾಡಿ, ಎಂಟು ಮಂದಿ ಬಾಲಕರಿಗೆ ಊಟ ಹಾಕು. ನಿನ್ನ ಭಾವ-ಮೈದಂದಿರ ಮಕ್ಕಳಾದರೂ ಚಿಂತೆಯಿಲ್ಲ. ಹಾಗೆ ಅವರು ದೊರೆಯದಿದ್ದರೆ ನೆರೆಹೊರೆಯವರಲ್ಲಿ ಮಕ್ಕಳನ್ನು ಊಟಕ್ಕೆ ಕರೆತರಬಹುದು. ಅವರಿಗೆ ಊಟ ಹಾಕಿದ ನಂತರ ಯಥಾಶಕ್ತಿ ದಕ್ಷಿಣೆ ಕೊಡು. ಆದರೆ ಅಡಿಗೆ ಯಲ್ಲಿ ಯಾವ ಹುಳಿ ಪದಾರ್ಥವನ್ನೂ ಉಪಯೋಗಿಸಬೇಡ.

ವೃದ್ಧ ಮುತ್ತೈದೆಯ ಮಾತುಗಳು ಪದ್ಮಾವತಿಗೆ ತುಂಬಾ ಹಿಡಿಸಿದುವು. ಅಲ್ಲಿದ್ದವರೆಲ್ಲರಿಗೂ ಧನ್ಯವಾದಗಳನ್ನು ಕೈ ಮುಗಿಯುತ್ತಾ ಅರ್ಪಿಸಿ, ಸೌದೆ ಸಂಗ್ರಹಿಸಿದಳು. ಆ ದಿನ ಸೌದೆ ಹೆಚ್ಚಾಗಿಯೇ ದೊರಕಿತ್ತು. ಸ್ವಲ್ಪ ಸೌದೆ ಮಾರಿ, ಬಂದ ಹಣದಿಂದ ಕಡಲೆ-ಬೆಲ್ಲ ಕೊಂಡಳು. ಅದೇ ದೇವಾಲಯಕ್ಕೆ ಬಂದಳು. ಅವರೆಲ್ಲರೂ ಹಚ್ಚಿಹೋಗಿದ್ದ ತುಪ್ಪದ ದೀಪ ಇನ್ನೂ ಉರಿಯು ತ್ತಲೇ ಇದ್ದುವು. ಕೈಯಲ್ಲಿ ಕಡಲೆ-ಬೆಲ್ಲವನ್ನು ಹಾಗೆಯೇ ಹಿಡಿದುಕೊಂಡು, ಭಕ್ತಿಯಿಂದ ಪ್ರಾರ್ಥಿಸಿದಳು. ತನ್ನ ಗಂಡನ ದರ್ಶನ ಮಾಡಿಸಲು ಮೊರೆ ಇಟ್ಟಳು. ಅವನಿಗೆ ಯಾವ ತೊಂದರೆಯೂ ಆಗದಂತೆ ನೋಡಿಕೊಳ್ಳಲು ಬೇಡಿಕೊಂಡಳು ದುಃಖದ ಒತ್ತಡದಿಂದ ಕಣ್ಣುಗಳು ಕಣ್ಣೀರನ್ನು ಸುರಿಸ ತೊಡಗಿದುವು. ಅಮ್ಮ, ಮಹಾಮಾತೆ, ನಾನು ನಿನ್ನಲ್ಲಿ ಆಸರೆಗಾಗಿ ಬಂದಿದ್ದೀನಿ. ನನ್ನ ಮನಸ್ಸಿನ ಅಳಲನ್ನು ತೋಡಿಕೊಂಡಿದ್ದೀನಿ. ನನ್ನನ್ನು ಕೈ ಬಿಡಬೇಡ ತಾಯಿ ಸಮಾಜದಲ್ಲಿ ನನಗೆ, ನನ್ನ ಗಂಡನಿಗೆ ಗೌರವದ ಸ್ಥಾನ ದೊರಕಿಸಿಕೊಡು ತಾಯಿ. "ಎಂದು ವಿನಮ್ರತೆಯಿಂದ ವಿನಂತಿಸಿ ಕೊಂಡಳು. ಕಡಲೆ-ಬೆಲ್ಲವನ್ನು ಮನೆಗೆ ಬಂದು, ತನ್ನ ಭಾವಂದಿರ ಮಕ್ಕಳಿಗೆ ತಿನ್ನಲು ಕೊಟ್ಟಳು. ಎಲ್ಲರೂ ವಿಚಾರ ತಿಳಿಯದೆ ಬೆಕ್ಕಸ ಬೆರಗಾದರು.

ಮರು ಶುಕ್ರವಾರ ಬಂತು. ಆ ದಿನ ಬೇಗ ಸೌದೆಯನ್ನು ಸಂಗ್ರ

Sri Vidyabharathi Book Centre, Sringeri

CC-O. In Public Domain. Digitized by eGangotri

ಹಿಸಿ, ಸ್ವಲ್ಪ ಭಾಗವನ್ನು ಮಾರಿ, ಬಂದ ಹಣದಿಂದ ಕಡಲೆ ಬೆಲ್ಲ ಕೊಂಡಳು. ತಾಯಿಯ ಮುಂದೆ ನಿಂತಳು. ಅಮ್ಮಾ, ನನ್ನ ಹೃದಯ ದೀಪವನ್ನೇ ತುಪ್ಪದ ದೀಪ ಎಂದು ಭಾವಿಸು. ನನಗೆ ಬೇಕಾದ ದಾರಿ ತೋರಿಸು, "ಎಂದು ಕಣ್ಣೀರ ಕಾಣಿಕೆಯನ್ನು ಅರ್ಪಿಸುತ್ತಾ, ಸೌದೆಯ ಹೊರೆ ಹೊತ್ತುಕೊಂಡು ಮನೆಗೆ ಬಂದಳು. ಸೌದೆ ಹಾಕುತ್ತಿದ್ದಂತೆ ಅಂಚೆಯವನು ನೂರು ರೂಪಾಯಿಗಳ ಮನಿ ಆರ್ಡರ್ ಬಂದಿರುವುದನ್ನು ತಿಳಿಸಿದ. ಹೆಬ್ಬೆಟ್ಟು ಒತ್ತಿಸಿಕೊಂಡು, ಹಣ ಕೊಟ್ಟು ಹಿಂದಿರುಗಿದ. ಅದನ್ನು ಕಾಣುತ್ತಿದ್ದಂತೆಯೇ ಅತ್ತೆ" ಆ ಹಣ ನಮಗೆ ಸೇರಬೇಕೇ. ನಾವು ನಿನಗೆ ಋಣದ ಕೂಳು ಹಾಕುತ್ತಿದ್ದೀವಲ್ಲಾ ಅದಕ್ಕೆ ಹತ್ತು ವರ್ಷಗಳ ನಂತರ ಈಗ ನನ್ನ ಮಗ ಹಣ ಕಳುಹಿಸಿದ್ದಾನ. ಕೊಡೇ ಇಲ್ಲಿ." ಎಂದು ಸೀಳು ನಾಯಿ-ಯಂತೆ ಮೇಲೆ ಬಿದ್ದು ಕಿತ್ತುಕೊಂಡಳು. ಸದ್ಯ, ನನ್ನ ಗಂಡ ಆರೋಗ್ಯವಾಗಿದ್ದಾನಲ್ಲ, ಅಷ್ಟೇ ಸಾಕು. ಅಂದು ಕೊಂಡು, ಹಣ ಹೋದ-ದಕ್ಕೆ ಯೋಚಿಸದೆ ಹಳಸಲು ಹಿಟ್ಟು ತಿಂದು, ತೆಂಗಿನ ಚಿಪ್ಪಿನಲ್ಲೇ ನೀರು ಕುಡಿದು ಮಲಗಿದಳು. ಆ ರಾತ್ರಿ ಎಲ್ಲಾ ಅವಳಿಗೇ ತಾಯಿಯದೇ ದರ್ಶನ. ನಮ್ಮಮ್ಮ ನೀನೆಂತಹ ಕರುಣಾಮಯಿ. ಎಷ್ಟು ಬೇಗ ನನಗೆ ನನ್ನ ಗಂಡನ ಇರುವನ್ನು ತಿಳಿಸಿದೆ ! ಆದಷ್ಟು ಬೇಗ ಅವರನ್ನು ನನ್ನ ಬಳಿಗೆ ಹಿಂದಿರುಗುವಂತೆ ಮಾಡಮ್ಮಾ, ಎಂದು ಪ್ರಾರ್ಥಿಸಿದ್ದೂ ಪ್ರಾರ್ಥಿಸಿದ್ದೇ. ನಿಜಕ್ಕೂ ಅವಳಿಗೆ ಮಾತೆಯೇ ಮಂದಹಾಸದಿಂದ ಎದುರಿಗೆ ನಿಂತಂತಿತ್ತು. ಅಭಯ ಹಸ್ತವನ್ನು ಅವಳಿಗೆ ತೋರಿಸುತ್ತಾ ಹಾರೈಸುತ್ತಿರುವಂತೆಯೇ ಭಾಸವಾಗುತ್ತಿತ್ತು. ನಿಜಕ್ಕೂ ಪದ್ಮಾವತಿ ಅಲೌಕಿಕ ಆನಂದದಲ್ಲಿ ಮುಳುಗಿದಳು. ನೆಮ್ಮದಿಯ ಉಸಿರೆಳೆಯುತ್ತಾ ಶಾಂತಿ-ಸಂತೋಷದೊಂದಿಗೆ ನಿದ್ರಿಸಿದಳು.

ಹೀಗೆಯೇ ಹಲವಾರು ಶುಕ್ರವಾರಗಳು ಉರುಳಿದುವು ಅಂದು ಒಂದು ಶುಕ್ರವಾರ ಎಂದಿನಂತೆ ಕೈಯಲ್ಲಿ ಕಡಲೆ–ಬೆಲ್ಲವನ್ನು ಹಿಡಿದು ಭಕ್ತಿಯಿಂದ ಕಾಡಿನ ಪಾಳುಗುಡಿಯಲ್ಲಿ ತಾಯಿಯ ಮೂರ್ತಿಯ ಪಾದಗಳ ಮೇಲೆ ಬಿದ್ದು, ಕಣ್ಣೀರಿನಿಂದ ಪಾದಗಳನ್ನು ತೊಳೆಯುತ್ತಿದ್ದಂತೆ, ಅಶರೀರವಾಣಿ ಕೇಳಿಸಿತು—

Sri Vidyabharathi Book Centre, Sringeri

CC-O. In Public Domain. Digitized by eGangotri

"ಏದ್ದೇಳು ಮಗಳೇ, ನೀನಿನ್ನು ಅಳಬೇಡ. ನೀನು ಅತ್ತಷ್ಟೂ ನನ್ನ ಕರುಳೇ ಹಿಂಡಿದಂತಾಗುತ್ತದೆ. ಅಲ್ಲದೆ ನಿನ್ನ ಗಂಡನಿಗೂ ಸಹ ಹೀಗೆಲ್ಲಾ ಕಣ್ಣೀರು ಸುರಿಸುವುದು ಅಶುಭ ಅಲ್ಲವಾ ? ಹೋಗು, ನೆಮ್ಮದಿಯಿಂದ ಮನೆಗೆ ಹೋಗು ಆದಷ್ಟೂ ಬೇಗ ನಿನ್ನ ಗಂಡನು ಹಿಂದಿರುಗುವಂತೆ ಮಾಡುವ ಹೊಣೆಗಾರಿಕೆ ನನಗಿರಲಿ."

ಪದ್ಮಾವತಿ ಕಣ್ಣಿಟ್ಟಳು, ಸುತ್ತಲೂ ನೋಡಿದಳು. ಯಾರೂ ಇಲ್ಲ, ತಾಯಿಯೇ ಹೇಳಿದ ಮಾತು ಎಂದು ತಿಳಿದು ಆ ಮಹಾಮಾತೆಯ ಪಾದ ಗಳನ್ನು ಮುಟ್ಟಿ-ಮುಟ್ಟಿ ನಮಸ್ಕಾರ ಮಾಡಿದಳು. ಸೌದೆಯ ಹೊರೆ ಹೊತ್ತು ಕೊಂಡು ಮನೆಗೆ ಹಿಂದಿರುಗಿದಳು.

ಅತ್ತ ಪದ್ಮಾನಾಭನ ಸಂಪತ್ತು ಅಪಾರವಾಗಿ ಸಂಗ್ರಹವಾಗಿತ್ತು. ಯಾರ ಜವಾಬ್ದಾರಿಯ ಮೇಲೂ ಬಿಟ್ಟು ಹೋಗಲು ಅವನಿಗೆ ಧೈರ್ಯ ಇರಲಿಲ್ಲ. ಪದ್ಮಾವತಿಯ ನೆನೆಪು ಕಾಡುತ್ತಿತ್ತು. ಹಲವೊಮ್ಮೆ ಒಂಟಿ ಇದ್ದಾಗ, ತನ್ನ ಎದೆಯ ಮೇಲೆ ತಾನೇ ಕೈ ಆಡಿಸಿ ಕೊಳ್ಳುತ್ತಾ ಅಂದು ಸಗಣಿ ಕೈಯಿಂದಲೇ ಅಂಗೈಯನ್ನು ನೆನಪಿನ ಗುರುತಿನಂತೆ ಒತ್ತಿದ್ದುದನ್ನು ಜ್ಞಾಪಿಸಿಕೊಂಡ. ಹೃದಯದ ತಳಮಳ-ಕಳವಳ ಹೆಚ್ಚಿತು. ಅಂದು ರಾತ್ರಿ ನಿದ್ದೆ ಬರಲಿಲ್ಲ. ಹಾಸಿಗೆಯ ಮೇಲೆ ಒರಳಾಡುತ್ತಿದ್ದಂತೆ ಮಾತೆ ಸಂತೋಷಿ ಮಾತಾ ಮುದು ಕಿಯ ವೇಷದಲ್ಲಿ ಕಾಣಿಸಿಕೊಂಡಳು. ಅವನನ್ನು ಪ್ರೀತಿಯಿಂದ ನೋಡುತ್ತಾ ಹೇಳಿದಳು—ಮಗನೇ, ಮನೆ ಬಿಟ್ಟು ಬಂದು ಇಷ್ಟೊಂದು ವರ್ಷಗಳಾಗಿದ್ದರೂ ಆ ಕಡೆ ಗಮನವನ್ನೇ ಕೊಡದೆ, ಹೀಗೆ ಇದ್ದಲ್ಲಿಯೇ ನೀನೊಬ್ಬನೇ ಸಂತೋಷ ಪಡುತ್ತಿದ್ದೀಯಲ್ಲಾ, ಇದು ಸರಿಯಾ ? ನಿನ್ನ ಮಡದಿ, ಪಾಪ ಆ ಮುಗುದೆ ನಿನಗಾಗಿ ಎಷ್ಟೊಂದು ಆಲಾಪಿಸುತ್ತಿದ್ದಾಳೆ ! ಹಾತೊರೆಯುತ್ತಿದ್ದಾಳೆ !! ಆ ಕಡೆ ಕಣ್ಣು ಅರಳಿಸಿದ್ದೀಯಾ ? ಎಷ್ಟಾದರೂ ಅವಳು ನಿನ್ನ ಕೈ ಹಿಡಿದ ಪತ್ನಿ ಅಲ್ಲವಾ ? ಅವಳ ಗೋಳನ್ನು ನೋಡಲಾರದೆ ನಾನೇ ಬಂದು ನಿನ್ನನ್ನು ಎಚ್ಚರಿ ಸುತ್ತಿದ್ದೇನೆ. ನಿನ್ನ ತಾಯಿ, ಅಣ್ಣಂದಿರು, ಅವರ ಮಡದಿಯರು ನೀನು

Sri Vidyabharathi Book Centre, Sringeri

CC-O. In Public Domain. Digitized by eGangotri

ಅಲ್ಲಿದ್ದಾಗಲೇ ಎಷ್ಟೊಂದು ಚಿತ್ರಹಿಂಸೆಗೆ ಗುರಿ ಮಾಡಿದ್ದರೆಂಬುದು ನಿನಗೆ ತಿಳಿಯದಾ ? ಈಗಲೂ ಕಾಲ ಮಿಂಚಿಲ್ಲ. ಬೇಗ ಹೋಗು."

ಪದ್ಮಾನಾಭಾ ಕಣ್ಣುಜ್ಜಿಕೊಂಡು ಎದ್ದು ಕುಳಿತ. ಹಾಗೆಯೇ ನೋಡಿದ. ಈ ಮುದುಕಿ ಯಾರು ? ಈ ಅವೇಳೆಯಲ್ಲಿ ಇಲ್ಲಿಗೆ ಹೇಗೆ ಬಂದಳು ? ನನ್ನ ಮನೆಯ ವಿಷಯವೆಲ್ಲಾ ಈಕೆಗೆ ಹೇಗೆ ಗೊತ್ತು ? ಎಂದು ಯೋಚಿಸುತ್ತಾ ಮಾತೆಯ ಕಡೆಯೇ ನೋಡುತ್ತಿದ್ದಂತೆ ಮುದುಕಿ ವೇಷದಲ್ಲಿದ್ದ ಮಾತೆ ಹೇಳಿದಳು-- "ಅದೆಲ್ಲಾ ಆಮೇಲೆ ಯೋಚಿಸುವಿಯಂತೆ. ಮೊದಲು ಇಲ್ಲಿಂದ ಹೊರಡು." ಎಂದು ಅನುರೋಧಿಸಿದಳು.

ಪದ್ಮನಾಭಾ ಈಗ ತಬ್ಬಿಬ್ಬಾದವನಂತೆ ಹೇಳಿದ-- "ಅಮ್ಮಾ, ನನ್ನ ಅಂಗಡಿ ಈಗ ತುಂಬಾ ಮುಂದುವರಿದಿದೆ. ಅಂಗಡಿಯ ತುಂಬಾ ಬೆಲೆ ಬಾಳುವ ಸಾಕಷ್ಟು ಸರಕು ಇದೆ. ಅವೆಲ್ಲಾ ಯಾರ ನಂಬಿಕೆಯ ಮೇಲೆ ಬಿಟ್ಟು ಹೋಗಲಿ ?

ಮಾತೆ ನಗುತ್ತಾ ಹೇಳಿದಳು-- "ಪದ್ದಾ, ಅದಕ್ಕೇಕೆ ಅಷ್ಟೊಂದು ತಳ ಮಳಿಸುತ್ತೀ ? ಇನ್ನು ಒಂದೆರಡು ದಿನಗಳಲ್ಲಿ ನಿನ್ನ ಅಂಗಡಿ ಪೂರ್ತಿ ಅಧಿಕ ಲಾಭಕ್ಕೆ ನಿನ್ನಿಂದ ಕೊಂಡುಕೊಳ್ಳುವಂತೆ ನಾನೇ ಏರ್ಪಾಟು ಮಾಡುತ್ತೇನೆ. ಎಲ್ಲಾ ಹಣವನ್ನೂ, ತೆಗೆದುಕೊಂಡು ಮೊದಲು ಮನೆಗೆ ಹೋಗು. ನಿನ್ನ ಹೃದಯದ ದೇವಿಯನ್ನು ಮೊದಲು ಸಂತೈಸು." ಎಂದು ಹೇಳುತ್ತಿದ್ದಂತೆ ಮುದುಕಿ ಅಂತರ್ಧಾನಳಾದಳು.

ಪದ್ಮನಾಭ ಎದ್ದೇ ರಾತ್ರಿ ಎಲ್ಲಾ ಕುಳಿತಿದ್ದ. ಇದೆಂತಹ ವಿಚಿತ್ರ ! ಎನೆಲ್ಲಾ ಸೋಜಿಗ !! ಎಂದು ಚಿಂತಿಸುತ್ತಾ ಕಾಲ ಕಳೆದ. ಮರುದಿನ ಅಂಗಡಿಯಲ್ಲಿ ಹೋಗಿ ಕುಳಿತುಕೊಳ್ಳುತ್ತಿದ್ದಂತೆ ನಾಲ್ಕೈದು ಮಂದಿ ಸಾಹುಕಾರ ವರ್ತಕರು ಅಂಗಡಿಗೆ ಬಂದರು. ಸ್ವ ಇಚ್ಛೆಯಿಂದ ಅಂಗಡಿಯ ಸಮೇತ ಸರಕುಗಳೆಲ್ಲವನ್ನೂ ಕೊಂಡುಕೊಳ್ಳಲು ಬಯಸಿರುವುದಾಗಿ ತಿಳಿಸಿದರು. ಪದ್ಮನಾಭನಿಗೆ ಆನಂದ, ಆಶ್ಚರ್ಯ ಒಮ್ಮೆಲೇ ಆಯಿತು. ಇದು ಯಾರೋ

Sri Vidyabharathi Book Centre, Sringeri

CC-O. In Public Domain. Digitized by eGangotri

ದೇವತೆಯ ಅನುಗ್ರಹವೇ ಇರಬೇಕೆಂದು ಊಹಿಸಿದ. ರಾತ್ರಿ ಕಂಡಿದ್ದ ಮುದುಕಿ–ಮಾತೆಯನ್ನು ಮನಸ್ಸಿನಲ್ಲೇ ನೂರಾರು ಬಾರಿ ಸ್ಮರಿಸಿದ, ನಮಿಸಿದ ಬಂದಿದ್ದ ವರ್ತಕರಿಂದ ಸಾಕಷ್ಟು ಹಣವನ್ನು ಲಾಭದ ರೂಪದಲ್ಲಿ ಪಡೆದು, ಅಂಗಡಿ ಸಮೇತ ಸಕಲ ಸರಕುಗಳನ್ನೂ ಅವರಿಗೆ ಒಪ್ಪಿಸಿದ. ಮಾರನೆಯದಿನ ಕುದುರೆಯ ಮೇಲೇರಿ ತನ್ನ ಆಳು–ಕಾಳುಗಳೊಂದಿಗೆ ತಾನೇ ಊರಿನ ಕಡೆ ಹಿಂದಿರುಗಿದ.

ಕಾಡಿನಲ್ಲಿ ಸೌದೆ ಸಂಗ್ರಹಿಸಲು ಬಂದಿದ್ದ ಪದ್ಮಾವತಿ ಎಂದಿನಂತೆ ಆ ದಿನವೂ ಸಾಕಷ್ಟು ಸೌದೆ ಸಂಗ್ರಹಿಸಿದಳು. ಸಂತೋಷಿ ಮಾತೆಯ ಗುಡಿಯ ಕಡೆ ಬರುತ್ತಿದ್ದಂತೆ ದೂರದಲ್ಲಿ ಕುದುರೆಯ ಗೊರಸುಗಳಿಂದ ಎದ್ದ ಧೂಳು ಕಾಣಿಸಿತು. ಇದ್ಯಾರು ಬರುತ್ತಿರಬಹುದು ? ಎಂದೂ ಇಂತಹ ಧೂಳು ಎದ್ದಿದ್ದುದನ್ನು ನಾನು ಕಂಡಿರಲಿಲ್ಲ ! ಎಂದು ಯೋಚಿಸುತ್ತಿದ್ದಂತೆ ಅವಳ ಎಡಗಣ್ಣು ಹಾರತೊಡಗಿತು. ಬೇಗ ಬೇಗ ಗುಡಿಗೆ ಬಂದು, ತಾಯಿಗೆ ನಮಸ್ಕಾರಿಸಿ ಬೇಡಿಕೊಂಡಳು. "ಅಮ್ಮಾ, ದೂರದಲ್ಲಿ ಕೆಂಧೂಳು ಕಾಣಿಸುತ್ತಿದೆ. ಬಹುಶಃ ಬರುತ್ತಿರುವವರು ನನ್ನ ಪತಿ ದೇವರೇ ಏಕಾಗಿರಬಾರದು ? ನಿನ್ನ ಕೃಪೆಯಿಂದ...." ಎಂದು ಇನ್ನೂ ತನ್ನ ಮಾತನ್ನು ಮುಗಿಸುವ ಮೊದಲೇ ಅಶರೀರ ವಾಣಿ ಮತ್ತೆ ಕೇಳಿಸಿತು. "ಮಗಳೇ, ಇನ್ನೂ ಅನುಮಾನನಾ ? ಅವನೇ, ನಿನ್ನ ಗಂಡನೇ ಕುದುರೆಯ ಮೇಲೆ ತನ್ನ ಆಳು–ಕಾಳುಗಳೊಂದಿಗೆ ಬರುತ್ತಿದ್ದಾನೆ ತುಂಬಾ ಹಸಿದಿದ್ದಾನೆ. ನೀನೀಗ ನಾನು ಹೇಳಿದಂತೆ ಮಾಡು. ನೀನು ಸಂಗ್ರಹಿಸಿರುವ ಸೌದೆಯನ್ನು ಭಾಗಮಾಡು ಒಂದು ಭಾಗ ದೇವಸ್ಥಾನದ ಮುಂದೆ ಇಡು. ಇನ್ನೊಂದು ಭಾಗ ಕೆರೆಯ ಅಂಚಿನಲ್ಲಿಟ್ಟುಕೊ ಕುದುರೆಯ ಸಾರೋಟು ಆ ಕಡೆಯಿಂದಲೇ ಬರುತ್ತದೆ. ಹಸಿದಿರುವುದರಿಂದ ನಿನ್ನ ಗಂಡ ಸೌದೆಯನ್ನು ಕೊಂಡುಕೊಳ್ಳುತ್ತಾನೆ. ಆಳುಗಳಿಂದ ಅಡಿಗೆ ಮಾಡಿಸಿ, ಊಟ ಮಾಡಿ, ಮನೆಗೆ ಹಿಂದಿರುಗುತ್ತಾನೆ. ಅಷ್ಟರಲ್ಲಿ ನೀನು ಗುಡಿಯ ಬಳಿ ಇಟ್ಟು ಹೋಗಿರುವ ಸೌದೆಯ ಹೊರೆಯನ್ನು ಹೊತ್ತುಕೊಂಡು ಮನೆಗೆ ಹೋಗು, ನಿನ್ನ ಗಂಡ ಮನೆಗೆ ಬಂದಿರುತ್ತಾನೆ. ಅವನಿಗೆ ಕೇಲಿಸುವಂತೆ ಜೋರಾಗಿ ನಿನ್ನ ಅತ್ತೆಯನ್ನು ಕೂಗಿ ಹೇಳು. "ಅತ್ತೆಯವರೇ, ಸೌದೆ ತಂದಿದ್ದೇನೆ. ಸಾಕಾಗಿದ್ದೇನೆ

Sri Vidyabharathi Book Centre, Sringeri

CC-O. In Public Domain. Digitized by eGangotri

ದಯವಿಟ್ಟು, ಬೇಗ ಹಳಸಲು ಹಿಟ್ಟು ತನ್ನಿ ಅದನ್ನೇ ಮೃಷ್ಟಾನ್ನ ಎಂದು ತಿಳಿದು ಊಟ ಮಾಡುತ್ತೇನೆ. ತನ್ನ ತೆಂಗಿನ ಚಿಪ್ಪಿಗೆ ಕುಡಿಯಲು ನೀರು ಹಾಕಿ, ನಿಮ್ಮ ದಮ್ಮಯ್ಯ, ದಣಿದಿದ್ದೀನಿ. ಮೈ-ಕೈ ಎಲ್ಲಾ ತುಂಬಾ ನೋಯುತ್ತಿದೆ." ಆಮೇಲೆ ಏನಾಗುವುದೆಂಬುದನ್ನು ನೀನೇ ನೋಡಿ ಸಂತೋಷಪಡು.

ಮಾತೆಯ ಮಮತೆ, ವಾತ್ಸಲ್ಯ ಹಾಗೂ ಕಾರುಣ್ಯವನ್ನು ಕಂಡು ಪದ್ಮಾವತಿಗೆ ಹೃದಯ ಹಿಡಿಯಲಾರದಷ್ಟು ಸಂತೋಷ ಉಂಟಾಯಿತು. ಮಾತೆಯ ಆಣತಿಯಿಂದ ಸೌದೆಯ ಹೊರೆಯನ್ನು ಎರಡು ಭಾಗ ಮಾಡಿದಳು. ಒಂದು ಭಾಗವನ್ನು ಗುಡಿಯ ಮುಂದೆ ಇಟ್ಟಳು. ಇನ್ನೊಂದು ಭಾಗವನ್ನು ಹೊತ್ತು ಕೊಂಡು ಕೆರೆಯ ಅಂಚಿಗೆ ಬಂದಳು. ಕುದುರೆಗಳ ಸಾರೋಟು ಸಮೀಪಿಸಿತು. ಮುಂದಿನ ಕುದುರೆಯ ಮೇಲೆ ರಾಜಕುಮಾರರಂತೆ ಕುಳಿತಿದ್ದ ತನ್ನ ಗಂಡನನ್ನು ಕಣ್ಣಾರೆ ನೋಡಿದಳು. ಎಲ್ಲಿ ದೃಷ್ಟಿ ತಗಲುವುದೋ ಎಂದು ಅಂಜಿ, ಸೌದ ಹೊರೆ ಹೊತ್ತಿದ್ದ ತಲೆಯನ್ನು ಲಜ್ಜೆಯೊಂದಿಗೆ ತಗ್ಗಿಸಿದಳು. ಒಣಗಿದ ಸೌದೆಯ ಹೊರೆಯನ್ನು ನೋಡುತ್ತಲೇ ಪದ್ಮನಾಭ ಕುದುರೆಯನ್ನು ನಿಲ್ಲಿಸಿದ. ಆಳುಗಳೂ ನಿಂತರು.

"ಸೌದೆ ಹೊರೆ ಮಾರಲು ತಾನೇ ತಂದಿದ್ದೀ ತಾಯೀ ?" ಎಂದು ಪ್ರಶ್ನಿಸಿದ.

ಪದ್ಮಾವತಿಗೆ "ಥೂ, ಎಂತಹ ದೊಡ್ಡ ಮಾತು ಆಡುತ್ತಿದ್ದಾರೆ !" ಎಂದು ಕೋಪ-ಲಜ್ಜೆ ಎರಡೂ ಏಕಕಾಲದಲ್ಲಿ ಉಂಟಾಯಿತು. ಆದರೆ ಏನೂ ಮಾಡುವ ಸ್ಥಿತಿಯಲ್ಲಿರಲಿಲ್ಲ. ಥಟ್ಟನೆ ಏನೂ ಹೇಳುವ ಸ್ಥಿತಿಯಲ್ಲಿರಲಿಲ್ಲ. ತನ್ನ ಮನೋವ್ಯಥೆಯನ್ನು ತಾನೇ ನುಂಗಿಕೊಂಡು "ಹೌದು" ಎನ್ನುವಂತೆ ತಲೆ ತೂಗಾಡಿಸಿದಳು "ಪಾಪ, ತುಂಬಾ ಬಡತಿ ಎಂದು ಕಾಣುತ್ತೆ" ಅನ್ನುತ್ತಾ ಆವಳಿಗೆ ಕೈ ತುಂಬಾ ಹಣ ಕೊಟ್ಟು, ಸೌದೆ ಹೊರೆಯನ್ನು ತಾನೇ ಇಳಿಸಿ ಕೊಂಡ. ಪದ್ಮಾವತಿಗೆ ತುಟಿ ಅಂಚುಗಳಲ್ಲೇ ಮಂದಹಾಸ ಮಿನುಗುತ್ತಿತ್ತು. ಲಜ್ಜೆ ಅವಳ ಕಿವಿಯ ಬಳಿ ಗೆಜ್ಜೆಯ ಶಬ್ದ ಮಾಡತೊಡಗಿತು. ಆದರೂ ಹೇಗೋ

Sri Vidyabharathi Book Centre, Sringeri

CC-O. In Public Domain. Digitized by eGangotri

ತಡೆದುಕೊಂಡು, ತಲೆ ಎತ್ತಿಯೂ ನೋಡದೆ ಹಿಂದಿರುಗಿದಳು. ಪದ್ಮಾನಾಭ ಅಡಿಗೆ ಮಾಡಿಸಿ, ಕೆರೆಯ ಬಳಿಯೇ ಹೊಟ್ಟೆ ತುಂಬಾ ಊಟ ಮಾಡಿದ. ಆಳು ಗಳೂ ಆನಂದದಿಂದ ಊಟ ಮುಗಿಸಿದರು. ಎಲ್ಲರೂ ಈಗ ಸುಧಾರಿಸಿಕೊಂಡು ಕುದುರೆಗಳ ಮೇಲೆ ಹಳ್ಳಿಯ ಕಡೆ ಹೊರಟರು.

ಪದ್ಮಾವತಿ ಗುಡಿಯ ಬಳಿ ಬಂದಳು. ಸಂತೋಷಿ ಮಾತೆಯ ವಿಗ್ರಹದ ಮುಂದೆ ನಿಂತಳು. ತಾಯಿಯನ್ನು ಎಷ್ಟು ನೋಡಿದರೂ ಅವಳ ಮನಸ್ಸಿಗೆ ತೃಪ್ತಿ ಇಲ್ಲ. ಎಷ್ಟು ವಂದಿಸಿದರೂ ಸಾಲದು. ಎಷ್ಟೇ ಧನ್ಯವಾದಗಳನ್ನು ಅರ್ಪಿಸಿದರೂ ತೀರದು. ಮಾತೆಯ ಔದಾರ್ಯದ ಕಾರುಣ್ಯವನ್ನು ಕೊಂಡಾ ಡುತ್ತಾ, ಆಕೆಯ ಅಡಿದಾವರೆಗಳ ಮೇಲೆ ಉರುಳಾಡಿದಳು. ಎದ್ದು ಮತ್ತೊಮ್ಮೆ ಮನಸಾರೆ ವಂದಿಸಿ, ಗುಡಿಯಿಂದ ಹೊರಗೆ ಬಂದಳು. ಸೌದೆಯ ಹೊರೆಯನ್ನು ಹೊತ್ತುಕೊಂಡು ಮನೆಯ ಕಡೆ ಹೆಜ್ಜೆ ಹರಿಸಿದಳು. ಹರುಷದ ಹೊನಲಿನಲ್ಲಿ ಅವಳ ಹೃದಯದ ದೋಣಿ ತೇಲಿ ಹೋಗುತ್ತಿತ್ತು. ಪಾದಗಳಿಗೆ ಇಂದು ಮುಂದೆ ಮುಂದೆ ನಡೆಯಲು ಎಲ್ಲಿಲ್ಲದ ಶಕ್ತಿ-ಸಾಮರ್ಥ್ಯ, ಉತ್ಸಾಹ-ಹುರುಪು ಬಂದಿತ್ತು. ಮನೆ ಬಾಗಿಲಿಗೆ ಬಂದವಳೇ ಹೊರೆಯನ್ನು ಕೆಳಗಿಟ್ಟು ಅತ್ತೆಯನ್ನು ಕೂಗಿದಳು. "ಅತ್ತೆಮ್ಮನವರೇ, ಬೇಗ ಬನ್ನಿ. ಈ ದುಡ್ಡೂ ತಂದಿದ್ದೀನಿ, ಸೌದೆ ಹೊರೆಯನ್ನೂ ತಂದಿದ್ದೀನಿ."

ಅತ್ತೆ ಅವಸರದಿಂದ ಹೊರ ಬಂದಳು. ದುಡ್ಡನ್ನು ಪಡೆಯುತ್ತಾ ಕೇಳಿ ದಳು. "ಈ ಬೆಳ್ಳಿಯ ನಾಣ್ಯಗಳನ್ನು ಯಾರೇ ಕೊಟ್ಟರು ? ಯಾರಿಗೆ ಏನು ಮೋಡಿ ಹಾಕಿದೆಯೇ ?" ಎಂದಳು ಅತ್ತೆ, ಸೊಟ್ಟ ಮೂತಿ ಮಾಡುತ್ತ.

"ಹಾಗೇನಿಲ್ಲ ಅತ್ತೆಮ್ಮನವರೇ, ಅದ್ಯಾರೋ ಕುದುರೆ ಮೇಲೆ ಬರ್ತಾ ಇದ್ದರು. ನನ್ನ ತಲೆ ಮೇಲೆ ಸೌದೆ ಹೊರೆ ನೋಡಿ, ಅವರೇ ಕೊಂಡು ಕೊಂಡರು. ಕೈ ತುಂಬಾ ಹಣ ಹಾಕಿದರು. ಅವರ ಈ ಗುಣ ಕಡೇವರೆಗೂ ಹೀಗೇ ಉಳಿದಿರಲಿ. ನನ್ನ ಕಣ್ಣು ಮುಂದೆ ನೂರು ವರ್ಷ ಬದುಕಿರಲಿ, ಬಂಗಾರದ ಬಾಳು ಬಾಳಿ ಬದುಕಲಿ ಎಲ್ಲಿ ? ಬೇಗ ಹಸಲು ಹಿಟ್ಟು, ತೆಂಗಿನ

Sri Vidyabharathi Book Centre, Sringeri

CC-O. In Public Domain. Digitized by eGangotri

ಚಿಪ್ಪಿನಲ್ಲಿ ನೀರು ತನ್ನಿ. ನನಗೆ ತುಂಬಾ ಹಸಿವಾಗ್ತಿದೆ." ಎಂದು ಜೋರಾಗಿ ಒಳಗೆ ಬಂದಿರುವ ಗಂಡನಿಗೆ ಕೇಳಿಸುವಂತೆ ಹೇಳಿದಳು.

ಪದ್ಮನಾಭ ಹೊರಗೆ ಬಂದ. ಹಾಗೆಯೇ ಪದ್ಮಾವತಿಯ ಕಡೆ ದೃಷ್ಟಿ ಹಾಯಿಸಿದ. ಹೌದು, ಅದೇ ಸೌದೆ ಮಾರುತ್ತಿದ್ದವಳೇ. ಆದರೆ ನನ್ನ ಅಮ್ಮ ನನ್ನು ಹೀಗೇಕೆ ಸಂಬೋಧಿಸುತ್ತಿದ್ದಾಳೆ! ಎಂದು ಸಂದೇಹಿಸುತ್ತಾ ಕೇಳಿದ. "ಯಾರಮ್ಮ ಇವಳು ? ಅದ್ಯಾಕೆ ನಿನ್ನ ಹಾಗೆ ಸಂಬೋಧಿಸುತ್ತಿದ್ದಾಳೆ ?"

ವಿಧವೆ ತಾಯಿ ಮಗನ ಮಾತನ್ನು ಕೇಳುತ್ತಾ ತಬ್ಬಿಬ್ಬಾದಂತಾದರೂ ತೋರ್ಪಡಿಸದೆ ಬೆರಗು ಮಾತುಗಳಿಂದ ಸಮಾಧಾನ ಪಡಿಸಲು ಯತ್ನಿಸಿದಳು. "ಇವಳೇನೋ ನಿನ್ನ ಹೆಂಡತಿ! ಹೇಗಾಗಿದ್ದಾಳೆ ನೋಡು. ಬೇಡಮ್ಮಾ ಬೇಡವೇ ಅಂದರೂ ಕೇಳದೆ ತಾನು ತನ್ನ ಕಾಲ ಮೇಲೆ ನಿಂತು ಕೊಳ್ಳಬೇಕೂ ಅಂತ ಯಾರ ಮಾತನ್ನೂ ಕೇಳದೆ, ಮನೆಯಿಂದ ಬೆಳಿಗ್ಗೇನೇ ಹೊರಟು ಹೋದಳು ಅಂದರೆ ಸಂಜೆ ಮನೆಗೆ ಬರ್‍ತಾಳೆ. ಎಲ್ಲಿ ಹೋಗ್ತಾಳೋ, ಎಲ್ಲಿ ರ್‍ತಾಳೋ ಒಂದೂ ತಿಳಿಸೋಲ್ಲ. ನಮಗೋ ನೀನಿಲ್ಲದೇ ಇರೋವಾಗ ಏನು ಮಾತಾಡೋಕೂ ಭಯ. ಜನ ಸುಮ್ಮನೆ ಅತ್ತೇದೇ ಕಿತಾಪತಿ ಅಂತ ದೂರುತ್ತಾ ಇದ್ದಾರೆ, ಎಲ್ಲಾ ಇವಳ ಮಾತಿನ ಮೋಡಿಗೇ ಬೆರಗಾಗ್ತಾ ಇದ್ದಾರೆ ಸದ್ಯ, ನೀನೂ ಬೆರಗಾಗಬೇಡ. ಹೇಗೂ ಬಂದಿದ್ದಿ. ಒದ್ದು, ಬುದ್ಧಿ, ಕಲಿಸಿ, ಹದ್ದುಬಸ್ತಿನಲ್ಲಿ ಇಟ್ಟುಕೊ. ಮನೆತನದ ಮಾನ-ಮರ್ಯಾದೆ ನಡು ಬೀದೀಲಿ ಹರಾಜು ಹಾಕಬೇಡ."

ಪದ್ಮನಾಭನಿಗೆ ತಾಯಿಯ ನಟನೆ ಹೊಸದೇನೂ ಆಗಿರಲಿಲ್ಲ. ತಾನಿದ್ದಾಗಲೇ ಎಷ್ಟೋಂದು ಸುಳ್ಳಿನ ಕಂತೆ ಕಟ್ಟುತ್ತಿದ್ದಳು ಎಂಬುದನ್ನು ಕಣ್ಣಾರ ನೋಡಿದ್ದನಲ್ಲಾ! ತಾಯಿಯ ಬಗ್ಗೆ ತಾತ್ಸರತೆ, ನಿರಾದರ ಇನ್ನೂ ಹೆಚ್ಚಾಯಿತು. ಕೋಪವೂ ಕಣ್ಣು-ಮುಖದಲ್ಲಿ ಕೆಂಡದಂತೆ ಕಂಡಿತು. "ಅಮ್ಮಾ, ನನ್ನ ಹೆಂಡತಿ ಎಂತಹ ಸಾಧ್ವಿ ಎಂಬುದು ನನಗೆ ಈಗೇ ಅಲ್ಲ, ತುಂಬಾ ಹಿಂದಿ

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಂದಲೂ ಗೊತ್ತು. ಅವಳನ್ನು ದೂಷಿಸಿ ನಾನ್ಯಾಕೆ ಪಾಪದ ಹೊರೆ ತಲೆಯ ಮೇಲಿಟ್ಟು ಕೊಳ್ಳಲಿ ? ಹತ್ತಾರು ವರ್ಷ ನಾನು ಮನೆಯಲ್ಲಿ ಇಲ್ಲದಿದ್ದರೂ, ನೀವು ಕೊಟ್ಟ ಚಿತ್ರಹಿಂಸೆಗಳನ್ನೆಲ್ಲಾ ಸಹಿಸಿಕೊಂಡು, ಹೇಗೋ ಕಾಲ ಹಾಕುತ್ತಾ ಬದುಕಿದ್ದಾಳಲ್ಲಾ, ಅದನ್ನೂ ನೋಡಿ, ಸಹಿಸಿಕೊಂಡಿರಲು ನಿನ್ನಿಂದ ಆಗುತ್ತಿಲ್ಲ ಅಲ್ಲವಾ ? ಅವಳ ಬಾಳನ್ನೂ ಕಿತ್ತು ಹಾಕಲು ಹವಣಿಸುತ್ತಿದ್ದೀ ಅಲ್ಲವಾ ? ಅವಳ ಬಾಳು ಹಾಳಾದರೆ ನನ್ನ ಮಗನ ಬಾಳೂ ಹಾಳಾದಂತೆಯೇ ಎಂಬ ಭಾವನೆಯೂ ನಿನಗೆ ಬರುತ್ತಲೇ ಇಲ್ಲವಲ್ಲಾ !ನಿನ್ನಲ್ಲಿ ತಾಯಿಯ ಮಮತೆ ಮಗನ ಬಗ್ಗೆ ಎಷ್ಟೊಂದು ಇದೆ ಎಂಬುದು ಇದರಿಂದಲೇ ಗೊತ್ತಾಗುತ್ತಿದೆ. ಇನ್ನು ಒಂದು ಕ್ಷಣವೂ ಈ ಮನೆಯಲ್ಲಿ ನಾನು ಇರಲಾರೆ. ನನ್ನ ಹೆಂಡತಿಯನ್ನೂ ಇಂತಹ ನರಕ ಕೂಪದಲ್ಲಿ ಹಾಕಲಾರೆ. ಈಗಲೇ ನಾನು ಬೇರೆ ಮನೆ ಮಾಡಲು ನಿರ್ಧರಿಸಿದ್ದೇನೆ. "ಎನ್ನುತ್ತಾ ಕನಿಕರದಿಂದ ಹೆಂಡತಿಯ ಕಡೆ ನೋಡಿದ. ಕಂಗೆಟ್ಟು-ಕಂಗಾಲಾಗಿದ್ದ ಅವರ ನಿಸ್ತೇಜ ಮುಖದಲ್ಲಿ ಗಾಬರಿ, ಭಯ ತಾಂಡವವಾಡುತ್ತಿತ್ತು. ಮತ್ತೆ ಬಿಕ್ಕುವ ದನಿಯಲ್ಲಿಯೇ ಗಂಡನ ಪಾದಗಳನ್ನು ಭದ್ರವಾಗಿ ಹಿಡಿದು, ಕೇಳಿಕೊಂಡಳು. ರೀ, ಆತುರ ಪಡಬೇಡಿ ಆದದ್ದು ಆಯಿತು. ನಿಮಗೆ ನನ್ನ ಶೀಲದ ಬಗ್ಗೆ ಯಾವ ಸಂದೇಹವೂ ಇಲ್ಲ ಎಂಬುದನ್ನು ತಿಳಿದು, ನನಗಂತೂ ಸ್ವರ್ಗ ಸುಖ ಲಭಿಸಿದಷ್ಟು ಸಂತೋಷ ಆಗಿದೆ. ಆದರೆ ಮನೆ ಬಿಟ್ಟು ಹೊರಗೆ ಹೋಗಲು ನೀವು ನಿರ್ಧರಿಸಿರುವುದನ್ನು ಕಂಡು, ಅಷ್ಟೇ ಭಯ ಹಾಗೂ ಗಾಬರಿ ಆಗಿದೆ. ಜನನಿಂದೆಗೆ ನನ್ನನ್ನೇಕೆ ಗುರಿ ಪಡಿಸುತ್ತಿದ್ದೀರಿ ? ಕಿರಿಯ ಸೊಸೆ ಬಂದು ಒಲೆ ಎರಡು ಮಾಡಿದಳು ಎಂದು ಆಡಿಕೊಳ್ಳುವುದಿಲ್ಲವೇ ? ನಿಮ್ಮ ದಮ್ಮಯ್ಯ, ಅಂತಹ ಕೆಟ್ಟ ಹೆಸರು ನನಗೆ ತರಬೇಡಿ. ಎಷ್ಟಾದರೂ ಏನೇ ಅಂದರೂ ಅವರು ನಿಮ್ಮ ತಾಯಿ. ತಾಯಿ-ಮಗ ನನ್ನ ದೆಸೆಯಿಂದ ಅಗಲುವಂತಾಗುವುದನ್ನು ನೋಡಿಕೊಂಡು ಇರಲು ನನ್ನಿಂದ ಸಾಧ್ಯವಿಲ್ಲ. ನನ್ನ ಮನಸ್ಸಿಗೂ ಹಿತವೆನಿಸುತ್ತಿಲ್ಲ." ಎಂದು ಸಾಧ್ವಿ ಬಿಚ್ಚು ಮನದಿಂದ ಸತ್ಯವನ್ನೇ ನುಡಿದಳು.

ಪದ್ಮನಾಭನಿಗೆ ತನ್ನ ಪತ್ನಿಯ ದೂರಾಲೋಚನೆ ಹಾಗೂ ಸಮಯದಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ನೀಡಿದ ಸೂಕ್ತ ಸಲಹೆಯನ್ನು ಕಂಡು, ಹಿಡಿಸಲಾರದಷ್ಟು ಆನಂದ ಆಯಿತು. ಆದರೆ ಇನ್ನು ತನ್ನ ಮಡದಿಯ ಹೃದಯಕ್ಕೆ ಯಾರಿಂದಲೂ ನೋವು ಸಂಭವಿಸುವಂತೆ ಮಾಡಲು ಎಷ್ಟೇ ಸಮಾಧಾನ ತಂದುಕೊಂಡರೂ ಸಾಧ್ಯ ಆಗಲಿಲ್ಲ. ಮಡದಿಯ ಬಳಿ ಸಾರಿದ. ಅವಳ ಕೃಶಲಾಗಿದ್ದ ಕೈಗಳನ್ನು ಮೃದುವಾಗಿ ಹಿಡಿದು, ನೇವರಿಸುತ್ತಾ ಹೇಳಿದ. "ಪದ್ಮಾ, ಇವರೆಲ್ಲರ ದೃಷ್ಟಿಯಲ್ಲಿ ನಾವಿಬ್ಬರೂ ಪೆದ್ದು-ಪೆದ್ದಾಗಿ ಕಾಣಬಹುದು. ಆದರೆ ನಮ್ಮ ಸಾತ್ವಿಕ ಬುದ್ಧಿ, ಸಾರ್ಥಕ. ಜೀವನ ಇವರಿಗೆ ಹೇಗೆ ತಾನೇ ತಿಳಿದೀತು. ನಿನ್ನಂತಹ ಕಷ್ಟ ಸಹಿಷ್ಣು, ದೂರಲೋಚಕಿ, ತ್ಯಾಗದಲ್ಲಿ ಪ್ರೇಮ ಭಾವನೆಯನ್ನು ತುಂಬಿಸಿಕೊಂಡಿರುವವಳನ್ನು ದೇವರು ನನಗೆ ಅನುಗ್ರಹಿಸಿದ್ದಾನಲ್ಲಾ ! ನನಗಷ್ಟೇ ಸುಕೃತ ಸಾಕು. ನೀನೇನೇ ಹೇಳಿದರೂ ನಾನಂತೂ ನಿನ್ನನ್ನು ಈ ಮನೆಯಲ್ಲಿ ಇರಿಸುವುದಿಲ್ಲ. ನಾನೂ ಇರುವುದಿಲ್ಲ, ಬೇರೆ ಮನೆ ಮಾಡಲೇಬೇಕು. ಇಂತಹವರಿಗೆ ಬುದ್ಧಿ ಕಲಿಸಲೇಬೇಕು. "ಎನ್ನುತ್ತಾ ಹಿಡಿದಿದ್ದ ಹಸ್ತವನ್ನು ಮೃದುವಾಗಿ ಅದುಮಿ, ಅಲ್ಲಿಂದ ಹೊರ ಹೊರಟ. ಅತ್ತೆ ಸಿಡಿದ ಸೀಗೇಕಾಯಿಯಂತೆ ಮೂಗು-ಮೂತಿ ಸಿಂಡರಿಸುತ್ತಾ ಮನೆಯೊಳಗೆ ಹೋಗಿ, ಧಡಾರೆಂದು ಬಾಗಿಲು ಹಾಕಿಕೊಂಡಳು. ಪದ್ಮಾವತಿ ಹಾಗೆಯೇ ಕಣ್ಣು ಮುಚ್ಚಿ ಸಂತೋಷಿ ಮಾತೆಯನ್ನು ಸ್ಮರಿಸಿದಳು. ಅವಳಿಗೆ ಅರಿವಿಲ್ಲದಂತೆಯೇ ಎರಡೂ ಕೈಗಳೂ ಜೋಡಿಸಿಕೊಂಡುವು. ಕಣ್ಣುಗಳಿಂದ ಕಣ್ಹನಿಗಳು ಒಂದೊಂದಾಗಿ ಮುತ್ತಿನ ಮಾದರಿಯಲ್ಲಿ ಅವಳ ಕೆನ್ನೆಗಳ ಮೇಲೆ ಉರುಳ ತೊಡಗಿದುವು. ದುಃಖದ ಕಣ್ಣೀರೋ, ಆನಂದ ಬಾಷ್ಪವೋ ಹೇಳಲು ಆಗುತ್ತಿಲ್ಲ.

ಪದ್ಮನಾಭ ಹಳ್ಳಿಯಿಂದ ಹೊರಗೆ ಪೇಟೆಯಲ್ಲಿ ಒಂದು ಮಹಡಿಯ ಮನೆಯನ್ನು ಕೊಂಡು ಕೊಂಡ, ಅವನಿಗೆ ತಾಯಿಯ ಹಾಗೂ ಅವನ ಬಂಧುಗಳ ನೆರಳು ಸೋಕಿಸಿಕೊಳ್ಳಲೂ ಇಷ್ಟವೆನಿಸಲಿಲ್ಲ. ತನ್ನ ಸಾಮಾನುಗಳನ್ನೆಲ್ಲಾ ಹೊಸ ಮನೆಗೆ ಸಾಗಿಸಿದ. ಮಡದಿಯೊಂದಿಗೆ ಹೊಸ ಮನೆಯ ಕಡೆ ನಡೆದ. ಪದ್ಮಾವತಿ ಒಲ್ಲದ ಮನಸ್ಸಿಂದಲೇ ಅವನೊಂದಿಗೆ ನಡೆದಳು. ಅತ್ತೆ ಏನೇ ಅಂದಿದ್ದರೂ, ಮನೆ ಮಂದಿ ಏನೇ ಕಿರುಕುಳ ಕೊಟ್ಟಿದ್ದರೂ ಸಹ ಮನೆ ಬಿಟ್ಟು

Sri Vidyabharathi Book Centre, Sringeri

CC-O. In Public Domain. Digitized by eGangotri

ಹೋಗುವಾಗ ಅವಳ ಕಣ್ಣುಗಳಲ್ಲಿ ಸಹಜವಾಗಿ ಕಣ್ಣೀರು ಉರುಳಿತ್ತು. ಅತ್ತೆ ಅದನ್ನು ಮೊಸಳೆ ಕಣ್ಣೀರು ಎಂದು ಅಲ್ಲಗಳೆದಿದ್ದಳು.

ಕೆಲವೇ ದಿನದಲ್ಲಿ ಮನೆ ಅರಮನೆಯಂತೆ ಕಂಗೊಳಿಸತೊಡಗಿತು. ಮನೆಯ ಕೆಳಭಾಗದಲ್ಲಿಯೇ ಪದ್ಮನಾಭಾ ಒಂದು ಅಂಗಡಿಯನ್ನು ತೆರೆದ. ಅದರಲ್ಲಿ ತನಗಿಷ್ಟವಾದ ಸಂಗೀತ-ಸಾಧಾನಗಳಾದ ವೀಣೆ, ತಂಬೂರಿ, ಮೃದಂಗ ಮೊದಲಾದ ವಾದ್ಯ ಸಾಮಗ್ರಿಗಳನ್ನು ತಂದಿಟ್ಟ. ದಿನವೂ ಪ್ರಾತರ್ವಿಧಿಯ ನಂತರ ದೇವರ ನಾಮಗಳನ್ನು ವೀಣೆ ನುಡಿಸುತ್ತಾ ಸುಶ್ರಾವ್ಯವಾಗಿ ಹಾಡ ತೊಡಗಿದ. ಪದ್ಮಾವತಿ ಸಂತೋಷೀಮಾತೆಯನ್ನು ಮರೆಯಲಿಲ್ಲ. ದೇವರ ನಾಮ ಪದ್ಮನಾಭ ಹಾಡುತ್ತಿದ್ದರೆ ತಾನು ಆಲಿಸುತ್ತಾ ಮಾತೆಯ ಭಕ್ತಿ ಪ್ರವಾಹದಲ್ಲಿ ತನ್ಮಯತೆಯಿಂದ ತೇಲಿ ಹೋಗುತ್ತಿದ್ದಳು. ನಿಜಕ್ಕೂ ಅವಳ ಜೀವನ ಈಗ ಬಹುಮಟ್ಟಿಗೆ ಸ್ವರ್ಗ ಸದೃಶ ಎನಿಸತೊಡಗಿತ್ತು. ಆಗಲೂ ಸಹ ಅತ್ತೆಯ ಮನೆಗೆ ಹೋಗಿ ಬರುವುದನ್ನು ಬಿಟ್ಟಿರಲಿಲ್ಲ. ಮನೆಯ ಕೆಳಗೆ ಬುಟ್ಟಿ ಗಳಲ್ಲಿ ಹಣ್ಣು-ಹಂಪಲು, ಸಿಹಿ ತಿಂಡಿಗಳನ್ನು ಕೊಂಡೊಯ್ಯುವುದನ್ನು ಮರೆ ತಿರಲಿಲ್ಲ. ಇಷ್ಟಾದರೂ ಅತ್ತೆಗೂ, ಮನೆಮಂದಿಗೂ ಈ ಸಾಧ್ವಿಯ ಬಗ್ಗೆ ಸದ್ಭಾವನೆ ಮೂಡಿರಲಿಲ್ಲ. ದ್ವೇಷಾಸೂಯೆಯ ದುಷ್ಪ್ರವೃತ್ತಿಗಳು ಉಲ್ಬಣಿಸತೊಡಗಿದ್ದುವು. ಪದ್ಮಾವತಿಗೆ ಅರ್ಥವಾದರೂ ಸಹ ಯಾರೊಬ್ಬ ರೊಂದಿಗೂ ಸ್ನೇಹ ಸಲಹೆಯಿಂದಲೇ, ಪ್ರೀತಿವಾತ್ಸಲ್ಯದಿಂದಲೇ ವರ್ತಿಸ ತೊಡಗಿದಳು.

ಈಗ ಸಂತೋಷಿಮಾತೆಯ ಶುಕ್ರವಾರದ ವ್ರತಗಳೆಲ್ಲವೂ ಮುಗಿದಿದ್ದುವು ಉದ್ಯಾಪನೆಯ ಕಾರ್ಯ ಮಾತ್ರ ಉಳಿದಿತ್ತು. ಉದ್ಯಾಪನೆಯ ಕಾರ್ಯ ವನ್ನು ಅದ್ದೂರಿಯಿಂದ ನಡೆಸುವ ಆಕಾಂಕ್ಷೆ ಪದ್ಮಾವತಿಯ ಹೃನ್ಮಂದಿರದಲ್ಲಿ ಅಂಕುರಿಸತೊಡಗಿತು. ಪತಿಯೊಂದಿಗೆ ತನ್ನ ಮಹತ್ವಾಕಾಂಕ್ಷೆಯನ್ನು ಮನವರಿಕೆ, ಮಾಡಿಕೊಂಡಳು ಪದ್ಮನಾಭನೂ ಸಂತೋಷದಿಂದ ಒಪ್ಪಿದ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪುರೋಹಿತರನ್ನು ಕರೆಯಿಸಿ ಶುಭಕಾರ್ಯಕ್ಕಾಗಿ ಶುಭದಿನವನ್ನು ನಿಶ್ಚಿಯಗೊಳಿಸಿದ.

ನಿಶ್ಚಿತ ದಿನವೂ ಬಂದೇ ಬಿಟ್ಟಿತು. ಪದ್ಮಾವತಿಯ ಸಂಭ್ರಮ-ಸಡಗರ ಹೇಳತೀರದು. ತನ್ನ ಅತ್ತಿಯ ಮನೆಯವರೆನ್ನೆಲ್ಲಾ ತಾನೇ ಹೋಗಿ, ಕರೆ ತಂದಳು. ಮಕ್ಕಳುಗಳಂತೂ ಸಿಹಿ ಹಣ್ಣು, ಸಿಹಿ ತಿಂಡಿಗಳ ಆಸೆಗೆ, ಈ ಮೊದಲು ಚಿಕ್ಕಮ್ಮನ ಹತ್ತಿರವೇ ಸೇರದಿದ್ದವರು ಈಗ "ಚಿಕ್ಕಮ್ಮಾ, ನಮಗೆ ಅದುಬೇಕು, ಇದುಬೇಕು" ಎಂದು ಕಾಡುತ್ತಿದ್ದರು. ಪದ್ಮಾವತಿ ಬೇಸರಿಸದೆ ಪುತ್ರ ವಾತ್ಸಲ್ಯದಿಂದಲೇ ಅವರು ಕೇಳಿದುದನ್ನೆಲ್ಲಾ ತರಿಸಿಕೊಡುತ್ತಿದ್ದಳು. ಉದ್ಯಾಪನೆಯ ವ್ರತದ ಸಮಯದಲ್ಲಿ ಶಾಸ್ತ್ರೋಕ್ತವಾಗಿ ಒಂಭತ್ತು ಮಂದಿ ಬಾಲಕರಿಗೆ ಊಟೋಪಚಾರ ಮಾಡಬೇಕಿತ್ತು. ಈ ಕಾರ್ಯಕ್ಕೂ ತನ್ನ ಅತ್ತಿಗೆಯರ ಮಕ್ಕಳನ್ನೇ ಕೂಡಿಸಿದಳು. ಹುಳಿ ತಿನ್ನದಿರಲು ಎಚ್ಚರಿಸಿದಳು. ಆದರೆ ಓರಗಿತ್ತಿಯರು ಮಕ್ಕಳಿಗೆ ವ್ರತಭಂಗ ಮಾಡುವ ಉದ್ದೇಶದಿಂದ ಹೇಗಾದರೂ ಹುಳಿ ತಿನ್ನಿಸಲು ಉದ್ಯುಕ್ತರಾದರು. ಮಕ್ಕಳು ಹುಳಿ ತಿಂಡಿಗಾಗಿ ಕಾಡಿಸ-ಪೀಡಿಸ ತೊಡಗಿದರು. ಅವರೆಲ್ಲರ ಕಿರುಕುಳವನ್ನು ಶಾಂತರೀತ್ಯದಲ್ಲೇ ಸಹಿಸಿಕೊಂಡು, ಬುದ್ಧಿ ಹೇಳಿದಳು. ಕಡೆಗೆ ಒಂದೆರಡು ರೂಪಾಯಿಯನ್ನಾದರೂ ಕೊಡಲು ಮಕ್ಕಳು ಚಿಕ್ಕಮ್ಮನ ಬಳಿ ಅಂಗಲಾಚಿದರು. ಮಕ್ಕಳ ಮೇಲಿನ ಮಮತೆಯಿಂದ ಪದ್ಮಾವತಿ ಮೈಮರೆತು ಅವರೆಲ್ಲರಿಗೂ ಒಂದೊಂದು ರೂಪಾಯಿ ಕೊಟ್ಟು ಬಿಟ್ಟಳು. ವ್ರತದ ಪೂಜಾ ವಿಧಿಗಳನ್ನು ಪೂರ್ಣಗೊಳಿಸುವ ಜವಾಬ್ದಾರಿಯಲ್ಲಿ ಮಕ್ಕಳ ಕಡೆ ಅಷ್ಟಾಗಿ ಗಮನ ಕೊಡಲಿಲ್ಲ. ಮಕ್ಕಳು ಅವರ ತಾಯಿಂದಿರ ಅಸೂಯೆಯ ಮಾತಿಗೆ ಒಳಗಾಗಿ, ಅಂಗಡಿಗಳಿಗೆ ಹೋಗಿ, ಹುಳಿ ತಿಂಡಿ ತಿಂದು ಬಂದೇ ಬಿಟ್ಟರು.

ಇತ್ತ ಉದ್ಯಾಪನೆಯ ವ್ರತ ಮುಗಿಯಿತು. ಊಟವು ಎಲ್ಲರದೂ ಆಗುತ್ತಿದ್ದಂತೆ ರಾಜಭಟರು ಬಂದು, ಪದ್ಮನಾಭನ ಕೈಗೆ ಶೃಂಖಲೆಗಳನ್ನು ತೊಡಿಸಿ, ಆಸ್ಥಾನಕ್ಕೆ ಕರೆದೊಯ್ದರು. ಈ ಆಕಸ್ಮಿಕ ಘಟನೆಯನ್ನು ಕಂಡು

Sri Vidyabharathi Book Centre, Sringeri

CC-O. In Public Domain. Digitized by eGangotri

ಎಲ್ಲರೂ ಬೆಕ್ಕಸಬೆರಗಾದರು. ಅತ್ತೆಗೂ, ಓರಗಿತ್ತಿಯರಿಗೂ ಆದ ಆನಂದ ಅಷ್ಟಿಷ್ಟಲ್ಲ. ಅತ್ತೆ ಅಂತೂ "ಅದೆಲ್ಲಿಂದ ಏನೇನು ಕದ್ದು ತಂದಿದ್ದನೋ, ಹಿಡಿದುಕೊಂಡು ಹೋದರು. ಸರಿಯಾದ ಪ್ರಾಯಶ್ಚಿತ್ತ, ವ್ರತದ ದಿನವೇ ಆಯಿತು, ಮಾಡಿದ್ದುಣ್ಣೋ ಮಹಾರಾಯ ಎಂಬಂತೆ" ಎಂದು ಮೂದಲಿಸುತ್ತಾ ತನ್ನ ಮನೆಗೆ ಎಲ್ಲಾ ಸೊಸೆಯರು, ಮಕ್ಕಳೊಂದಿಗೆ ಮರಳಿದಳು

ಪದ್ಮಾವತಿಗೆ ದುಃಖ ತಡೆಯಲಾಗಲಿಲ್ಲ. ಉದ್ಯಾಪನೆಯ ದಿನವೇ ಮಾತೆಯ ಅನುಗ್ರಹ ಏಕೆ ಲಭಿಸಲಿಲ್ಲ ? ಹೀಗೇಕಾಯಿತು ? ನನ್ನಿಂದ ಏನು ಲೋಪ ಆಯಿತು ? ವೃಥಾ ಅತ್ತೆ-ಓರಗಿತ್ತಿಯರಿಂದ ಇಂತಹ ನಿಂದೆಯ ಮಾತುಗಳನ್ನು ಕೇಳಬೇಕಾಗಿ ಬಂತೇ ? ರಾಜಭಟರು ತನ್ನ ದೇವರಂತಹ, ಏನೂ ತಿಳಿಯದ ಗಂಡನನ್ನು ಏಕೆ ಹೀಗೆ ಬೇಡಿಗಳನ್ನು ಕೈಗಳಿಗೆ ತೊಡಿಸಿ ಕರೆದುಕೊಂಡು ಹೋದರು ? ಎಂದು ತುಂಬಾ ಕಾಲ ದಿಕ್ಕು ತೋಚದೆ ಯೋಚಿಸುತ್ತಾ ಕುಳಿತಳು. ಕಡೆಗೆ ಯಾವ ಸಮಾಧಾನದ ಉತ್ತರವೂ ದೊರೆಯದೆ ಮನಸ್ಸಿನ ಶಾಂತಿ ಸಾಗರ ಕದಡಿತು. ತರಂಗಗಳೆದ್ದು ಅಶಾಂತಿಯ ಗದ್ದಲವೋ ಗದ್ದಲ ಮಾಡಿದುವು. ತಲೆಯೇ ಚಿಟ್ಟು ಹಿಡಿದಂತಾಯಿತು.

ಕೂಡಲೇ ಕಾಡಿನಲ್ಲಿದ್ದ ಪಾಳು ಗುಡಿಗೆ ಧಾವಿಸಿದಳು. ಮಾತೆಯ ಮೂರ್ತಿಯ ಪಾದಾರವಿಂದಗಳ ಮೇಲೆ ದುಃಖದಿಂದ ತಲೆ ಕುಟ್ಟಿಕೊಳ್ಳುತ್ತಾ, ರೋದಿಸುತ್ತಾ ಕೇಳಿದಳು. "ಅಮ್ಮಾ, ಯಾಕಮ್ಮಾ ಹೀಗೆ ಇಂತಹ ಅವಮಾನಕ್ಕೆ ಗುರಿ ಮಾಡಿದೆ ? ನೀನೇ ದಿಕ್ಕು ಎಂದು ನಂಬಿರುವ ನನ್ನ ಮೇಲೆ ನಿನಗೇಕಮ್ಮಾ ಸಿಟ್ಟು ಬಂತು ? ಸಿಟ್ಟು ಬರುವಂತಹ ಕೆಲಸವನ್ನು ತಾನೇ ನಾನೇನು ಮಾಡಿದೆನಮ್ಮಾ ? ಶ್ರದ್ಧೆ-ಭಕ್ತಿಯಿಂದ, ನಿಷ್ಠೆ-ನಿಯಮಗಳೊಂದಿಗೆ ನಿನ್ನ ಪೂಜೆ ಮಾಡಿದ್ದಕ್ಕೆ ನೀನು ನನಗೆ ಕೊಟ್ಟ ಫಲ ಇದೇನಾ ? ನಿನಗೆ ಕೋಪವಿದ್ದರೆ ನನ್ನ ಮೇಲೆ ತೀರಿಸಿಕೊಳ್ಳಬಹುದಿತ್ತು. ಪಾಪ, ಏನೂ ಅರಿಯದ ಮುಗ್ಧ ಮಗುವಿನಂತಹ ನನ್ನ ಪತಿಯ ಮೇಲೆ ಯಾಕಮ್ಮಾ ಇಷ್ಟೊಂದು ಸಿಟ್ಟಾದೆ ? ಇಂತಹ ಅವಮಾನಕ್ಕೆ ಗುರಿ ಮಾಡಿ, ಎಲ್ಲಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾತು ಕೇಳುವ ಹಾಗೆ ಮಾಡಿದೆ ? ಎಂದು ಬಿಕ್ಕಿ ಅಳತೊಡಗಿದಳು. ಅವಳ ರೋದನದಕ್ರಂದನವನ್ನು ಕಂಡು ಕಾಡಿಗೆ ಕಾಡೇ ಕಣ್ಣೀರಿಟ್ಟಿತೇನೋ ಎನ್ನು ವಂತೆ ಭಾಸವಾಯಿತು.

ಇದ್ದಕ್ಕಿದ್ದಂತೆ ಗುಡುಗು-ಸಿಡಿಲು ಬಂದಂತೆ ಆಸ್ಫೋಟ ಆಯಿತು. ಮತ್ತೆ ಆಕಾಶದಲ್ಲಿ ಅಶರೀರವಾಣಿ ಕೇಳಿಸಿತು. "ಮಗಳೇ, ನಿನ್ನಿಂದ ಬೇಕಾಗಿ ಯಾವ ಲೋಪವೂ ವ್ರತದ ಉದ್ಯಾಪನೆಯಲ್ಲಿ ಉಂಟಾಗಿಲ್ಲ. ಆದರೆ ನಿನ್ನ ಬೇಹುಷಾರಿನಿಂದ, ಮುನ್ನೆಚ್ಚರಿಕೆ, ಮುಂದಾಲೋಚನೆ ಇಲ್ಲದಿದ್ದುದರಿಂದ ಇಂತಹ ದುರವಸ್ಥೆಗೆ ಒಳಗಾದೆ. ನೀನು ಆ ಹುಡುಗರಿಗೆ ರೂಪಾಯಿ ಏಕೆ ಕೊಡಬೇಕಿತ್ತು ? ಅವರು ಆದರಿಂದ ಹುಳಿ ತಿಂಡಿ ತಿಂದು ಬಂದು ವ್ರತ ಭಂಗ ಮಾಡಿದರು. ವ್ರತ ಭಂಗವಾದರೆ ಏನಾಗುವುದೆಂಬುದು ನಿನಗೂ ತಿಳಿದಿದ್ದ ವಿಷಯ ತಾನೇ ? ಆದರೂ ಇನ್ನು ಅಳಬೇಡ. ನೀನೂ ನನ್ನ ಮಗಳೇ ಅಲ್ಲವಾ ? ನೆಮ್ಮದಿಯಿಂದ ಮನೆಗೆ ಹೋಗು. ಮತ್ತೆ ಉದ್ಯಾಪನೆಯ ವ್ರತ ಮಾಡು, ಎಚ್ಚರಿಕೆಯಿಂದ ಇರು, ನೀನು ಮನೆ ಸೇರಿದ ಕೆಲವೇ ಕಾಲದಲ್ಲಿ ನಿನ್ನ ಗಂಡನೂ ಹಿಂದಿರುಗಿ ಬರುತ್ತಾನೆ. ನನ್ನ ಅನುಗ್ರಹ ನಿನಗಿರುವಾಗ ತೊಂದರೆ ಉಂಟಾಗದು." ಎಂದು ಹೇಳಿ, ಅಭಯ ಹಸ್ತವನ್ನು ತೋರಿಸುತ್ತಾ, ಬೀಳ್ಕೊಟ್ಟಳು.

ಪದ್ಮಾವತಿಗೆ ಬಾಡಿ ಹೋಗಿದ್ದ, ಮುದುಡಿ ಹೋಗಿದ್ದ ಮುಖ ಕಮಲ ಮತ್ತೆ ಅರಳಿತು, ಆನಂದಗೊಂಡಿತು. ತಾಯಿಯನ್ನು ಮನಸಾರೆ ಸ್ತುತಿಸಿ, ಸಾಕಷ್ಟು ಬಾರಿ ನಮಿಸಿ ಮನೆಗೆ ಹಿಂದಿರುಗಿ ಬಂದಳು. ಬಂದ ಕೆಲವೇ ಕಾಲ ದಲ್ಲಿ ಪದ್ಮನಾಭನೂ ರಾಜಸನ್ಮಾನದೊಂದಿಗೆ ಹಿಂದಿರುಗಿದನು. ಹಿಂದಿರುಗಿ ಬಂದ ಗಂಡನನ್ನು ಕಂಡು ಪದ್ಮಾವತಿ ಕಾತುರದಿಂದ ಕೇಳಿದಳು. "ಯಾಕೆ ಹೀಗಾಯಿತು ? ನೀವೇನು ಅಪರಾಧ ಮಾಡಿದ್ದಿರಿ ? ರಾಜ ದಂಡನೆ ಗುರಿಯಾಗಿ ದ್ದಿರಿ ?" ಅವಳ ಕಣ್ಣುಗಳು ಪತಿಯ ಬಾಯಿಂದ ಮಾರುತ್ತರವನ್ನು ಆಲಿಸಲು ಕುತೂಹಲಗೊಂಡಿದ್ದುವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಪದ್ಮನಾಭ ನಸುನಗುತ್ತಾ ಹೇಳಿದ. "ನಾನೇನೂ ಅಪರಾಧ ಮಾಡಿಲ್ಲ. ಯಾರೋ ನನ್ನ ಐಶ್ವರ್ಯವನ್ನು ಕಂಡು, ಕಿಚ್ಚಿನಿಂದ ರಾಜನ ಬಳಿ ಸುಳ್ಳು ದೂರು ಹೇಳಿದ್ದರಂತೆ. ಅದನ್ನು ನಿಜವೆಂದೇ ನಂಬೀ, ರಾಜ ನನ್ನನ್ನು ಆಸ್ಥಾನಕ್ಕೆ ಕರೆಸಿಕೊಂಡಿದ್ದರು. ನನ್ನಿಂದ ಸಕಲ ವಿಚಾರವನ್ನೂ ತಿಳಿದ ನಂತರ ನನ್ನಲ್ಲಿರುವ ಸಂಪತ್ತಿಗೆ ಸರಿಯಾದ ತೆರಿಗೆ ಹಣವನ್ನು ನೀಡಲು ಸಲಹೆ ಮಾಡಿದರು. ಅಲ್ಲದೆ ಆಸ್ಥಾನದ ಸ್ಥಾನಿಕರಲ್ಲಿ ನನಗೂ ಸ್ಥಾನವನ್ನು ನೀಡಿ ಗೌರವಿಸಿದರು. ಆದದ್ದೆಲ್ಲಾ ಒಳ್ಳೆಯದೇ ಆಯಿತು." ಎಂದು ನೆಮ್ಮದಿಯ ಉಸಿರೆಳೆದನು.

ಪದ್ಮಾವತಿಗೋ ಇದೆಲ್ಲಾ ಸಂತೋಷಿ ಮಾತೆಯ ಕೃಪೆ ಎಂದು ತಿಳಿದು ಸಂತೋಷವೋ ಸಂತೋಷ ಉಂಟಾಯಿತು. ಗುಡಿಯಲ್ಲಿ ಮಾತೆ ಹೇಳಿದುದೆಲ್ಲವನ್ನೂ ತಿಳಿಸಿದಳು. ಮತ್ತೆ ಉದ್ಯಾಪನೆ ವ್ರತವನ್ನು ಮಾಡಲು ಕೇಳಿಕೊಂಡಳು ಪದ್ಮನಾಭನಿಗೂ ಮಾತೆಯ ಬಗ್ಗೆ ಭಕ್ತಿ-ಗೌರವ ಭಾವನೆ ಬೆಳೆದಿತ್ತು. ತನ್ನ ಮಡದಿಯ ಮಾತನ್ನು ಸಂತೋಷದಿಂದ ಒಪ್ಪಿ, ಸಮ್ಮತಿ ನೀಡಿದನು.

ಮತ್ತೊಂದು ಶುಭ ದಿನದಂದು ಉದ್ಯಾಪನೆಯ ಕಾರ್ಯ ಪ್ರಾರಂಭವಾಯಿತು. ಪದ್ಮಾವತಿ ಈ ಬಾರಿ ತುಂಬಾ ಎಚ್ಚರಿಕೆ ವಹಿಸಿದ್ದಳು. ಪೂಜಾ ಕ್ರಮದಲ್ಲಿ ಯಾವ ರೀತಿಯಲ್ಲೂ ಲೋಪ ಉಂಟಾಗದ ರೀತಿಯಲ್ಲಿ ಕಣ್ಣಲ್ಲಿ ಕಣ್ಣಿಟ್ಟು ನೋಡಿಕೊಂಡಿದ್ದಳು. ಈ ಬಾರಿಯೂ ಬೇಸರಿಸದೆ ತನ್ನ ಅತ್ತೆಯ ಮನೆಯವರನ್ನೆಲ್ಲಾ ಕರೆಯಿಸಿದ್ದಳು. ಮಕ್ಕಳೆಲ್ಲರನ್ನೂ ಮನಸ್ಸಂತೋಷಗೊಳಿಸಿದ್ದಳು. ಆದರೆ ಯಾರಿಗೂ ಕೈಗೆ ಹಣ ಕೊಟ್ಟಿರಲಿಲ್ಲ ಊಟಕ್ಕೂ ನೆರೆಯ ಬೇರೆಯ ಬಾಲಕನ್ನು ಕರೆಯಿಸಿದಳು.

ಈ ಬಾರಿ ಜಗನ್ ಮಾತೆ ಸಂತೋಷಿ ಮಾತೆಗೇ ಉದ್ಯಾಪನೆಯ ಕಾರ್ಯ ಎಷ್ಟೊಂದು ವಿಜೃಂಭಣೆಯಿಂದ ನಡೆಯುತ್ತಿದೆ ಎಂಬುದನ್ನು ತಿಳಿದು ಸಂತೋಷಿಸಲು ಮಾನವ ರೂಪಿನಲ್ಲಿಯೇ ಹೋಗಿ ಬರುವ ಮನಸಾಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಹಣ್ಣು ಹಣ್ಣು ಮುದುಕಿಯು, ಹರಕಲು ಬಟ್ಟೆಯ, ಮೈ-ಕೈ ಎಲ್ಲಾ ಗಾಯಗೊಂಡ ರೂಪಿನಲ್ಲಿ ಉದ್ಯಾಪನೆಯ ಸಭಾಂಗಣವನ್ನು ಪ್ರವೇಶಿಸಿದಳು. ಮೊದಲು ದರ್ಶನ ನೀಡಿದ್ದೇ ಪದ್ಮಾವತಿಯ ಅತ್ತೆಗೆ. ಅತ್ತೆ ಮಾತೆಯ ನಿಜ ಸ್ವರೂಪವನ್ನು ಗುರ್ತಿಸಲಾಗದೆ ಅಸಹ್ಯ ಪಟ್ಟಳು. ಜೊತೆಗೆ ತನ್ನ ಸೊಸೆಯಂದಿರನ್ನು ಕರೆದಳು. ಈ ಕಜ್ಜಿ ನಾಯಿಯಂತಹ ಮುದುಕಿಯನ್ನು ಮೊದಲು ಇಲ್ಲಿಂದ ಹೊಡೆದೋಡಿಸಿ ಎಂದು ಹೌ ಹಾರಿದಳು. ಎಲ್ಲಾ ಸೊಸೆಯರೂ ಅವಳನ್ನು ತಳ್ಳಿಕೊಂಡು ಹೊರ ಬಾಗಿಲಿಗೆ ತಂದರು. ಹುಡುಗರು ಹುಚ್ಚಿ ಎಂದು ಕಲ್ಲು ತೂರತೊಡಗಿದರು. ಮಾತೆಯ ಮೈ-ಕೈಗಳಲ್ಲಿ ಗಾಯದ ರಕ್ತ ಇನ್ನೂ ಹೆಚ್ಚು ಸುರಿಯತೊಡಗಿತು ಆದರೆ ಮುದುಕಿಯ ಮುಖದಲ್ಲಿ ಅಳುವಿನ ಛಾಯೆಯೇ ಕಂಡುಬರುತ್ತಿಲ್ಲ. ನಸು ನಗುತ್ತಲೇ ಇದ್ದಳು.

ಇದೇನು ಗದ್ದಲ ಎಂದು ಪದ್ಮಾವತಿ ಸಂದೇಹಿಸಿ, ಹೊರ ಬಾಗಿಲ ಬಳಿಗೆ ಬಂದಳು. ನಡೆಯುತ್ತಿರುವ ಹಗರಣವನ್ನು ಸೂಕ್ಷ್ಮ ಬುದ್ಧಿ, ಸೂಕ್ಷ್ಮ ದೃಷ್ಟಿಯಿಂದ ಗ್ರಹಿಸಿದಳು. ಇಷ್ಟೊಂದು ಕಲ್ಲುಗಳನ್ನು ತೂರಿ ಬಿಟ್ಟರೂ, ನೋವೇ ಆಗದವಳಂತೆ ನಗು ನಗುತ್ತಲೇ ಇರುವಳಲ್ಲಾ ಎಂದು ಹಾಗೆಯೇ ಕ್ಷಣಕಾಲ ನೋಡುತ್ತಲೇ ಇದ್ದಳು. ಎಷ್ಟಾದರೂ ಮಾತೆಯ ಭಕ್ತೆ ತಾನೇ, ಆಕೆಯ ಕೃಪಾನುಗ್ರಹಕ್ಕೆ ಪಾತ್ರಳಾದವಳು ತಾನೇ. ಮುದುಕಿ ಸಂತೋಷಿ ಮಾತೆ ಅಲ್ಲದೆ ಬೇರೆ ಯಾರೂ ಅಲ್ಲ ಎಂಬ ಮನವರಿಕೆ ಆಗಿ ಹೋಯಿತು. ತನ್ನನ್ನು ಪರೀಕ್ಷಿಸಲೆಂದೇ ಈ ರೀತಿ ಬಂದಿರಬಹುದೇ ? ಎಂದು ಯೋಚಿಸುತ್ತಾ ಆಕೆಯ ಬಳಿ ಧಾವಿಸಿದಳು ಅತ್ತೆ-ಓರಗಿತ್ತಿಯರನ್ನು ನಿಂದಿಸಿದಳು ಅವಳ ಉಪಟಳಗಳಿಂದ ಬಿಡಿಸಿ, ಪಾರು ಮಾಡಿದಳು. ಮಾತೆಯ ಪಾದಗಳ ಮೇಲೆ ಬಿದ್ದು ಕ್ಷಮೆ ಕೋರಿದಳು. ಕಣ್ಣೀರು ಸುರಿಸಿದಳು. ತನ್ನ ಅತ್ತೆ-ಓರಗಿತ್ತಿಯರನ್ನು ಮಾಡಿರುವ ಅಪರಾಧಕ್ಕಾಗಿ ಕ್ಷಮಿಸಲು ದೈನ್ಯ ಭಕ್ತಿಯೊಂದಿಗೆ ಪ್ರಾರ್ಥಿಸಿದಳು. ಮುದುಕಿ ಅದೇ ಹಸನ್ಮುಖದೊಂದಿಗೆ ನಿಜರೂಪನ್ನು ತೋರಿಸುತ್ತಾ, ಅಭಯ ಹಸ್ತದೊಂದಿಗೆ ಆಶೀರ್ವದಿಸಿದಳು. ಅತ್ತೆ-ಓರಸಿತ್ತಿಯರಿಗೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಈಗ ಬುದ್ಧಿ ಬಂದಿತ್ತು. ತಮ್ಮ ಹೀನ ಕೆಲಸಕ್ಕಾಗಿ ಪಶ್ಚಾತಾಪದಿಂದ ಪರಿತಪಿಸುತ್ತಾ, ತಲೆ–ತಲೆ ಚಚ್ಚಿಕೊಂಡರು. ತಾಯಿಯ ಪಾದಗಳಿಗೆ ಎರಗಿದರು. ಪದ್ಮಾವತಿಯ ಭಕ್ತಿಯನ್ನು ಕೊಂಡಾಡಿದರು. ಆ ವೇಳೆಗೆ ಪದ್ಮಾನಾಭನೂ ಬಂದ. ಮಾತೆಯ ಸ್ವರೂಪವನ್ನು ಕಣ್ಣಾರೆ ಕಂಡ. ನೆರೆದಿದ್ದವರೆಲ್ಲರೂ ಮಾತೆಯ ದಿವ್ಯ ದರ್ಶನವನ್ನು ಕಂಡು ಬೆರೆಗಾದರು. ಆನಂದಿಸಿದರು, ಮೈಮರೆತರು, ಆಕೆಯ ಮಹಿಮೆಯ ಬೆಳಕು ಮನೆಯನ್ನೆಲ್ಲಾ ಬೆಳ್ಳಿಯ ಬೆಳಕಿನಿಂದ ಪ್ರಜ್ವಲಿಸುವಂತೆ ಮಾಡಿತ್ತು. ಆದರೆ ಮಾತೆ ಅಲ್ಲಿಲ್ಲ. ಇದ್ದಕ್ಕಿದ್ದಂತೆ ಮಾಯವಾಗಿದ್ದಳು. ಅವಳಿದ್ದ ಜಾಗದಲ್ಲಿ ಅದೇ ತಾನೇ ಗಿಡದಿಂದ ಉದುರಿದಂತಿದ್ದ ಹೂಗಳರಾಶಿ ಬಿದ್ದಿದ್ದುವು. ಎಲ್ಲರೂ ಪ್ರಸಾದದ ರೀತಿಯಲ್ಲಿ ಹೂಗಳನ್ನೇ ಕೈಗೆತ್ತಿಕೊಂಡರು. ಕಣ್ಣಿಗೊತ್ತಿಕೊಂಡರು. ಹೆಣ್ಣು ಮಕ್ಕಳು, ಸೌಭಾಗ್ಯವತಿಯರು ಕಣ್ಣಿಗೊತ್ತಿಕೊಂಡ ಹೂಗಳನ್ನು ತಮ್ಮ ಮುಡಿಯೊಳಗಿಟ್ಟುಕೊಂಡರು. ಎಲ್ಲರ ದೃಷ್ಟಿಗೂ ಈಗ ಪದ್ಮಾವತಿ ಸಂತೋಷೀ ಮಾತೆಯಂತೆಯೆ ಕಂಡು ಬರುತ್ತಿದ್ದಳು. ಸಂಭ್ರಮದಿಂದ ಪದ್ಮಾವತಿ ಎಲ್ಲರಿಗೂ ಊಟೋಪಚಾರ ಮಾಡಿದಳು. ಊಟದ ನಂತರ ಬಂದಿದ್ದವರೆಲ್ಲರಿಗೂ ವಸ್ತ್ರದಾನ, ಫಲದಾನವನ್ನು ತಾಯಿ ಸಂತೋಷಿ ಮಾತೆಯ ಸ್ಮರಣೆಯಲ್ಲಿ ನೀಡಿದಳು. ದೇವಲೋಕದಿಂದ ಮರಳುತ್ತಿರುವಂತೆ ಬಂದಿದ್ದವರೆಲ್ಲರೂ ಹಿಂದಿರುಗಿದರು.

ಪದ್ಮಾನಾಭ ಊರಿಗೇ ಹಿರಿಯ ಹಣವಂತ ನೆನಸಿದ. ಗುಣವಂತ ನೆನಸಿದ. ಪದ್ಮಾವತಿ ಪತಿಗೆ ತಕ್ಕ ಸತಿ ಎನಿಸಿದಳು. ತಾನಿದ್ದ ಊರಲ್ಲಿಯೇ ಮಾತೆಯ ಮಹಾ ದೇವಾಲಯದ ನಿರ್ಮಾಣವನ್ನೂ ಮಾಡಿದರು. ಮಾತೆಯ ಕೃಪೆಯಿಂದ ಪದ್ಮಾವತಿಗೆ ಒಂದು ಗಂಡು ಮಗುವೂ ಜನಿಸಿ, ಮಾತೃತ್ವದ ಪುಣ್ಯವನ್ನೂ ಪಡೆದಳು.

...ಗೆ ಸೂತ ಪುರಾಣಿಕರು ಶ್ರದ್ಧೆಯಿಂದ ಹೇಳಿದ ಮಾತೆಯ ಕಥೆಯನ್ನು ಶೌನಕಾದಿ ಮುನಿವರ್ಯರೆಲ್ಲರೂ ಕೇಳಿ, ಆನಂದತುಂದಿಲರೆನಿಸಿದರು. ಆಸ್ತಿಕ

Sri Vidyabharathi Book Centre, Sringeri

CC-O. In Public Domain. Digitized by eGangotri

ಮನೋಭಾವವನ್ನು ವೃದ್ಧಿಸಿಕೊಂಡರು. ಈ ಕಥೆಯನ್ನು ಶ್ರದ್ಧೆಯಿಂದ ಕೇಳಿದ, ವ್ರತವನ್ನು ನಿಷ್ಠೆಯಿಂದ ಮಾಡಿದವರೆಲ್ಲರೂ ಮಾತೆಯ ಕೃಪೆಗೆ ಪಾತ್ರರಾಗಿ ಭವ ಬಂಧನದಿಂದ ಬಿಡುಗಡೆ ಆಗುವರು ಎಂದು ಹೇಳಿ ಸೂತ ಮುನಿಗಳು ತಮ್ಮ ನಿತ್ಯ ಕರ್ಮದ ಕಡೆ ಮನಹರಿಸಿದರು. ಶೌನಕಾದಿ ಮುನಿಗಳೂ ಕಥಾ ಶ್ರವಣದಿಂದ ಪುನೀತರಾದವರಂತೆ ಮುಖ ವರ್ಚಸ್ಸನ್ನು ಪಡೆದು, ಸೂತಮುನಿ ಪುಂಗವರನ್ನು ವಂದಿಸಿ, ತಮ್ಮ ತಪ-ಜಪ ಕಾರ್ಯಗಳ ಕಡೆ ಗಮನಹರಿಸಲು ಅಲ್ಲಿಂದ ನಿರ್ಗಮಿಸಿದರು.

—ಸಂತೋಷೀ ಮಾತಾ ಕಥಾ ಪರಿಸಮಾಪ್ತಿ—

ಮಾತೆಯ ಮಹಿಮೆಯ ಬಗ್ಗೆ ಕೀರ್ತನೆಗಳು

(ಜೈ ಜಗದೀಶ ಹರೇ........ಎಂಬಂತೆ)

ಜೈ ಸಂತೋಷೀಮಾ, ಜೈ ಸಂತೋಷೀ ಮಾ ಊ ಊ
ಜಯ ಸಂತೋಷೀಮಾ,
ಭಕುತ ಜನರ ಸಂಕಟಗಳ ಕ್ಷಣದಲಿ
ಪಾರನು ಮಾಡಮ್ಮ ಊ ಊ || ಜೈ ||

ನಿಜಕೂ ನೀನು ಅಗೋಚರಿ ನೀ ಕರುಣಾಮಯೀ
ನಿನ್ನನ್ನು ಕಾಣುವ ಬಗೆಯನು ಭರದಲಿ ತಿಳಿಸುತೆ ಸಲಹಮ್ಮಾ
ನೀ ಅರುಹುತೆ ಪೊರೆಯಮ್ಮಾ || ಜೈ ||

Sri Vidyabharathi Book Centre, Sringeri

CC-O. In Public Domain. Digitized by eGangotri

ದೀನಮಾತೆ ನೀ ಪೂತೇ, ನೀ ಸದ್ಗುಣಿ ಮಾತೇ,
ಎಲ್ಲರ ಸಂತೋಷೀ ಮಾತೆ
ನಿನ್ನಯ ಅಭಯ ಹಸ್ತ ತತ್ಪರಿತದಿ
ತೋರುತೆ ಸಲಹಮ್ಮಾ, ನೀ ಕೋರುವೆ ಭಕುತನುನಾ ॥ ಜೈ ॥

ಏನೇ ಕಷ್ಟವೆ ಬರಲೀ ತಾಯೇ ನಂಬಿಹೆ ನಾ ನಿನ್ನ
ಮಾ ಪಿಡಿದಿಹೆ ಚರಣವನಾ
ಹರುಷದೆ ಭರದಲಿ ಬರುತಲಿ ಬಳಿಗೇ
ಭಕುತನ ಪೊರೆಯುಮ್ಮಾ ಜನನೀ ಮುಕುತಿಯ ನೀಡಮ್ಮಾ ॥ ಜೈ ॥

ಮಾತಾ-ಪಿತ ಮಾ ನೀನೇ ೯೯, ಆಸರೆ ನೀಡಮ್ಮಾ
ಮಾ ೩, ನಿನ್ನ ದಾಸನ (ದಾಸಿಯ) ಪೊರೆಯುಮ್ಮಾ
ಏಳುತೆ-ಬೀಳುತೆ ಬಿದ್ದಿದೆ ನಿನ್ನಯ ಬಾಗಿಲ ಬಳಿಯಮ್ಮಾ
ಅಮ್ಮಾ, ಬೆಳಕನು ನೀಡಮ್ಮಾ.

ಅನ್ನಪೂರ್ಣಾ ಮಹಿಮೆಯ ಕಥೆ

ಕಾಶಿನಗರ ಪುಣ್ಯ ಕ್ಷೇತ್ರಗಳಲ್ಲಿ ಪುನೀತವೆನಿಸಿದೆ—ಭಗವದ್ಭಕ್ತಿಗೆ ಹೆಸರುವಾಸಿ ಎನಿಸಿದೆ. ವಿದ್ವಾಂಸರಿಗೆ, ತೌರೂರಾಗಿದೆ—ಇದೇ ನಗರದಲ್ಲಿ ಧನಂಜಯ ಎಂಬ ಒಬ್ಬ ಬ್ರಾಹ್ಮಣ. ಹಿರಿಯ ವಿದ್ವಾಂಸ, ಸಕಲ ಶಾಸ್ತ್ರ ಪಾರಂಗತ. ವಿದ್ಯಾಧಿ ದೇವತೆ ಎನಿಸಿದ ವಾಗ್ದೇವಿ, ಸರಸ್ವತಿ ಮಾತೆಯ ಸಂಪೂರ್ಣ ಕೃಪೆ ಈ ವಿಪ್ರನಿಗೆ ಪ್ರಾಪ್ತವಾಗಿತ್ತು. ಇವನಿಗೆ ತಕ್ಕ ಸತಿ, ಸುಲಕ್ಷಣ. ಹೆಸರಿಗೆ ತಕ್ಕಂತೆ ನಾರೀ ಧರ್ಮದ ಉಳವಿಗೆ ಬೇಕಾದ ಸಕಲ ಗುಣ ಸಂಪತ್ತು ಈಕೆಯಲ್ಲಿತ್ತು. ಪತಿಯೇ ಪರದೈವ ಎಂಬ ಸಿದ್ಧಾಂತಕ್ಕೆ ಸಂಪೂರ್ಣವಾಗಿ ತಲೆ ಬಾಗಿದ್ದಳು. ಹ್ಯನ್ಮನಗಳನ್ನೇ ತ್ಯಾಗ ಮಾಡಿದ್ದಳು. ಆದರೆ ಇಂತಹ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿದ್ವಾಂಸನ ಮನೆಯಲ್ಲಿ ದಾರಿದ್ರ್ಯ ದೇವಿಯು ಕರಾಳ ರೂಪ ತಾಂಡವ ನೃತ್ಯವನ್ನೇ ಮಾಡುತ್ತಿರುವಂತಿತ್ತು. ಹೊತ್ತಿಗೊತ್ತಿಗೆ ಅಷ್ಟಿಷ್ಟು ಊಟಕ್ಕೂ ಗತ್ಯಂತರವಿರಲಿಲ್ಲ. ಲಕ್ಷ್ಮಿ—ಸರಸ್ವತಿಯರು ಇಬ್ಬರೂ ಒಂದೆಡೆ ಎಂದಿಗೂ ಸೇರಿರುವುದಿಲ್ಲ ಎಂಬ ವಿಚಾರಕ್ಕೆ ಈ ಮನೆ ಸಾಕ್ಷಿ ಎನಿಸಿತ್ತು.

ಇಷ್ಟಾದರೂ ಗಂಡನನ್ನು ಮನನೋಯಿಸುವ ಮಡದಿ, ಸುಲಕ್ಷಣ ಆಗಿರಲಿಲ್ಲ. ಗಂಡನಿಗೆ ಮಾರ್ಗ ತೋರಿಸಲು ತಾನೇ ಮುಂದಾದಳು, ತುಂಬಾ ಯೋಚಿಸಿದಳು. ಕೊನೆಗೊಂದು ನಿರ್ಧಾರಕ್ಕೆ ಬಂದು ಹೇಳಿದಳು. "ಸ್ವಾಮಿ, ಎಷ್ಟೇ ಪಾಂಡಿತ್ಯವಿದ್ದರೂ" ಅನ್ನ ದೇವರ ಮುಂದೆ ಇನ್ನು ದೇವರು ಉಂಟೇ ? "ಎಂಬ ಮಾತನ್ನು ನೀವೂ ಕೇಳಿಲ್ಲವೆ ? ಹೊಟ್ಟೆ ಪಾಡಿಗಾಗಿ ನಾವು ಏನಾದರೂ ಮಾಡಲೇಬೇಕು.

ಧನಂಜಯ ಪ್ರೀತಿಯಿಂದಲೇ ಪತ್ನಿಯ ಮುಖ ನೋಡುತ್ತಾ ಹೇಳಿದ. "ಸಾಧ್ವಿ, ನಾನು ನನ್ನ ಬುದ್ಧಿಗೆ ತೋಚಿದುದನ್ನೆಲ್ಲಾ ಮಾಡುತ್ತಲೇ ಇದ್ದೇನೆ. ಆದರೆ ವಿದ್ಯೆಯನ್ನು ಮಾರುಕಟ್ಟೆಯಲ್ಲಿಡಲು ಮಾತ್ರ ನಾನು ಬಯಸಲಾರೆ. ಇಷ್ಟಾದರೂ ನಿನ್ನ ಮನಸ್ಸಿಗೆ ನೋವುಕೊಡಲು ನಾನು ಬಯಸುವುದಿಲ್ಲ. ನನ್ನ ವಿದ್ಯಾಶಕ್ತಿಯನ್ನು ತಪಶ್ಶಕ್ತಿಯನ್ನಾಗಿ ಮಾರ್ಪಡಿಸಲು ಪ್ರಯತ್ನಿಸುತ್ತೇನೆ ಕಾಶಿಯ ವಿಶ್ವನಾಥನನ್ನೇ ಕುರಿತು ತಪಸ್ಸು ಮಾಡುತ್ತೇನೆ. ಅವನ ಕೃಪೆಯನ್ನು ಪಡೆದು, ನಮ್ಮ ಈ ದಾರಿದ್ರ್ಯವನ್ನು ದೂರ ಮಾಡಲು ಭಾಗೀರಥ ಪ್ರಯತ್ನ ಪಡುತ್ತೇನೆ."

ಹೀಗೆಂದು ಹೇಳುತ್ತಾ ಕೂಡಲೇ ಮನೆಯಿಂದ ಹೊರ ಹೊರಟ. ನಗರದ ಹೊರಗೆ ದಟ್ಟಾರಣ್ಯದಲ್ಲಿ ಸರ್ವೇಶ್ವರನನ್ನು ಕುರಿತು ಭಕ್ತಿಯಿಂದ ತಪಸ್ಸನ್ನೇ ಮಾಡತೊಡಗಿದ. ಕ್ರೂರವಾದ ತಪಸ್ಸು. ಮೈ ಎಲ್ಲಾ ಬೆಂಕಿ ಆಗ ತೊಡಗಿತು. ಕಣ್ಮುಚ್ಚಿ, ಧ್ಯಾನ ನಿರತನಾಗಿ ಕುಳಿತಿದ್ದ ವಿಪ್ರೋತ್ತಮನ ಮುಖದಲ್ಲಿ ಅಲೌಕಿಕ–ಅದ್ಭುತ ತೇಜಸ್ಸು. ಪರಮಾತ್ಮಾ, ಬೇಗ ಕೃಪೆ ತೋರಿಸು. ನಿನ್ನನ್ನೇ ನಂಬಿ, ಭಕ್ತಿಯಿಂದ ಪ್ರಾರ್ಥಿಸುತ್ತಿದ್ದೇನೆ. ಈ ತಪಸ್ಸಾಧನೆಯಲ್ಲಿಯೇ ಸುಟ್ಟು

Sri Vidyabharathi Book Centre, Sringeri

CC-O. In Public Domain. Digitized by eGangotri

ಹೋದರೂ ಸರಿಯೆ, ನಿನ್ನ ಸಂದರ್ಶನವಾಗದ ಹೊರತು ನಾನು ಇಲ್ಲಿಂದ ಕದಲುವುದಿಲ್ಲ. ನಿನ್ನ ಕೃಪಾ ಕಟಾಕ್ಷಕ್ಕೆ ಪಾತ್ರನಾದ ನಂತರವೇ ಜಾಗ ಬಿಡುತ್ತೇನೆ. ಎನ್ನುತ್ತಾ ಇನ್ನೂ ದೃಢ ಮನಸ್ಸಿನಿಂದ ತಪಸ್ಸು ಮಾಡತೊಡಗಿದ. ಪರಮೇಶ್ವರನಿಗೂ ವಿಪ್ರೋತ್ತಮನ ತಪಸ್ಸನ್ನು ಕಂಡು ಸಂತೋಷ ಆಯಿತು. ಮನ ಮರುಗಿತು. ವಿಪ್ರನ ಬಳಿಗೆ ಬಂದು ಅವನ ಕಿವಿಯಲ್ಲಿ ಮೂರು ಬಾರಿ ಅನ್ನಪೂರ್ಣಾ, ಅನ್ನಪೂರ್ಣಾ, ಅನ್ನಪೂರ್ಣಾ ಎಂದು ಮೂರು ಬಾರಿ ಮೃದುವಾಗಿ ಉಚ್ಚರಿಸಿದ.

ಧನಂಜಯನಿಗೆ ಹೃದಯದಲ್ಲಿ ಅಲೌಕಿಕ ಆನಂದದ ಸಂಚಾರ ಉಂಟಾದಂತಾಯಿತು. ಹಾಗೆಯೇ ಕಣ್ತೆರೆದ ಯಾರೂ ಕಾಣಲಿಲ್ಲ. ಕಿವಿಯ ಬಳಿ ಈಗಲೂ ಅನ್ನಪೂರ್ಣ ಎಂಬ ಕೂಗು ಸ್ಪಷ್ಟವಾಗಿ ಕೇಳಿಸುತ್ತಿತ್ತು. ಒಮ್ಮೆಲೇ ಆನಂದ–ಆಶ್ಚರ್ಯ ಎರಡೂ ಉಂಟಾಯಿತು ಆದರೆ ಅರ್ಥ ಆಗಲಿಲ್ಲ. ಇದೇ ಯೋಚನೆಯಲ್ಲಿಯೇ ವಿಶ್ವೇಶ್ವರನ ದೇವಾಲಯದ ಬಳಿಗೆ ಬಂದ ಅಲ್ಲಿದ್ದ ಬ್ರಾಹ್ಮಣರೊಂದಿಗೆ ನಡೆದ ವಿಷಯವನ್ನು ಪ್ರಸ್ತಾಪಿಸಿದ. ಅವರೆಲ್ಲರೂ ನಗುತ್ತಾ ಹೇಳಿದರು. "ನಿನಗೆ ಬರೀ ಭ್ರಾಂತಿ. ಮನೆಯಲ್ಲಿ ಲೋಟಪಟಿ ಆಗಿ ಸದಾಕಾಲ ನಿನಗೆ "ಅನ್ನ–ಅನ್ನ" ಎಂಬ ತವಕವೇ ಅತಿ ಆಗಿರುವುದರಿಂದ ಹೀಗಾಗಿರಬಹುದು. ಹೋಗು, ಮನೆಗೆ ಹೋಗಿ ವಿಶ್ರಾಂತಿ ಪಡಿ ಮನಃಸ್ಥಿತಿ ಸುಧಾರಿಸಿತು." ಎಂದು ಗೇಲಿ ಮಾಡುತ್ತಾ ಪರಿಹಾಸ್ಯದೊಂದಿಗೆ ಗಹಗಹಿಸಿ ನಗತೊಡಗಿದರು. ದಡ್ಡರ ಸಂಗದಲ್ಲಿ ಧನಂಜಯನೂ ದಡ್ಡನೇ ಆದ. ಆದರೂ ಅವನ ಹೃದಯದಲ್ಲಿ ಅಲೌಕಿಕವಾದ ಬೆಳಕು ಅವನಿಗೆ ಅಗೋಚರ ರೀತಿಯಲ್ಲಿ ದಾರಿ ತೋರಿಸುವಂತೆಯೇ ಇತ್ತು. ಮನೆಗೆ ಬಂದು, ನಡೆದ ಘಟನೆಗಳನ್ನೆಲ್ಲಾ ಸುಲಕ್ಷಣೆಗೆ ತಿಳಿಸಿದ

ನಿಜಕ್ಕೂ ಸುಲಕ್ಷಣಾ ಸೂಕ್ಷ್ಮ ಬುದ್ಧಿಯುಳ್ಳವಳು. ಪತಿಯನ್ನು ಸಮಾಧಾನ ಪಡಿಸುತ್ತಾ ಹೇಳಿದಳು. "ಸ್ವಾಮಿ, ಇನ್ನು ನೀವು ನಿಶ್ಚಿಂತರಾಗಿರಿ. ಪರಮೇಶ್ವರನೇ ನಿಮ್ಮ ಕಿವಿಯಲ್ಲಿ ಹಾಗೆ ಹೇಳುವನೆಂದೇ ನನಗೆ ಪೂರ್ಣ ನಂಬಿಕೆ ಮತ್ತೆ ಆ ಆಪದ್ಬಾಂಧವನನ್ನೇ ಆರಾಧಿಸಿ. ಅವನೇ ದಾರಿ ತೋರಿಸುವನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಎಷ್ಟಾದರೂ ಅವನು ಭಕ್ತವತ್ಸಲ. ನಂಬಿದ ಭಕ್ತರ ಬಗ್ಗೆ ಅವನಿಗೆ ವಾತ್ಸಲ್ಯ ಇದ್ದೇ ಇರುತ್ತದೆ."

ಧನಂಜಯನಿಗೂ ಹೆಂಡತಿಯ ಮಾತು ಹಿಡಿಸಿತು. ಮತ್ತೆ ತಪಸ್ಸು ಮಾಡಿ, ಪರಮೇಶ್ವರನನ್ನು ಕಂಡು, ಸೂಕ್ತ ಸಲಹೆಯನ್ನು ಪಡೆಯಲು ಹೊರಟ. ಎಂದಿನಂತೆ ಅದೇ ಪಟ್ಟಡವಿಯಲ್ಲಿ ಘೋರ ತಪಸ್ಸನ್ನು ಆಚರಿಸುತ್ತಾ ಮುಂದುವರಿಸಿದ. ಕೊನೆಗೊಂದು ದಿನ ಪರಮೇಶ್ವರ ನಡುರಾತ್ರಿಯಲ್ಲಿ ಪ್ರತ್ಯಕ್ಷ ನಾದ. ಅಭಯ ಹಸ್ತವನ್ನು ತೋರಿಸುತ್ತಾ, ಭಕ್ತನ ಕಡೆ ಕರುಣೆಯ ಕಣ್ಣು ಗಳಿಂದ ನೋಡುತ್ತಾ ಹೇಳಿದ. ವಿಪ್ರಾ, ವೃಥಾ ಚಿಂತಿಸಬೇಡ. ನೀನು ಇಲ್ಲಿಂದ ಪೂರ್ವ ದಿಕ್ಕಿನಲ್ಲಿ ಹೋಗು. ಹೋಗುತ್ತಿದ್ದಂತೆ ನಿನ್ನ ಕಾರ್ಯ ಸಿದ್ಧಿ ಸುವುದು. ಮುಂದೆ ಸುಖವಾಗಿರುತ್ತೀ."

ಪರಮೇಶ್ವರನ ಪಾದಾರವಿಂದಗಳಿಗೆರಗಿದ ಧನಂಜಯ ಪರಮಾತ್ಮನ ಆಣತಿಯಂತೆ ಪೂರ್ವ ದಿಕ್ಕಿನಲ್ಲಿ ಪ್ರಯಾಣ ಬೆಳೆಸಿದ. ಹಲವಾರು ದಿನಗಳು ಪ್ರಯಾಣ ಮುಂದುವರಿಯಿತು. ದಾರಿಯಲ್ಲಿ ಗಿಡ–ಮರಗಳಲ್ಲಿ ದೊರೆಯು ತ್ತಿದ್ದ ಹಣ್ಣು ಹಂಪಲೇ ಇವನಿಗೆ ಆಹಾರ. ಕೊಳಗಳಲ್ಲಿ ಸಿಕ್ಕುತ್ತಿದ್ದ ತಿಳಿ ನೀರೇ ಇವನ ಪಾಲಿಗೆ ಹಾಲಿನ ಹೊಳೆ. ಹಲವಾರು ವಾರಗಳು ಹೀಗೆಯೇ ಪ್ರಯಾಣ ಮಾಡುತ್ತಿದ್ದಂತೆ ಅಲ್ಲೊಂದು ಕಡೆ ಒಂದು ಸುಂದರವಾದ ಸರೋ ವರ ಕಾಣಿಸಿತು. ಅದರ ತೀರದಲ್ಲಿಯೇ ಬಹುಮಂದಿ ದೇವಕನ್ನಿಕೆಯರು, ಅಪ್ಸರೆಯರು ಗುಂಪು ಗೂಡಿ, ಕುಳಿತಿದ್ದರು. ಒಂದು ಮಾರ್ಗಶಿರ ಮಾಸದ ಹುಣ್ಣಿಮೆಯ ರಾತ್ರಿ. ಚಂದ್ರನ ಬೆಳದಿಂಗಳು ಕಂಗೊಳಿಸುತ್ತಿತ್ತು. ಎಲ್ಲರ ಬಾಯಿಂದಲೂ ಅನ್ನಪೂರ್ಣಾ, ಅನ್ನಪೂರ್ಣಾ ಎಂಬ ಧ್ವನಿ ಕೇಳಿ ಬರುತ್ತಿತ್ತು. ಯಾವ ಶಬ್ದದ ಸಾಕ್ಷಾತ್ಕಾರಕ್ಕಾಗಿ ಮನೆಯಿಂದ ಹೊರಟ್ಟಿದ್ದನೋ, ಅದೇ ಶಬ್ದದ ಇಂಪಾದ ಸುಮಧುರ ಧ್ವನಿಯನ್ನು ದೇವ ಕನ್ನಿಕೆಯರು ಹಾಗೂ ಅಪ್ಸರೆಯರ ಬಾಯಿಂದ ಕೇಳಿ, ಧನಂಜಯನು ಸಂತೋಷಗೊಂಡ. ಅವರ ಬಳಿ ಬಂದು ಎಲ್ಲರನ್ನೂ ವಂದಿಸುತ್ತಾ ಕೇಳಿದ. "ತಾಯಂದಿರೇ, ನೀವೆಲ್ಲಾ ಇಲ್ಲಿ ಏನು ಮಾಡುತ್ತಿದ್ದೀರಿ ? ನಿಮ್ಮ ಬಾಯಿಂದ ಬರುತ್ತಿರುವ ಆ ಅನ್ನ ಪೂರ್ಣಾ ಮಾತೆ ಯಾರು ? ನನಗೂ ತಿಳಿಸುವ ಕೃಪೆ ತೋರಬಾರದಾ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರು ಹೇಳಿದರು–ನಾವು ದೇವ ಕನ್ನಿಕೆಯರು ಹಾಗೂ ಅಪ್ಸರೆಯರು. ಇಲ್ಲಿ ಅನ್ನಪೂರ್ಣಾ ಮಾತೆಯ ವ್ರತವನ್ನು ಆಚರಿಸುತ್ತಿದ್ದೇವೆ. "ಧನಂಜಯ ಮರು ಪ್ರಶ್ನಿಸಿದ. ಆ ತಾಯಿ ಯಾರು? ವ್ರತ ಹೇಗೆ ಮಾಡುವುದು? ವ್ರತದ ಮಹಿಮೆ ಏನು? ಈ ದರಿದ್ರ ಬ್ರಾಹ್ಮಣನಿಗೂ ತಿಳಿಸಬಾರದಾ? ನನ್ನ ದಾರಿದ್ರ್ಯವನ್ನು ಈ ಮೂಲಕ ನಿವಾರಿಸಬಾರದಾ?"

ಕನ್ನಿಕೆಯರಿಗೆ ಬ್ರಾಹ್ಮಣನ ಬಗ್ಗೆ ಅನುಕಂಪ ಮೂಡಿತು. ಸಹಾನುಭೂತಿ ಹುಟ್ಟಿತು. ಅವರಲ್ಲೊಬ್ಬಾಕೆ ಹೇಳಿದಳು. "ವಿಪ್ರಾ, ಕೇಳು, ಈ ವ್ರತ ಆಚರಿಸಲು ಯಾವ ಕಷ್ಟವು ಇಲ್ಲ ಏನೂ ಅಡ್ಡಿ–ಆತಂಕವೂ ಇಲ್ಲ. ಇಪ್ಪತ್ತೊಂದು ಗಂಟುಗಳುಳ್ಳ ಒಂದು ದಾರವನ್ನು ತೆಗೆದುಕೊಂಡು, ಅದಕ್ಕೆ ಅರಸಿನ ಬಳಿಯುವುದು. ಇಪ್ಪತ್ತೊಂದು ದಿನ ಉಪವಾಸವಿದ್ದು ಶ್ರದ್ಧೆ–ಭಕ್ತಿಯಿಂದ ವ್ರತವನ್ನು ಆಚರಿಸುವುದು. ಸಾಧ್ಯವಿಲ್ಲದವರು ಹಾಗೂ ಕೈಲಾಗದವರು ಒಂದು ದಿನವಾದರೂ ಉಪವಾಸ ಇರಲೇಬೇಕು. ಇಷ್ಟೂ ಆಗದಿದ್ದರೆ ವ್ರತದ ಕಥೆಯನ್ನು ನಿಷ್ಠೆಯಿಂದ ಮನಸಿಟ್ಟು ಕೇಳಿ, ಕಥಾ ಶ್ರವಣದ ನಂತರ ಪ್ರಸಾದವನ್ನು ಭುಂಜಿಸಬಹುದು. ಕಥೆ ಹೇಳುವವರು ಯಾರೂ ದೊರೆಯದಿದ್ದರೆ ಪಾರ್ವತಿ–ಪರಮೇಶ್ವರರನ್ನು ಧ್ಯಾನಿಸಿ, ಕಳಶವನ್ನಿಟ್ಟು ಅದನ್ನು ಪೂಜಿಸಿ, ಅದರ ಮುಂದೆ ಒಂದು ಉರಿಯುವ ದೀಪವನ್ನು ಇಡುವುದು. ಕಥಾ ಶ್ರವಣ ಮಾಡುವುದು. ವ್ರತ ಮುಗಿಯುವವರೆಗೂ ಶಾಂತಚಿತ್ತರಾಗಿರಬೇಕು. ಇಂದ್ರಿಯ ನಿಗ್ರಹ ಶಕ್ತಿಯನ್ನು ಪಡೆದಿರಬೇಕು. ಸತ್ಯ ನಿಷ್ಠರೆನಿಸಿರಬೇಕು. ಈ ವ್ರತವನ್ನು ಆಚರಿಸುವವರಲ್ಲಿ ಕುರುಡರಿದ್ದರೆ ಅಂತಹವರಿಗೆ ಕಣ್ಣು ಬರುವುದು. ಬಡವರಿದ್ದರೆ ಧನಲಕ್ಷ್ಮಿ ಒಲಿಯುವಳು. ಮಕ್ಕಳಿಲ್ಲದವರಿಗೆ ಮಕ್ಕಳಾಗುವುದು. ಕುಂಟರಿಗೆ ಕಾಲು ಬರುವುದು. ದಡ್ಡನೂ ಪಂಡಿತನಾಗುವನು, ಯಾರು ಯಾವ ಮನೋಭಿಲಾಷೆಯಿಂದ ವ್ರತವನ್ನು ಆಚರಿಸುವರೋ, ಅವರೆಲ್ಲರ ಅಭೀಷ್ಟಗಳೂ ಈಡೇರುವುವು.

ಧನಂಜಯ ಹೇಳಿದ. "ನಾನೂ ಬಡವನೇ ದಟ್ಟ ದರಿದ್ರನೇ. ಕೇವಲ ವಿದ್ಯೆ ಇದೆ. ಅದೇ ಪ್ರಮಾಣದಲ್ಲೇ ಏನು? ಕಿಂಚಿತ್ತೂ ಧನವಿಲ್ಲ. ನನಗೆ ಈ ವ್ರತಾಚರಣೆ ಸುಖ–ಸಂತೋಷ ಹಾಗೂ ಶಾಂತಿಯನ್ನು ನೀಡಬಲ್ಲದಾ?

Sri Vidyabharathi Book Centre, Sringeri

CC-O. In Public Domain. Digitized by eGangotri

ಕನ್ನಿಕೆಯರು ಬ್ರಾಹ್ಮಣನನ್ನು ಮತ್ತೆ ಮೊದಲಿನಂತೆಯೇ ಕನಿಕರದ ದಯಾರ್ದ್ರ ದೃಷ್ಟಿಯಿಂದ ನೋಡತೊಡಗಿದರು. ಅವರೆಲ್ಲರೂ ಅವನನ್ನು ಹಾರೈಸುತ್ತಾ ಹೇಳಿದರು. "ಖಂಡಿತಾ ನಿನ್ನನ್ನು ದಾರಿದ್ರ್ಯ ನಿವಾರಣೆಯು ದೇವಿಯ ಕೃಪೆಯಿಂದ ಆಗುವ ಸೂಚನೆಯು ಕಂಡು ಬರುತ್ತಿದೆ ಆದ್ದರಿಂದಲೇ ನಾವೆಲ್ಲರೂ ವ್ರತನನ್ನು ಆಚರಿಸುತ್ತಿರುವ ವೇಳೆಯಲ್ಲಿ ನಿಮ್ಮನ್ನು ಆ ಮಾತೆಯೇ ಕರೆ ತಂದಳೋ ಏನೋ!" ಎಂದು ಊಹಿಸತೊಡಗಿದರು. ಮಾತೆಯನ್ನು ಸ್ಮರಿಸುತ್ತಾ ಸ್ವಲ್ಪ ಪ್ರಸಾದವನ್ನೂ, ದಾರವನ್ನೂ ಕೊಟ್ಟರು. ಮಾಯ ವಾದರು.

ಧನಂಜಯನು ಅಪ್ಸರೆಯರಿಂದ ದಾರವನ್ನು ತೆಗೆದುಕೊಂಡು ಇಪ್ಪತ್ತೊಂದು ಗಂಟು ಹಾಕಿದ. ಅದೇ ಸರೋವರದಲ್ಲಿಯೇ ಸ್ನಾನಮಾಡಿ, ಶುಚಿ ರ್ಭೂತನಾಗಿ ವ್ರತಕ್ಕೆ ಕುಳಿತ. ಕೂಡುತ್ತಿದ್ದಂತೆ ನಿಶ್ಚಲ–ನಿರ್ಮಲ ಮನಸ್ಸು ಭಕ್ತಿ ಭಾವದೊಂದಿಗೆ ವೈ ತುಂಬಿ ಬಂತು. ಕಳಶ ಪೂಜೆ ಮಾಡಿ ವ್ರತವನ್ನು ನಿಷ್ಠೆಯಿಂದ ಆಚರಿಸತೊಡಗಿದ. ವ್ರತ ಪೂರ್ಣವಾಗುತ್ತಿದ್ದಂತೆ ಅದೇ ಸರೋವರ ದಿಂದ ಇಪ್ಪತ್ತೊಂದು ಮೆಟ್ಟಲುಗಳುಳ್ಳ ಒಂದು ಬಂಗಾರದ ಏಣಿ ಹೊರಬಂತು. ಸೋಜಿಗ ಹಾಗೂ ಸಂತೋಷದ ಮನಸ್ಸಿನೊಂದಿಗೆ ಅನ್ನಪೂರ್ಣಾದೇವಿಯನ್ನು ಸ್ಮರಿಸುತ್ತಾ, ಒಂದೊಂದೇ ಮೆಟ್ಟಲು ನೀರಿನಲ್ಲಿ ಇಳಿಯುತ್ತಾ ಹೋದ. ಕಡೆಯ ಮೆಟ್ಟಲು ಇಳಿಯುತ್ತಿದ್ದಂತೆ ಅವನಿಗೆ ನೀರು ಕಾಣಿಸಲೇ ಇಲ್ಲ. ದಿವ್ಯಲೋಕ ಒಂದು ಕಾಣಿಸಿತು. ಅಲ್ಲೊಂದು ದಿವ್ಯ–ಭವ್ಯದೇಗುಲ. ದೇವಿ–ದೇವತೆಯರ ಬಳಗವೇ ನೆರೆದು ದೇವಿಯ ಸ್ತೋತ್ರ ಮಾಡುತ್ತಿದ್ದಾರೆ. ದಯಾಮಯಿ ಎನಿಸಿದ ದೇವಿಯು ಅವರೆಲ್ಲರ ನಡುವೆ ಸುವರ್ಣ ಸಿಂಹಾಸನದ ಮೇಲೆ ರಾರಾಜಿ ಸುತ್ತಿದ್ದಾಳೆ. ಕಿನ್ನರಿಯರು, ದೇವ ಕನ್ನಿಕೆಯರು ಮಾತೆಗೆ ಸಂತೋಷದಿಂದ-ಭಕ್ತಿಯಿಂದ ಛತ್ರಚಾಮರ ಸೇವೆ ಸಲ್ಲಿಸುತ್ತಿದ್ದಾರೆ. ಈರೇಳು ಲೋಕದ ನಾಯಕ ನೆನಸಿದ ಪರಶಿವನೂ ಸಹ ತಾಯಿಯ ಬಳಿಯೇ ಲೋಕ ರಕ್ಷಣೆಗಾಗಿ ಭಿಕ್ಷಾ ಪಾತ್ರೆ ಹಿಡಿದು ನಿಂತಿದ್ದಾನೆ. ಜಾಗಟೆ, ಶಂಖ ಧ್ವನಿ ಮೊಳಗುತ್ತಿದೆ.

ಧನಂಜಯನ ಕಣ್ಣುಗಳು ನೋಡುತ್ತಿದ್ದಂತೆ ಪುಲಕಿತಗೊಂಡವು.

Sri Vidyabharathi Book Centre, Sringeri

CC-O. In Public Domain. Digitized by eGangotri

ತಾಯಿಯ ಬಳಿಗೆ ಮಗುವಿನಂತೆ ಓಡೋಡಿ ಬಂದ. ಆಕೆಯ ಪಾದ ಪದ್ಮಗಳ ಮೇಲೆ ಉರುಳಾಡುತ್ತಾ ಪ್ರಾರ್ಥಿಸತೊಡಗಿದ. ಜಗಜ್ಜನನಿ, ಜಗನ್ಮಾತೆ, ಲೋಕ ನಾಯಿಕೆ, ದಯಾಮಯಿ ಕರುಣಾಮಯಿ, ಮಹಾಮಾತೆ, ರಕ್ಷಮಾಂ ದೇವಿ, ಪಾಹಿಮಾಂ, ದಯಾಸಿಂಧುವನ್ನೇ ಬಿಂದುವಿನ ರೂಪದಲ್ಲಿ ತುಂಬಿ ಕೊಂಡಿದ್ದ ಮಮತಾಮಯಿ ಮಾತೆಗೆ ಬ್ರಾಹ್ಮಣನ ದಾರಿದ್ರ್ಯದ ಬವಣೆ ಯನ್ನು ಕಂಡು, ಕ್ರಂದನವನ್ನು ಕೇಳಿ, ಕರುಳು ಬಾಯಿಗೆ ಬಂದಂತಾಯಿತು. ಮಾತೃವಾತ್ಸಲ್ಯದೊಂದಿಗೆ ಅವನ ತಲೆ ನೇವರಿಸತೊಡಗಿದಳು. ಮಧುರವಾಣಿ ಯಿಂದ ಸಂತೈಸತೊಡಗಿದಳು. ಹಾರೈಸುತ್ತಾ ಅವನ ಶಿರದ ಮೇಲೆ ಅಭಯ ಹಸ್ತವನ್ನಿಟ್ಟಳು. ಈಗಂತೂ ಧನಂಜಯನು ಮತ್ತಷ್ಟು ಪ್ರತಿಭಾನ್ವಿತ ನೆನಿಸಿದ ತೇಜಸ್ವಿಯಾದ. ಮುಖ ಮಂಡಲದಲ್ಲಿ ಕೋಟಿ ಸೂರ್ಯರ ಪ್ರಕಾಶವೇ ಕಂಡು ಬಂದಂತಾಯಿತು. ವಾಗ್ದೇವಿಯೇ ಅವನ ನಾಲಿಗೆಯ ಮೇಲೆ ನಲಿದಾ ಡುತ್ತಿರುವಂತೆ ಕಂಡುಬಂತು. ಹಾಗೆಯೇ ರೆಪ್ಪೆ ಹೊಡೆಯದೆ ಅಗಲಿದ ತಾಯಿ ಯನ್ನು ಕಂಡ ಮಗುವಿನಂತೆ ಬೆಕ್ಕಸ ಬೆರಗಾಗಿ ನೋಡುತ್ತಲೇ ಇದ್ದ, ನಂತಿ ಸುತ್ತಲೇ ಇದ್ದ-ಆಶ್ಚರ್ಯವೋ ಎಂಬಂತೆ ಮಾತೆಯಾಗಲಿ, ಮಾತೆಯ ಆ ದಿವ್ಯರೂಪವಾಗಲಿ ಅವನ ಕಣ್ಣೆದುರು ಕಂಡು ಬರುತ್ತಿಲ್ಲ. ಅವನೀಗ ಕಾಶಿಯ ವಿಶ್ವನಾಥನ ಮಂದಿರದಲ್ಲಿದ್ದ. ಸಂತೋಷದಿಂದ, ಸಂತೃಪ್ತಿಯಿಂದ ವಿಶ್ವೇಶ್ವರ ನನ್ನೂ ವಂದಿಸಿ, ಅನ್ನಪೂರ್ಣಾದೇವಿಯ ಹೆಸರನ್ನು ಮನದಲ್ಲಿಯೇ ಮೃದುವಾಗಿ ಮೆಲುಕಾಡುತ್ತಾ ಮನೆಗೆ ಮರಳಿದ.

ಚಾತಕ ಪಕ್ಷಿಯಂತೆ ಕಾಯುತ್ತಿದ್ದ ಸುಲಕ್ಷಣೆ ಗಂಡನ ಬರುವಿಕೆಯನ್ನು ಕಂಡಳು. ದೂರದಿಂದಲೇ ಆತನ ಮುಖ ಮಂಡಲದಿಂದ ದಿವ್ಯಜ್ಯೋತಿ ಬೆಳಗು ತ್ತಿರುವುದನ್ನು ಕಂಡಳು. ಕಾದು-ಕಾದು ಗುಳಿ ಬಿದ್ದಂತಿದ್ದ ಅವಳ ಕಣ್ಣುಗಳು ಈಗ ಬೆಳಕಿನ ಹೊಳಪಿನೊಂದಿಗೆ ತುಂಬಿ ಬಂದುವು. ಸತಿ, ಸುಲಕ್ಷಣೆಯೊಂದಿಗೆ ಎಲ್ಲಾ ನಡೆದ ಘಟನೆಗಳನ್ನೂ ಹಂತ-ಹಂತವಾಗಿ ಬಣ್ಣಿಸಿದ. ಇಬ್ಬರೂ ಅಲೌಕಿಕ ಆನಂದದಿಂದ, ಅದ್ಭುತ ಪವಾಡವೋ ಎಂಬಂತೆ ಮೈಮರೆತರು. ಕೆಲವೇ ದಿನಗಳಲ್ಲಿ ಅವರ ಮನೆಯಲ್ಲಿ ತಾಂಡವವಾಡುತ್ತಿದ್ದ ದಾರಿದ್ರ್ಯ ಪೀಡೆ ಈ ಬೆಳಕಿನಲ್ಲಿ ನೆಲೆಸಲಾರದೆ, ಕತ್ತಲಿರುವ ಜಾಗವನ್ನು ಹುಡುಕುತ್ತಾ ತಾನೇ

Sri Vidyabharathi Book Centre, Sringeri

CC-O. In Public Domain. Digitized by eGangotri

ತಾನಾಗಿ ಕಾಲ್ತೆಗೆಯಿತು. ಧನಲಕ್ಷ್ಮಿಯ ಅನುಗ್ರಹ ಅನ್ನಪೂರ್ಣೆಯ ಕೃಪೆಯಿಂದ ಲಭಿಸಿತು. ಸಂಪತ್ತು ಮನೆ ತುಂಬಿತ್ತು. ಶಾಂತಿ ಮನ ತುಂಬಿತ್ತು ತಮ್ಮ ಅದೃಷ್ಟದ ಬಾಗಿಲು ಅನ್ನಪೂರ್ಣೆಯ ಕೃಪೆಯಿಂದ ತೆರೆದುದನ್ನು ಕಂಡು ಸತಿ - ಪತಿಯರೀರ್ವರೂ ಮನಸಾರೆ ತಾಯಿಯ ಮಹಿಮೆಯನ್ನು ಕೊಂಡಾಡಿದರು. ಭಕ್ತಿ ಭಾವನೆಯನ್ನು ಮತ್ತೂ ಮತ್ತಷ್ಟು ಬೆಳೆಸಿಕೊಂಡರು.

ಈಗ ಅವರಿಗಿದ್ದ ದಾರಿದ್ರ್ಯ ಸಂಪೂರ್ಣವಾಗಿ ಮಾಯವಾಗಿತ್ತು. ಆದರೆ ಇಷ್ಟೆಲ್ಲಾ ಸಕಲ ಸಂಪತ್ತನ್ನು ಮಾತೆ ಕರುಣಿಸಿದ್ದರೂ ಸಹ ಅವರ ಮನಸ್ಸಿನಲ್ಲಿ ಇನ್ನೊಂದು ಕೊರಗು ಕಾಡತೊಡಗಿತು. ಆ ಕೊರಗೇ ಅವರಿಗಿದ್ದ ನಿಸ್ಸಂತಾನ. ಮನೆ ಎಷ್ಟು ತಾನೇ ತುಂಬಿದ್ದರೇನು ? ಮಕ್ಕಳಿಲ್ಲದ ಮನೆಯೂ ಒಂದು ಮನೆಯೇ? ಎಂದು ದಂಪತಿಗಳಿಬ್ಬರೂ ಮೃಕುಂಡು ಮುನಿ ಹಾಗೂ ಮುನಿ ಪತ್ನಿ ಮರುದ್ವತಿಯರು ಮಾರ್ಕಂಡೇಯನಿಗಾಗಿ ಮರುಗುತ್ತಿದ್ದಂತೆ ಮನಸ್ಸಿನಲ್ಲಿಯೇ ವೇಚಾಡುತ್ತಿದ್ದರು. ಅವನ ನೆಂಟರಿಷ್ಟರೂ ಈ ಬಗ್ಗೆ ಪರ್ಯಾಲೋಚಿಸಿ ಇನ್ನೊಂದು ಮದುವೆ ಮಾಡಿಕೊಳ್ಳಲು ಸಲಹೆ ನೀಡಿದರು. ಸುಲಕ್ಷಣೆಯಂತೂ ಈ ವಿಚಾರವಾಗಿ ಮೊದಲಿಂದಲೂ ಸಮ್ಮತಿಸಿ, ಒತ್ತಾಯ ಪಡಿಸುತ್ತಲೇ ಇದ್ದಳು. ಈಗ ದಿಕ್ಕು ತೋಚದೆ ಎಲ್ಲರ ಮಾತಿಗೆ ಧನಂಜಯ ಮಣಿಯಲೇ ಬೇಕಾಯಿತು.

ಸುಲಕ್ಷಣೆಯೇ ಮುಂದು ನಿಂತು, ಹೆಣ್ಣನ್ನು ಹುಡುಕಿದಳು. ಒಂದು ಶುಭ ಮುಹೂರ್ತದಲ್ಲಿ ತನ್ನ ಮಗನಿಗೆ ಮದುವೆ ಮಾಡುವಷ್ಟು ಮುತುವರ್ಜಿಯಿಂದ, ಸಡಗರದಿಂದ ಗಂಡನಿಗೆ ಎರಡನೆಯ ಮದುವೆ ಮಾಡಿದಳು. ಸವತಿಯನ್ನು ಸಂಭ್ರಮದಿಂದಲೇ ಸ್ವಾಗತಿಸಿದಳು. ಸವತಿಯ ಆಗಮನದ ಕೆಲವೇ ದಿನಗಳಲ್ಲಿ ಸುಲಕ್ಷಣೆಯ ಬಾಳು ಮುಳ್ಳಿನ ಹಾಸಿಗೆಯಂತಾಯಿತು. ಎರಡನೆಯ ಹೆಂಡತಿ ತಾನು ಸವತಿಯೇ ಎಂಬಂತೆ ವರ್ತಿಸಿ ಸುಲಕ್ಷಣೆಯ ಮೇಲೆ ಸವತಿ ಮಾತ್ಸರ್ಯದ ಕಿಡಿಗಳನ್ನು ಕಾರ ತೊಡಗಿದಳು. ಗಂಡನನ್ನು ಬೇರೊಂದು ಮನೆಗೆ ಬಲಾತ್ಕಾರದಿಂದ ಕರೆದೊಯ್ದಳು. ಉತ್ತಾನಪಾದರಾಜನು ಸುನೀತಿಯನ್ನು ಮನಸ್ಸಿಲ್ಲದಿದ್ದರೂ ಅಗಲಿ, ಕಿರಿಯರಾಣಿ, ಸುರುಚಿಯ ಮಾತಿಗೆ ಓಗೊಟ್ಟು, ಅವಳೊಂದಿಗೆ ಇದ್ದಂತೆ ಧನಂಜಯನೂ ಈಗ ವಿಧಿ ಇಲ್ಲದೆ ಎರಡ

Sri Vidyabharathi Book Centre, Sringeri

CC-O. In Public Domain. Digitized by eGangotri

ನೆಯ ಹೆಂಡತಿಯೊಂದಿಗೆ ವಾಸಿಸತೊಡಗಿದ. ಸುಲಕ್ಷಣೆಗೆ ಸಹಿಸಲು ಹೃದಯ ಬಾಧೆ ಎನಿಸಿದರೂ ಹೇಗಾದರೂ ಸಂತಾನವನ್ನು ಕಾಣುವ ಆಸೆಯಿಂದ, ಹೆಬ್ಬಯಕೆಯಿಂದ ಹೇಗೋ ತಡೆದುಕೊಂಡಳು.

ಮತ್ತೆ ಮಾರ್ಗಶಿರ ಮಾಸ ಬಂತು. ಗಂಡನೊಂದಿಗೆ ವ್ರತವನ್ನು ಆಚರಿಸುವ ಆಕಾಂಕ್ಷೆಯಿಂದ ಮನಸ್ಸು ಸುಲಕ್ಷಣೆಗೆ ಕಾತರಿಸಿತು. ಧನಂಜಯನೂ ಇಷ್ಟೆಲ್ಲಾ ನಿರ್ಬಂಧಗಳಿದ್ದರೂ ಸುಲಕ್ಷಣೆಯನ್ನು ಮರೆಯಲು ಸಾಧ್ಯವಾಗದೆ ಆಗಾಗ ಅವಳ ಮನೆಗೆ ಕದ್ದು ಬರುತ್ತಿದ್ದ. ಇಷ್ಟೆಲ್ಲಾ ಕಷ್ಟಕ್ಕೆ ಅವಳ ಅವಿವೇಕವೇ ಕಾರಣವೆಂದು ನಿಂದಿಸುತ್ತಲೂ ಇದ್ದ. ಸುಲಕ್ಷಣೆಯೇ ಗಂಡನಿಗೆ ಸಮಾಧಾನ ಹೇಳಿ, ತನ್ನ ಹೃದಯದ ತಳಮಳವನ್ನು ತಡೆದುಕೊಂಡು, ಸವತಿಯ ಮನೆಗೇ ನಗು–ನಗುತ್ತಾ ಕಳುಹಿಸಿಕೊಡುತ್ತಿದ್ದಳು. ಈ ಬಾರಿ ಗಂಡನೊಂದಿಗೆ ತನ್ನ ಅಂತರಂಗದ ಮಾತನ್ನು ಭಯ ಹಾಗೂ ಸಂಕೋಚದಿಂದಲೇ ತಿಳಿಸಿದಳು. "ಸ್ವಾಮಿ, ನಾವು ಮಾತೆ ಅನ್ನಪೂರ್ಣೆಯ ವ್ರತವನ್ನು ಆಚರಿಸಿದ ಮೇಲೆ ಅಲ್ಲವಾ, ಇಷ್ಟೊಂದು ಸುಖದ ದಿನಗಳನ್ನು ಕಂಡದ್ದು ? ಈಗ ಮತ್ತೆ ಮಾರ್ಗಶಿರ ಮಾಸ ಬಂದಿದೆ. ಮತ್ತೆ ನಿಮ್ಮೊಂದಿಗೆ ವ್ರತವನ್ನಾಚರಿಸುವ ಮನಸ್ಸಾಗುತ್ತಿದೆ. ಒಪ್ಪಿಗೆ ಕೊಡುವಿರಾ ? ತಾಯಿಯ ವ್ರತದ ಸೇವೆಗಾಗಿ ಸಮ್ಮತಿಸುವಿರಾ ?"

ಧನಂಜಯನೂ ಮಾತೆಯ ಪರಮ ಭಕ್ತನೇ ತಾನೇ ? ಹಿಂದು–ಮುಂದು ಯೋಚಿಸದೆ ಒಪ್ಪಿದನು. ಸಮ್ಮತಿಸಿದನು. ಒಂದು ಶುಭ ಮುಹೂರ್ತದ ದಿನ ಸುಲಕ್ಷಣೆಯೊಂದಿಗೆ ವ್ರತ ನೆರವೇರಿಸಲು ಕುಳಿತ. ಕಿರಿಯ ಹೆಂಡತಿಗೆ ಈ ವಿಷಯ ತಿಳಿಸಿರಲಿಲ್ಲ. ಅಡ್ಡಿ ಬರುವಳೆಂಬ ಆತಂಕ ಇಬ್ಬರ ಮನಸ್ಸಿನಲ್ಲಿಯೂ ಉಂಟಾಗಿತ್ತು. ವ್ರತ ಮುಗಿಯುವುದರಲ್ಲಿ ಮೂರು ದಿನಗಳು ಆಗಿ ಹೋದುವು ಕಿರಿಯ ಹೆಂಡತಿ ತವಕದಿಂದ ಗಂಡನ ಬಗ್ಗೆ ಉದ್ರೇಕಕೊಂಡಳು. ತಾನೇ ಸುಲಕ್ಷಣೆಯ ಮನೆಗೆ ಬಂದಳು. ಹೃದಯದಲ್ಲಿ ದ್ವೇಷಾಸೂಯೆಯ ಉರಿ ಧಗಧಗಿಸುತ್ತಿತ್ತು. ಆ ಉರಿಯಲ್ಲಿಯೇ ವ್ರತಕ್ಕೆ ಕುಳಿತಿದ್ದ ಸುಲಕ್ಷಣೆಯನ್ನು ಬಾಯಿಗೆ ಬಂದಂತೆ ನಿಂದಿಸಿದಳು. ತನ್ನ ಗಂಡನನ್ನು ವ್ರತನಿಷ್ಠನಾಗಿದ್ದರೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಲೆಕ್ಕಿಸದೆ, ಅವನ ಕೈಹಿಡಿದು, ದರದರನೆ ಮನೆ ಬಿಟ್ಟು ಮೇಯಲು ಹೋಗಿದ್ದ ಎತ್ತನ್ನು ಎಳೆದುಕೊಂಡು ಬರುವಂತೆ ತನ್ನ ಮನೆಗೆ ಕರೆ ತಂದಳು, ನಾಗ ಸರ್ಪಿಣಿಯಂತಾಗಿದ್ದ ಅವಳ ಮುಖ ಈಗಲೂ ಬಿಚ್ಚಿದ ಹೆಡೆಯಂತೆಯೇ ಧನಂಜಯನಿಗೆ ಕಾಣುತ್ತಿತ್ತು. ಅದರೂ ವ್ರತದ ಕಾರ್ಯದಲ್ಲಿ ದೇಹ ಬಳಲಿದ್ದು ದರಿಂದ ತುಂಬಾ ಆಯಾಸಗೊಂಡಿದ್ದ ಹಾಗೆಯೇ ಮಂಚದ ಮೇಲೆ ಮಲಗಿದ ಮಲಗಿದ್ದಂತೆ ಮಪ್ಪರ ಬಂದಂತಾಗಿ ನಿದ್ರಾದೇವಿಯ ತೊಡೆಯ ಮೇಲೆ ಮೈ ಮರೆತವನಂತೆ ನಿದ್ರಿಸಿದ. ಅದೇ ವೇಳೆಗೆ ಕಿರಿಯ ಹೆಂಡತಿ ಅಲ್ಲಿಗೆ ಬಂದಳು. ಗಂಡನು ಕೈಗೆ ಕಟ್ಟಿಕೊಂಡಿದ್ದ ವ್ರತದ ಸೂತ್ರವನ್ನು ಕಿತ್ತು, ಬೆಂಕಿಯಲ್ಲಿ ಹಾಕಿಬಿಟ್ಟಳು. ಈಗ ಅನ್ನಪೂರ್ಣ ಮಾತೆಗೆ ತುಂಬಾ ಕೋಪ ಬಂತು. ತಾಯಿಯ ಕೋಪಕ್ಕೊಳಗಾದ ಆ ಮನೆಯಲ್ಲಿ ಇದ್ದಕ್ಕಿದ್ದಂತೆ ಬೆಂಕಿ ಹೊತ್ತಿ ಕೊಂಡು, ಸರ್ವಸ್ವವೂ ಸುಟ್ಟು ಬೂದಿ ಆಗಿ ಹೋಯಿತು. ವಿಚಾರವನ್ನು ತಿಳಿದ ಸುಲಕ್ಷಣಾ ತುಂಬಾ ದುಃಖಿತಳಾದಳು ಚಿಂತಾಕ್ರಾಂತಳಾದಳು, ಕೂಡಲೇ ಹೋಗಿ, ತಲೆಯ ಮೇಲೆ ಕೈ ಇಟ್ಟುಕೊಂಡು ಕುಳಿತಿದ್ದ ಧನಂಜಯ ನನ್ನು ತನ್ನ ಮನೆಗೇ ಕರೆತಂದಳು. ಕಿರಿಯ ಹೆಂಡತಿಗೆ ಈಗ ಇನ್ನೂ ಸಿಟ್ಟು ಬಂತು. ತನ್ನ ತಪ್ಪನ್ನು ತಾನು ಅರಿತುಕೊಳ್ಳದೆ ಎಲ್ಲರನ್ನೂ ದೂರುತ್ತಾ ತನ್ನ ತಾಯಿಯ ಮನೆಗೆ ಹೊರಟುಹೋದಳು.

ಗಂಡನ ಮನೋವೇದನೆಯನ್ನು ಕಂಡ ಸುಲಕ್ಷಣಳಿಗೆ ಅಳು ಬಿಕ್ಕಿ ಬಂತು. ಪತಿಯನ್ನೇ ಪರದೈವವೆಂದು ಭಾವಿಸಿದ್ದ ಅವಳು ಗಂಡನಿಗೆ ಸಮಾಧಾನ ಹೇಳಿದಳು. "ಆದದ್ದಾಯಿತು. ಚಿಂತಿಸುತ್ತಾ ಕೂಡುವುದರಿಂದ ಏನೂ ಪ್ರಯೋಜನವಿಲ್ಲ ತಾವು ಮಾತಾ ಅನ್ನಪೂರ್ಣಾದೇವಿಯನ್ನು ಕುರಿತು ಮೊದಲಿನಂತೆ ಆರಾಧಿಸಿ. ಮಾತೆ ಮಮತಾಮಯಿ, ನಮ್ಮ ತಪ್ಪನ್ನು ಕ್ಷಮಿಸಿ, ಪುನಃ ಒಡೆದು ಹೋಗಿರುವ ಕುಟುಂಬವನ್ನು ಒಂದು ಗೂಡಿಸುವಳು. ಮೊದಲ ಸುಖ ಸಾಮ್ರಾಜ್ಯ ನಮ್ಮ ಕುಟುಂಬದಲ್ಲಿ ನೆಲೆಗೊಳ್ಳುವುದು. ನಮ್ಮೆಲ್ಲರಿಗೂ ಒಳ್ಳೆಯದೇ ಆಗುವುದು.

ಧನಂಜಯ ಮತ್ತೆ ಕಾಡಿನಲ್ಲಿದ್ದ ಸರೋವರದ ಬಳಿಗೆ ಬಂದ. ಮಾತೆಯನ್ನು ಕುರಿತು ಶ್ರದ್ಧೆ-ಭಕ್ತಿಯಿಂದ ತಪಸ್ಸು ಮಾಡತೊಡಗಿದ. ಘೋರ

Sri Vidyabharathi Book Centre, Sringeri

CC-O. In Public Domain. Digitized by eGangotri

ತಪಸ್ಸನ್ನು ಆಚರಿಸುತ್ತಿದ್ದಂತೆ ಮತ್ತೆ ಸುವರ್ಣದ ಏಣಿ ಮೇಲೆ ಬಂತು. ಹೋದ ಜೀವ ಬಂದಂತಾದ ಧನಂಜಯು ಮಾತೆಯ ಹೆಸರನ್ನೇ ಜಪಿಸುತ್ತಾ ನಿಧಾನವಾಗಿ ಏಣಿಯ ಮೆಟ್ಟಲುಗಳ ಮೇಲೇರಿ ನೀರಿನಲ್ಲಿ ಮುಳುಗುತ್ತಾ ಹೋದ. ಭವ್ಯ ಬೆಳಕಿನ ಲೋಕದಲ್ಲಿ ತಾಯಿಯ ದರ್ಶನ ಆಯಿತು. ಆಕೆಯ ಪಾದಗಳ ಮೇಲೆ ಬಿದ್ದು, ಮುಗ್ಧ ಮಗುವಿನಂತೆ ಬಿಕ್ಕಿ ಬಿಕ್ಕಿ ಅಳತೊಡಗಿದ ಮಾತೆಯು ಪ್ರಸನ್ನಚಿತ್ತಳಾಗಿ, ಧನಂಜಯನನ್ನು ಎತ್ತಿ ಕುಳ್ಳಿರುಸುತ್ತಾ ಹೇಳಿದಳು -"ಈ ನನ್ನ ಸ್ವರ್ಣ ಮೂರ್ತಿಯನ್ನು ತೆಗೆದುಕೊಂಡು ಹೋಗು, ಇದನ್ನೇ ಶ್ರದ್ಧೆ-ಭಕ್ತಿಯಿಂದ ಪೂಜಿಸುತ್ತಿರು. ಮತ್ತೆ ಮೊದಲ ಶಾಂತಿ-ಸುಖ ವನ್ನೇ ನೀವೆಲ್ಲರೂ ಪಡೆಯುತ್ತೀರಿ. ಹೋಗು, ನಿನ್ನ ಹೆಂಡತಿ ಸುಲಕ್ಷಣಾ ನನ್ನನ್ನು ಮನಸಾರೆ ಭಜಿಸಿದ್ದಾಳೆ, ನಂಬಿದ್ದಾಳೆ. ಅವಳ ಅಭೀಷ್ಟದಂತೆ ಒಂದು ಗಂಡು ಮಗುವೂ ಜನಿಸುವುದು. ನನ್ನ ಆಶೀರ್ವಾದ ಕೃಪೆ 'ಸದಾ ಕಾಲವೂ ನಿಮ್ಮ ಮೇಲಿರುತ್ತದೆ. ಧನಂಜಯನು ಮಾತೆಯನ್ನು ನೋಡ-ನೋಡು ತ್ತಿದ್ದಂತೆ ಕಾಶೀ ವಿಶ್ವೇಶ್ವರನ ದೇವಾಲಯದಲ್ಲಿದ್ದ. ಅಲ್ಲಿಂದ ಅತುಲ ಆನಂದ ದೊಂದಿಗೆ ಮನೆಗೆ ಬಂದ. ಮಹಡಿಗೆ ಅಮೂಲಾಗ್ರವಾಗಿ ನಡೆದ ವಿಚಾರ ವನ್ನೆಲ್ಲಾ ತಿಳಿಸಿದ. ಸುಲಕ್ಷಣೆಯೂ ಆನಂದ ಸಾಗರದಲ್ಲಿ ಮುಳುಗಿಹೋದಳು. ಮಾತೆಯ ಮಹಿಮೆಯನ್ನು ಹೃತ್ಪೂರ್ವಕವಾಗಿ ಕೊಂಡಾಡತೊಡಗಿದರು.

ಇತ್ತ ಸುಲಕ್ಷಣ ತಾಯಿಯ ಆಶೀರ್ವಾದ ಕೃಪೆಯಿಂದ ಗರ್ಭವತಿ ಆದಳು ಸಕಾಲದಲ್ಲಿ ಒಂದು ಗಂಡು ಮಗುವನ್ನೂ ಹಡೆದಳು. ಅವರಿದ್ದ ಕೇರಿಯಲ್ಲೆಲ್ಲಾ ಈ ಆಶ್ಚರ್ಯದ ಪವಾಡದ ಸಂಗತಿ ಹರಡಿತು ಸಂತೋಷಿಮಾತೆಯ ಮಹಿ ಮೆಯ ಬಗ್ಗೆ ಕೇರಿಯ ಜನರೆಲ್ಲರಲ್ಲೂ ಶ್ರದ್ಧೆ-ಭಕ್ತಿ ತುಂಬಿತು. ಅದೇ ಕೇರಿ ಯಲ್ಲಿ ಒಬ್ಬ ಸೇಟ್ ಇದ್ದ. ಅವನೊಬ್ಬ ಆಗರ್ಭ ಶ್ರೀಮಂತ. ಆದರೆ ಅವನಿಗೂ ಮಕ್ಕಳಿರಲಿಲ್ಲ. ಮಾತೆಯನ್ನು ಕುರಿತು ಧನಂಜಯನ ನೇತೃತ್ವದಲ್ಲಿ, ಸುಲ ಕ್ಷಣಾದೇವಿಯ ದಿಗ್ದರ್ಶನದಲ್ಲಿ ವ್ರತವನ್ನು ಅದ್ದೂರಿಯಿಂದ ಆಚರಿಸಿದ. ಆವನೂ ಮಾತೆಯ ಕೃಪೆಗೆ ಪಾತ್ರನಾದ. ಅವನ ಮಡದಿಯೂ ಗಂಡು ಮಗು ವಿಗೆ ಜನ್ಮ ನೀಡಿದಳು ಶ್ರೀಮಂತನಾದ ಸೇಟ್ ಸಂತೋಷದಲ್ಲಿ ಹಿಗ್ಗಿ ಹೋದ. ಕೇರಿಯಲ್ಲಿ ಮಾತೆಯ ದಿವ್ಯ ದೇಗುಲವನ್ನೇ ಸ್ವಂತ ಖರ್ಚಿನಿಂದ ನಿರ್ಮಾಣ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡಿದ. ಧನಂಜಯನನ್ನೇ ದೇಗುಲದ ಅರ್ಚನೆಯ ಕೆಲಸಕ್ಕೆ ನೇಮಿಸಿದ. ದೇವಾಲಯದ ಜವಾಬ್ದಾರಿಯೆಲ್ಲಾ ಈಗ ಧನಂಜಯನ ಮೇಲೆ ಬಿದ್ದಿತ್ತು. ಅವನ ಜೀವನಕ್ಕಾಗಿ ದೇವಾಲಯದ ಹೆಸರಿನಲ್ಲಿ ಕೇರಿಯವರೆ ಹೊಲ-ಗದ್ದೆ ಮಾಡಿಕೊಟ್ಟರೂ ಸಾಕಷ್ಟು ಆದಾಯ ಕೈಸೇರುವಂತಾಯಿತು. ಧನಂಜಯ ತನ್ನ ಹೆಂಡತಿ ಹಾಗು ಮಗುವಿನೊಂದಿಗಿರಲು ಸೇಟ್ ಒಂದು ಸುಂದರವಾದ ಗೃಹವನ್ನೇ ನಿರ್ಮಾಣಮಾಡಿಕೊಟ್ಟ.

ಅತ್ತ ಕಿರಿಯ ಹೆಂಡತಿಯ ತಂದೆಯಮನೆಯಲ್ಲಿ ಇದ್ದಕ್ಕಿದ್ದಂತೆ ದರೋಡೆಗಾರರು ನುಗ್ಗಿದರು. ಧನ-ಕನಕ ವಸ್ತುಗಳನ್ನೆಲ್ಲಾ ಲೂಟಿಮಾಡಿದರು. ಅವರೆಲ್ಲರೂ ಈಗ ಭಿಕ್ಷಾಟನೆಗೆ ಬೀದಿಗಿಳಿಯುವಂತಾಯಿತು. ವಿಚಾರವನ್ನು ತಿಳಿದ ಸುಲಕ್ಷಣ ಅವರೆಲ್ಲರನ್ನೂ ಸಮಾಧಾನದಿಂದ ಕರೆಯಿಸಿ ಕೊಂಡಳು. ಅವರ ವಾಸಕ್ಕೆಂದೇ ಹೊಸ ಮನೆ ಕಟ್ಟಿಸಿಕೊಟ್ಟಳು. ಈಗ ಕಿರಿಯ ಹೆಂಡತಿಗೂ ಬುದ್ಧಿ ಬಂದಿತ್ತು. ಅವಿವೇಕದ ಕಾರಣ ಸುತ್ತುಗಟ್ಟಿದ್ದ ಅಜ್ಞಾನದ ಕತ್ತಲೆಯ ಕೋಟೆ ಕರಗಿಹೋಯಿತು. ಧನಂಜಯನ ಪರಿವಾರ ಮತ್ತೆ ಸ್ವರ್ಗ ಸದೃಶವೆನಿಸಿತು. ಕೇರಿಯಲ್ಲಿ ಎಲ್ಲರೂ ಸಂತೋಷೀಮಾತೆಯನ್ನು ಮಾತೆಯೆಂದೇ ಭಾವಿಸತೊಡಗಿದರು. ಮಾತೆ ಕೇರಿ ದೇವತೆಯೇ ಆಗಿಹೋದಳು.

--o--

ಅನ್ನಪೂರ್ಣಾದೇವಿಯ ಸ್ತೋತ್ರ

ನಿತ್ಯಾನಂದಕರೀ ಪರಾಭಯಕರೀ ಸೌಂದರ್ಯ ರತ್ನಾಕರೀ-ಲೋಕ ಪಾವನಕರೀ ಪ್ರತ್ಯಕ್ಷ ಮಾಹೇಶ್ವರೀ ಪ್ರಾಲಯಂಜಲ ವಂಶಪಾವನಕರೀ ಕಾಶೀ ಪುರಾಧೀಶ್ವರೀ ಭಿಕ್ಷಾಂ ದೇಹಿ ಕೃಪಾವಲಂಬನಕರೀ ಮಾತಾನ್ನಪೂರ್ಣೇಶ್ವರೀ ॥೧॥

Sri Vidyabharathi Book Centre, Sringeri

CC-O. In Public Domain. Digitized by eGangotri

ನಾನಾರತ್ನ ವಿಚಿತ್ರ ಭೂಷಣಕರೀ ಹೇಮಾಂಬರ ಉರ್ವರಿ ಮುಕ್ತಾ ಹಾರ ವಿಲಂಬಮಾನ ವಿಲಸುದ್ಧಿ ಕ್ಷೋಭ ಕುಂಭಾಂಕರೀ ಕಾಶ್ಮೀರಾ ಗುರುವಾ ಶ್ರಿತಾ ರುಚಿಕರೀ ಕಾಶೀ ಪುರಾಧೀಶ್ವರೀ ಭಿಕ್ಷಾಂದೇಹಿ ಕೃಪಾವಲಂಬನಕರೀ ಮಾತನ್ನ ಪೂರ್ಣೇಶ್ವರೀ ॥೨॥

ಯೋಗ್ಯಾನಂದಕರೀ ರಿಪುಕ್ಷಯಕರೀ ಕಾಶೀ ಧರ್ಮಾರ್ಥನಿಷ್ಠಾಕರೀ ಚಂದ್ರಾ ರ್ಕಾನಿಲ ಭಾಸಮಾನಲಹರೀ ತ್ರೈಲೋಕ್ಯ ರಕ್ಷಾಕರೀ ಸರ್ವೇಶ್ವರೀ ಸವಿಸ್ತಂ ವಾಂಛಿತಕರೀ ಕಾಶೀ ಪುರಾಧೀಶ್ವರೀ ಭಿಕ್ಷಾಂದೇಹಿ ಕೃಪಾವಲಂಬನಕರೀ ಮಾತನ್ನ ಪೂರ್ಣೇಶ್ವರೀ ॥೩॥

ಕೈಲಾಸಾಚಲ ಕಂದಕಾಲಯಕರೀ ಗೌರೀ ಉಮಾಶಂಕರೀ ಕೌಮಾರೀ ನಿಗಮಾರ್ಗ ಗೋಚರಕರೀ ಓಂಕಾರ ಬೀಜಾಕ್ಷರೀ ಮೋಕ್ಷದ್ವಾರ ಕಪಾಟಪಾಟನ ಕರೀ ಕಾಶೀ ಪುರಾಧೀಶ್ವರೀ ಭಿಕ್ಷಾಂದೇಹಿ ಕೃಪಾವಲಂಬನಕರೀ ಮಾತನ್ನ ಪೂರ್ಣೇಶ್ವರೀ ॥೪॥

ದೃಶ್ಯಾದೃಶ್ಯಪ್ರಭೂತವಾಹನಕರೀ ಬ್ರಹ್ಮಾಂಡ ಭಾಂಡೋದರೀ ಲೀಲಾ ನಾಟಕ ಸೂತ್ರ ಭೇದನಕರೀ ವಿಜ್ಞಾನ ದೀಪಾಂಕುರೀ ಶ್ರೀ ವಿಶ್ವೇಶ್ವರ ಮನ ಪ್ರಸಾದನಕರೀ ಮಾತನ್ನ ಪೂರ್ಣೇಶ್ವರೀ ॥೫॥

ಉರ್ವೀ ಸರ್ವಜನೇಶ್ವರಿ ಭಗವತೀ ಗೌರೀಉಮಾಮಾಹೇಶ್ವರೀ ವೇಣೀ ನೀಲಸಮಾನ ಕುಂತಲಕರೀ ನಿತ್ಯಾತಿ ದಾಕ್ಷೇಶ್ವರೀ ಸರ್ವಾದಾನಂದಕರೀ ದಶಾ ಶುಭಕರೀ ಕಾಶೀ ಪುರಾಧೀಶ್ವರೀ ಭಿಕ್ಷಾಂದೇಹಿ ಕೃಪಾವಲಂಬನಕರೀ ಮಾತನ್ನ ಪೂರ್ಣೇಶ್ವರೀ ॥೬॥

ಆದಿಕ್ಷಾಂತಸಮಸ್ತ ವರ್ಣಾನಕರೀ ಶಂಭೋ ಸ್ವಭಾವಾಂಕರೀ ಕಾಶ್ಮೀರಾ ವಿಜನೇಶ್ವರೀ ಶ್ರೀ ಹರೀ ನಿತ್ಯಾಂಕುರಾಶರ್ವರೀ । ಕಾಮಾಕಾಕ್ಷಕರೀ ಜನೋದಯಕರೀ ಕಾಶೀ ಪುರಾಧೀಶ್ವರೀ ಭಿಕ್ಷಾಂದೇಹಿ ಕೃಪಾವಲಂಬನಕರೀ ಮಾತನ್ನ ಪೂರ್ಣೇಶ್ವರೀ ॥೭॥

Sri Vidyabharathi Book Centre, Sringeri

CC-O. In Public Domain. Digitized by eGangotri

ಚಂದ್ರಕಾನಿಲ ಕೋಟಿ ಕೋಟಿ ಸದೃಶಾ ಚಂದ್ರಾಂಶು ಬಿಂಬಾಧರೀ ಚಂದ್ರರ್ಕಾಗ್ನಿ ಸಮಾನ ಕುಂತಲಕರೀ ಚಂದ್ರಾರ್ಕವರ್ಣೇಶ್ವರೀ । ಮಾಲಾ ಪುಸ್ತಕ ಪಾಶ ಅಂಕುಶಧರೀ ಕಾಶೀಪುರಾಧೀಶ್ವರೀ ಭಿಕ್ಷಾಂದೇಹಿ ಕೃಪಾವಲಂಬನಕರೀ ಮಾತನ್ನ ಪೂರ್ಣೇಶ್ವರೀ ||೮||

ಕ್ಷಾತ್ರಾತ್ರಾಣಕರೀ ಮುದಾಭಯಕರೀ ಮಾತಾಕೃಪಾಸಾಗರಿ ಸಾಕ್ಷಾತ್ ಮೋಕ್ಷಕರೀ ಸದಾಶಿವಕರೀ ವಿಶ್ವೇಶ್ವರಾ ದೃಂಷ್ಟ್ರೋತ್ಕಂಡಕರೀ ನಿರಾಭಯಕರೀ ಕಾಶೀಪುರಾಧೀಶ್ವರೀ ಭಿಕ್ಷಾಂದೇಹಿ ಕೃಪಾವಲಂಬನಕರೀ ಮಾತನ್ನ ಪೂರ್ಣೇಶ್ವರೀ ||೯||

ದೇವೀಸರ್ವವಿದಿತ ರತ್ನ ರಚಿತಾ ದಾಕ್ಷಾಯನೀ ಸುಂದರೀ ಧರ್ಮಸ್ವಾದುಪಯೋಧರ ಪ್ರಿಯಕರೀ ಸೌಭಾಗ್ಯ ಮಾಹೇಶ್ವರೀ । ಭಕ್ತ್ಯಾವಿಷ್ಟಕರೀ ದಶಾಶುಭಕರೀ ಕಾಶೀಪುರಾಧೀಶ್ವರೀ ಭಿಕ್ಷಾಂದೇಹಿ ಕೃಪಾವಲಂಬನಕರೀ ಮಾತನ್ನ ಪೂರ್ಣೇಶ್ವರೀ ||೧೦||

ಅನ್ನಪೂರ್ಣ ಸದಾಪೂರ್ಣೇ ಶಂಕರ ಪ್ರಾಣವಲ್ಲಭೇ ಜ್ಞಾನ ವೈರಾಗ್ಯ ಸಿದ್ಧ್ಯಾರ್ಥೇ ಭಿಕ್ಷಾಂದೇಹಿಚ ಪಾರ್ವತೀ । ಮಾತಾ ಮೇ ಪಾರ್ವತೀದೇವೀ ಪಿತಾ ಮಾಹೇಶ್ವರಃ ಬಾಂಧವಾಃ ಶಿವಭಕ್ತಾಶ್ಚ ಸ್ವದೇಶೋಭುವನತ್ರಯಂ

–೦–

Sri Vidyabharathi Book Centre, Sringeri

CC-O. In Public Domain. Digitized by eGangotri

ವರಮಹಾಲಕ್ಷ್ಮಿಯ ಕಥೆ

ತುಂಬಾ ಹಿಂದೆ ಪ್ರಬುದ್ಧ ರಾಜನೆಂಬ ದೊರೆ ಇದ್ದನು. ರಾಜ್ಯದಲ್ಲಿ ಜನರು ರಾಜನ ದಕ್ಷ ಆಡಳಿತದಿಂದ ಸುಖದಿಂದಿದ್ದರು. ರಾಜ್ಯವು ಸುಭಿಕ್ಷತೆಯಿಂದ ಕೂಡಿದ್ದು, ಸುರಾಜ್ಯ ಎನಿಸಿತ್ತು. ರಾಜನಿಗೆ ಇಬ್ಬರು ರಾಣಿಯರು. ಹಿರಿಯವಳು ಮಾಧವರಾಣಿ, ಕಿರಿಯವಳು ಚಿಮಾದೇವಿ. ಇಂತಹ ಸುಭಿಕ್ಷಿತ ರಾಜ್ಯದಲ್ಲಿಯೂ ಪ್ರಜೆಗಳಿಗಿದ್ದ ತೊಂದರೆ ಎಂದರೆ ಒಬ್ಬ ಮಾಂತ್ರಿಕನದು. ಅವನ ಹೆಸರು ನಂದೀಶ್ವರ. ಮಾಯಾಜಾಲ–ಇಂದ್ರಜಾಲದ ಜಾದೂ ವಿದ್ಯೆಯಲ್ಲಿ ತುಂಬಾ ಚತುರ. ಒಂದ್ದೆಡೆಯಲ್ಲಿ ಇರುತ್ತಿರಲಿಲ್ಲ ಭೂವ್ಯಾಕಾಶಗಳೆರಡೂ ಅವನ ವಾಸಸ್ಥಳಗಳಾಗಿದ್ದುವು. ಒಮ್ಮೆ ಭೂಮಿಯ ಮೇಲಿದ್ದರೆ ಸಾಹಸದಿಂದ ಹಿಡಿಯ ಬಂದವರಿಗೆ ಮಣ್ಣು ಮುಕ್ಕಿಸಲು ತನ್ನ ಜಾದೂ ವಿದ್ಯೆಯಿಂದ ಆಕಾಶದಲ್ಲಿ ಕಾಣಿಸುತ್ತಿದ್ದನು. ಹಲವೊಮ್ಮೆ ಕಣ್ಣಿಗೇ ಬೀಳದೆ ಕಣ್ಮರೆಯಾಗಿರುತ್ತಿದ್ದನು. ಪ್ರಜೆಗಳಿಗೆ ತನ್ನ ಮಾಯೆಯ ಶಕ್ತಿಯ ಪ್ರದರ್ಶನದಲ್ಲಿ ಸಾಕಷ್ಟು ಕಿರುಕುಳ ಕೊಡುತ್ತಿದ್ದನು ಇವನಿಂದ ಪಾರಾಗಲು ಸಾಧ್ಯವಾಗದೆ ಮಹಿಳೆಯರು, ಮಕ್ಕಳು, ಮುದುಕರು ಎಲ್ಲರೂ ರಾಜನ ಬಳಿ ಮೊರೆ ಇಟ್ಟರು.

ರಾಜನಿಗೂ ನಂದೀಶ್ವರನ ಮೇಲೆ ತುಂಬಾ ಆಗ್ರಹ ಉಂಟಾಯಿತು. ಆಗ್ರಹವಿದ್ದ ಮಾತ್ರಕ್ಕೇ ಏನಾದೀತು ? ಹಿಡಿಯುವ ಶಕ್ತಿವಂತರೇ ಎಲ್ಲೂ ಕಂಡು ಬರಲಿಲ್ಲ. ಹೇಗಾದರೂ ನಂದೀಶ್ವರನನ್ನು ಹಿಡಿದು ಕೊಲ್ಲುವವರನ್ನು ರಾಜ್ಯವು ಜೀವನ ಪರ್ಯಂತ ಸ್ಮರಿಸುವುದೆಂದು ಡಂಗೂರ ಹೊಡೆದನು ಎಷ್ಟೋ ಮಂದಿ ನುರಿತ ಮಾಂತ್ರಿಕರೇ ಅವನನ್ನು ಸಂಹರಿಸಲು ಹೋಗಿ ಸ್ವತಃ ಅವನ ಮಾಯೆಯ ಜಾಲದಲ್ಲಿ ಸಿಕ್ಕಿಬಿದ್ದು ಪ್ರಾಣ ಕಳೆದುಕೊಂಡರು. ಈಗ ಯಾರೊಬ್ಬರಿಗೂ ನಂದೀಶ್ವರನನ್ನು ಹಿಡಿಯುವ ಸಾಹಸ ಉಂಟಾಗಲಿಲ್ಲ.

ಅದೇ ರಾಜಧಾನಿಯಲ್ಲಿ ಒಂದು ಮುದುಕಿಯ ಮನೆ. ಆ ಮನೆಯಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಮುದುಕಿ ಹಾಗೂ ಅವಳ ಮೊಮ್ಮಗ ಇಬ್ಬರೇ. ಮೊಮ್ಮಗ, ಅದೇ ತಾನೇ ಯುವಾವಸ್ಥೆಯ ಮೆಟ್ಟಲೇರುತ್ತಿದ್ದ, ಚಿಗುರು ಮೀಸೆಯ, ಸುಂದರ ಮುಖದ ಈ ಯುವಕ ಮನ್ಮಥನಂತೆಯೇ ಕಾಣುತ್ತಿದ್ದ. ಜನರೂ ಅವನನ್ನು ರತಿಪತಿ ಎಂದೇ ಕರೆಯುತ್ತಿದ್ದರು. ಇವನಿಗೆ ನಂದೀಶ್ವರನನ್ನು ಹುಡುಕಲು, ಕೊಂದು ಜನರ ಕಷ್ಟವನ್ನು ನಿವಾರಿಸಲು ಮನಸ್ಸಾಯಿತು. ಅಜ್ಜಿಗೆ ತನ್ನ ಮನೋಭಿ ಲಾಷೆಯನ್ನು ತಿಳಿಸಿದ ಮೊದಮೊದಲು ಅಜ್ಜಿಯೂ ಅಳುಕಿದಳು. ಆದರೆ ಮೊಮ್ಮಗನು ಹಿಡಿದ ಪಟ್ಟು ಬಿಡುವವನಲ್ಲ ಎಂಬ ವಿಷಯ ಅವಳಿಗೂ ಮೊದ ಲಿಂದಲೂ ತಿಳಿದ ವಿಷಯವೇ ಆಗಿತ್ತು. ಬುತ್ತಿ ಕಟ್ಟಿ ಕೊಟ್ಟಳು. ಮನಃ ಪೂರ್ವಕವಾಗಿ ಹರಸಿ–ಹಾರೈಸಿ ಕಳುಹಿಸಿದಳು.

ನಂದೀಶ್ವರನನ್ನು ಹುಡುಕುತ್ತಾ ಯುವಕ ಹೊರಟ. ಎಷ್ಟೋ ದಿನ ಗಳು ಕಳೆದುಹೋದವು ರಾಜಧಾನಿ ದೂರವಾಯಿತು. ಕಾಡುಮೇಡುಗಳಲ್ಲಿ ಅಲೆ ದಾಡುತ್ತಾ ಒಂದು ಮಧ್ಯರಾತ್ರಿಯ ಸಮಯದಲ್ಲಿ ಒಬ್ಬಂಟಿಗನಾಗಿ ಬರುತ್ತಿದ್ದಾಗ ದೂರದಲ್ಲಿ ದಿವ್ಯ ಬೆಳಕು ಕಾಣಿಸಿತು. ಈ ದಟ್ಟಡವಿಯಲ್ಲಿ ಎಂತಹ ಬೆಳಕು ! ಎಂದು ಬೆಚ್ಚುತ್ತಾ, ಪರೀಕ್ಷಿಸಲು ನಿಧಾನವಾಗಿ ಅತ್ತ ಹೆಜ್ಜೆ ಹರಿಸಿದನು. ಬಹುಶಃ ಇದೂ ಸಹ ನಂದೀಶ್ವರನ ಪವಾಡವೇ ಇರಬಹುದೇ? ಎಂಬ ಶಂಕೆಯೂ ಅವನಿಗೆ ಮೂಡಿತ್ತು. ಬೆಳಕಿನೆಡೆಗೆ ಸಮೀಪಿಸುತ್ತಿದ್ದಂತೆ ಅಲ್ಲೊಂದು ದೇಗುಲ, ಅದರಲ್ಲಿ ನಾಗಕನ್ನಿಕೆಯರು ಕೂಡಿ ಭಕ್ತಿಯ ತನ್ಮಯತೆಯಲ್ಲಿ ಹಾಡುತ್ತಿದ್ದರು ಮಧ್ಯರಾತ್ರಿಯ ಆ ವೇಳೆಯಲ್ಲಿ ಇದೆಂತಹ ದೃಶ್ಯ ! ಎಂದು ಸೋಜಿಗದಿಂದಲೇ ಯುವಕ ಅವರ ಬಳಿ ಬಂದ. ಅವರೆಲ್ಲರನ್ನು ಕಂಡು, ನಮಸ್ಕರಿಸುತ್ತಾ ಕೇಳಿದ––"ಸೋದರಿಯರೇ? ತಾವೆಲ್ಲಾ ಇಲ್ಲಿ ಏನು ಮಾಡು ತ್ತಿದ್ದೀರಿ ?

ಅವರು ಯುವಕನ ಸುಂದರವಾದ, ಮನಮೋಹಕ ಮುಖವನ್ನು ಕಂಡು ತಬ್ಬಿಬ್ಬಾದರು. "ಅದಿರಲಿ, ನೀನು ಯಾರು ? ನಿನ್ನ ಮುಖದಲ್ಲಿ ದಿವ್ಯ ತೇಜಸ್ಸು ಕಂಡುಬರುತ್ತಿದೆಯಲ್ಲಾ ! ಏಕಾಂಗಿಯಾಗಿ ಈ ಕಾಡಿನಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಏಕೆ ಹೀಗೆ ಆ ವೇಳೆಯಲ್ಲಿ ಅಲೆಯುತ್ತಿರುವೆ ?" ಎಂದು ಸೌಮ್ಯಭಾವದೊಂದಿಗೆ ವಿಚಾರಿಸಿದರು.

ಯುವಕ ತಾನು ಬಂದಿರುವ ಉದ್ದೇಶದ ಬಗ್ಗೆ ವಿವರವಾಗಿ ತಿಳಿಸಿದ. ಯುವಕನ ಸಾಹಸವನ್ನು ಕನ್ನಿಕೆಯರೂ ಮನದಲ್ಲಿ ಮೆಚ್ಚಿ ಹೇಳಿದರು—"ನಿಜಕ್ಕೂ ನೀನು ಈ ಸಾಹಸ ಕೃತ್ಯದಲ್ಲಿ ವಿಜಯಿ ಎನಿಸಲು ಅರ್ಹನಿದ್ದೀಯೆ. ನಾವು ಇಲ್ಲಿ ವರಮಹಾಲಕ್ಷ್ಮಿಯ ವ್ರತವನ್ನು ಆಚರಿಸುತ್ತಿದ್ದೇವೆ. ನೀನು ಈ ವ್ರತವನ್ನು ಆಚರಿಸು, ಈ ವ್ರತಕ್ಕೆ ಶ್ರದ್ಧೆ-ಭಕ್ತಿಯು ವಿನಃ ಬೇರೆ ಏನೂ ಬೇಕಿಲ್ಲ ಎಂದು ಹೇಳುತ್ತಾ ವರಮಹಾಲಕ್ಷ್ಮಿಯ ವ್ರತ ವಿಧಾನವನ್ನೂ, ಅದರ ಫಲವನ್ನೂ ತಿಳಿಸಿದರು. ಯುವಕನಿಗೆ ತನ್ನ ಮನೋಭಿಲಾಷೆ ಸಿದ್ಧಿಸುವುದೆಂಬ ಪೂರ್ಣ ಭರವಸೆ ಕನ್ನಿಕೆಯರ ಮಾತಿನಿಂದ ಉಂಟಾಯಿತು. ಅವನೂ ಕೂಡಲೇ ಅವರೊಂದಿಗೇ ವ್ರತದಲ್ಲಿಪಾಲ್ಗೊಂಡನು. ನಿಷ್ಠೆ-ನಿಯಮಗಳೊಂದಿಗೆ ಭಕ್ತಿಯಿಂದ ಪೂಜೆ ಮಾಡಿದನು. ಹೂಗಳನ್ನು ಮಾತೆಯ ಅಡಿದಾವರೆಗಳಿಗೆ ಕಲಶ ಪೂಜೆಯ ನಂತರ ಶಂಖವನ್ನು ಊದಿದನು. ಕೊಲ್ಲಾಪುರದ ಮಹಾಲಕ್ಷ್ಮಿಯು ಓದು ಬರಹ ಗೊತ್ತಿಲ್ಲದಿದ್ದರೂ ಶುದ್ಧ ಹೃದಯಿ ಎನಿಸಿದ ಯುವಕನ ಮುಗ್ಧ ಮನಸ್ಸಿಗೆ ಮಾರು ಹೋದಳು. ಅವನ ಬಗ್ಗೆ ಅವಳಿಗೆ ಅನುಕಂಪ ಅಂಕುರಿಸಿತು. ವಾತ್ಸಲ್ಯ ವೃದ್ಧಿಸಿತು, ಅವನ ಭಕ್ತಿಗೆ ಬೆರಗಾದಳು. ಸುಪ್ರೀತಳಾಗಿ ಪ್ರತ್ಯಕ್ಷಳಾದಳು. ಕೃಪಾಕಟಾಕ್ಷವನ್ನು ಅವನ ಕಡೆಗೆ ಬೀರುತ್ತಾ ಹೇಳಿದಳು—"ಮಗನೇ, ನಿನ್ನ ಭಕ್ತಿಯ ಪೂಜೆಯಿಂದ ನಾನು ಸಂತುಷ್ಟಳಾಗಿದ್ದೇನೆ. ನೀನು ನಂದೀಶ್ವರನನ್ನು ಸಂಹರಿಸುವ ಉದ್ದೇಶದಲ್ಲಿ ಯಶಸ್ವೀ ಎನಿಸುತ್ತಿ-ಅರ್ಧ ರಾಜ್ಯವನ್ನೂ ರಾಜನಿಂದ ಪಡೆದು ಸುಖೀ ಜೀವನ ನಡೆಸುತ್ತಿ ಹೋಗು, ಮನೆಗೆ ಹೋಗು, ಅಜ್ಜಿ, ಪಾಪ ಮೊಮ್ಮಗನಿಗಾಗಿ ದಾರಿ ಕಾಯುತ್ತಿದ್ದಾರೆ" ಲಕ್ಷ್ಮಿ ಮಾತೆ ಮಾಯವಾದಳು.

ಮಾತೆಯ ಕೃಪಾಕಟಾಕ್ಷವನ್ನೂ, ಆಶೀರ್ವಚನವನ್ನೂ ಪಡೆದು ಯುವಕನು ಆನಂದೋತ್ಸಾಹದಿಂದ ಕುಣಿದಾಡಿದನು. ಮತ್ತೆ ದೇವ-ಕಿನ್ನರ ಕನ್ನಿಕೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯರನ್ನು ಮತ್ತೊಮ್ಮೆ ವಂದಿಸುತ್ತಾ ಮನೆಗೆ ಮರಳಿದನು. ಮೊಮ್ಮಗನ ಬರುವಿಕೆಗಾಗಿ ಎದುರು ಕಾಯುತ್ತಿದ್ದ ಅಜ್ಜಿಯ ಸುಕ್ಕು ಮುಖದಲ್ಲೂ ಕಳೆ ಕಂಡು ಬಂತು. ಗುಳಿಬಿದ್ದ ಕಣ್ಣುಗಳಲ್ಲೂ ಆಸೆಯ ಬೆಳಕು ಚೆಲ್ಲಾಡಿತು. "ಮಗು, ಹೋದ ಕೆಲಸ ಈಡೇರಿತಾ ?" ಎಂದು ವಾತ್ಸಲ್ಯದಿಂದ ಪ್ರಶ್ನಿಸುತ್ತ, ಕ್ಷೇಮ ಸಮಾಚಾರವನ್ನು ವಿಚಾರಿಸುತ್ತಾ ಊಟಬಡಿಸಿದಳು. ಅಜ್ಜಿಯ ಕೈ ಊಟದ ರುಚಿ ನೋಡಿ ಯುವಕನಿಗೆ ಎಷ್ಟೋ ದಿನಗಳಾಗಿದ್ದವು. ಸಂತೋಷ ದಿಂದ ಊಟ ಮಾಡುತ್ತಾ, ನಡೆದ ಘಟನೆಗಳನ್ನೆಲ್ಲಾ ಒಂದೊಂದಾಗಿ ಅಜ್ಜಿಗೆ ತಿಳಿಸಿದ. ಅಜ್ಜಿಗೂ ಅಪರಿಮಿತ ಆನಂದ ಆಯಿತು.

ಅಂದು ರಾತ್ರಿ ಯುವಕನಿಗೆ ನಿದ್ದೆಯೇ ಬರಲಿಲ್ಲ. ಮಾತೆಯ ಪ್ರತ್ಯಕ್ಷ ದಿವ್ಯಸ್ವರೂಪ, ಅವಳ ಅಭಯ ಹಸ್ತ, ಆಶೀರ್ವಚನಗಳೇ ನೆನಪಾಗುತ್ತಿದ್ದುವು. ಅರ್ಧ ರಾತ್ರಿ ಕಳೆಯುತ್ತಾ ಬಂತು. ಮುಂಜಾವಿಗೆ ಮುನ್ನ ಮೊಪ್ಪರ ಬಂದಂ ತಾಯಿತು. ಅದೇ ವೇಳೆಗೆ ಮನೆಯ ಹೊರ ಬಾಗಿಲಿನಲ್ಲಿ ದುಡುಂ ಎಂದು ಬೆಟ್ಟವೇ ಬಿದ್ದಂತೆ ಸದ್ದು ಕೇಳಿಸಿತು. ಗಾಬರಿಯಿಂದಲೇ ಬಾಗಿಲು ತೆಗೆ ಯುತ್ತಾ ದಢಾರನೆ ಹೊರಗೆ ಬಂದ. ಅಜ್ಜಿಯೂ ಏಳುವುದನ್ನೂ-ಬೀಳುವು ದನ್ನೂ ಗಮನಿಸದೆ ಹೊರ ಬಂದಳು. ಇದೇನಾಶ್ಚರ್ಯ! ರಾಜನ ಶತೃವಾದ ನಂದೀಶ್ವರನು ಸತ್ತು ಬಿದ್ದಿದ್ದಾನೆ. ಮಹಾಲಕ್ಷ್ಮಿಯ ಕೃಪೆಯಿಂದ ಎಂತಹ ಅಸಾಧ್ಯ ಕಾರ್ಯವನ್ನೂ ಹೇಗೆ ಸಾಧಿಸಬಹುದು ಎಂಬುದರ ಬಗ್ಗೆ ಸತ್ತು ಬಿದ್ದಿದ್ದ ನಂದೀಶ್ವರನನ್ನೇ ಅಜ್ಜಿಗೆ ತೋರಿಸುತ್ತಾ ಮಹಾಮಾತೆಯ ಮಹಿಮೆ ಹಾಗೂ ಕೃಪಾಳುತನದ ಔದಾರ್ಯವನ್ನು ಮನಸಾರೆ ಕೊಂಡಾಡಿದ.

ಊರ ಜನರೆಲ್ಲಾ ನೆರೆದರು. ರಾಜನಿಗೂ ಸುದ್ದಿ ಮುಟ್ಟಿತು. ಅವನೂ ಧಾವಿಸಿ ಅಲ್ಲಿಗೆ ಬಂದ. ಯುವಕನಿಂದ ನಡೆದಿರುವ ಸಂಗತಿಗಳನ್ನೆಲ್ಲಾ ಕೂಲಂಕುಷವಾಗಿ ತಿಳಿದ. ಯುವಕನ ಸುಕೃತ ಸಂಗತಿಯನ್ನು ತಿಳಿದು ಅವನ ಪುಣ್ಯ ವಿಶೇಷದ ಬಗ್ಗೆ ಕೊಂಡಾಡಿದ. ತಾನೂ ಸಹ ಮಹಾ ಮಾತೆಯಾದ ಕೊಲ್ಲಾಪುರದ ವರಮಹಾಲಕ್ಷ್ಮಿಯನ್ನು ಮನಸಾರೆ ನಮಿಸಿದ, ನುತಿಸಿದ.

Sri Vidyabharathi Book Centre, Sringeri

CC-O. In Public Domain. Digitized by eGangotri

ನೆಮ್ಮದಿಯ ಸಿಟ್ಟುಸಿರುಬಿಡುತ್ತಾ, ಯುವಕನನ್ನು ಬೆನ್ನು ತಟ್ಟುತ್ತಾ ಅರಮನೆಗೆ ಹಿಂದಿರುಗಿದ.

ಮಾರನೆಯ ದಿನ ಯುವಕನನ್ನು ತನ್ನ ರಾಜಸಭೆಗೆ ಸಕಲ ಗೌರವಾದರ ರಾಜಮನ್ನಣೆಯೊಂದಿಗೆ ಕರೆಯಿಸಿಕೊಂಡ. ತನ್ನ ಹತ್ತಿರದಲ್ಲಿಯೇ ಯೋಗ್ಯ ಸಿಂಹಾಸನದಲ್ಲಿ ಕುಳ್ಳಿರಿಸಿ. ಕೊಂಡ ತನ್ನ ಘೋಷಣೆಯ ವಾಗ್ದಾನದಂತೆ ಯುವಕನಿಗೆ ನೆರೆದ ಸಭೆಯ ನಡುವೆ ಅರ್ಧ ರಾಜ್ಯವನ್ನು ಸಂತೋಷದಿಂದ ಕೊಟ್ಟಿರುವುದಾಗಿ ತಿಳಿಸಿದ ಸಭೆಗೆ ಸಭೆಯೇ ಯುವಕನ ಬಗ್ಗೆ ಜಯಘೋಷ ಮಾಡಿತು. ರಾಜನೇ ಯುವಕನಿಗೆ ನವಲಪಾಟ ಎಂದು ಹೆಸರಿಟ್ಟ.

ಹಿರಿಯ ರಾಣಿಯಾದ ಮಾಧವ ರಾಣಿ ಮಹಾಲಕ್ಷ್ಮಿಯ ಮಹಿಮೆಯ ಪವಾಡವನ್ನು ಕೇಳಿ ತುಂಬಾ ಸಂತೋಷವಾಯಿತು ಭಕ್ತಿಯೂ ಮೂಡಿತು. ನವಲಪಾಡವನ್ನು ತನ್ನ ರಾಣಿ ವಾಸಕ್ಕೆ ರಾಜನ ಅನುಮತಿಯೊಂದಿಗೆ ಕರೆಯಿಸಿಕೊಂಡಳು. ಮಹಾಲಕ್ಷ್ಮಿಯ ಕೃಪಾಕಟಾಕ್ಷಕ್ಕೆ ಪಾತ್ರನಾದ ಅವನನ್ನು ಕೊಂಡಾಡುತ್ತಾ ತನಗೂ ವ್ರತ ನಿಯಮಗಳನ್ನು ತಿಳಿಸಲು ಹಾಗೂ ವ್ರತವನ್ನು ನೆರವೇರಿಸಲು ಸಹಾಯ ಮಾಡಲು ಕೋರಿದಳು.

ನವಲಪಾಟನು ರಾಣಿಯ ಆಸ್ತಿಕತೆಯ ಆಸಕ್ತಿಯನ್ನು ಕಂಡು ಹಿಗ್ಗಿದನು. ಸಂತೋಷದಿಂದ ಹೇಳಿದನು. ತಾಯಿ, ಅಶ್ವಯುಜ ಮಾಸದಲ್ಲಿ ಶುಕ್ಲ ಪಕ್ಷದ ಅಷ್ಟಮಿಯ ದಿನ ಹದಿನಾರು ನೂಲಿನ ಸೂತ್ರವನ್ನು ಮಾಡಿಕೊಳ್ಳಬೇಕು. ಅದಕ್ಕೆ ಎಣ್ಣೆ-ಅರಶಿನ ಹಚ್ಚಿ, ಹದಿನಾರು ದೂರ್ವೆ ಹಾಗೂ ಹದಿನಾರು ಹಕ್ಕಿಕಾಳು ತೆಗೆದುಕೊಂಡು ತುಳಿಸಿ ಮಾತೆಯನ್ನು ಭಕ್ತಿಯಿಂದ ಪೂಜಿಸಬೇಕು. ಪಂಚಾಮೃತವನ್ನು ಮಾಡಬೇಕು. ಷೋಡಶ ಅರ್ಘ್ಯವನ್ನಿತ್ತು, ಧೂಪ-ನೇವೇದ್ಯವನ್ನು ದೇವಿಗೆ ಅರ್ಪಿಸಿ, ಸೂತ್ರವನ್ನು ಕೈಗೆ ಕಟ್ಟಿಕೊಳ್ಳಬೇಕು. ಭಕ್ತಿ ಹಾಗೂ ಶ್ರದ್ಧೆಯಿಂದ ಕಥೆಯನ್ನು ಓದಬೇಕು ಇಲ್ಲವೇ ಓದಿಸಿ ಕೇಳಬೇಕು. ಹೀಗೆಯೇ ಪ್ರತಿ ಚತುರ್ದಶಿ ಮತ್ತು ಜಾತಿಯ ದಿವಸ ದೇವಿಯ ಪೂಜೆಯನ್ನು ವೈಭವದಿಂದ, ಶಾಂತ ಚಿತ್ತರಾಗಿ, ನಿಷ್ಕಲ್ಮಷ ಹೃದಯ

Sri Vidyabharathi Book Centre, Sringeri

CC-O. In Public Domain. Digitized by eGangotri

ದೊಂದಿಗೆ ಮಾಡುತ್ತಲೇ ಇರಬೇಕಾ. ಶೀಘ್ರಕಾಲದಲ್ಲಿಯೇ ಮಾತೆಯು ಸಂಪ್ರೀತಳಾಗಿ, ಸಂತೃಪ್ತಳಾಗಿ ಬಯಸಿದ ಫಲಾಪೇಕ್ಷೆಯನ್ನು ಈಡೇರಿಸುವಳು.

ನವಲವಾಟನ ಮಾತು ಹಾಗೂ ಸಲಹೆಯಂತೆ ಮಾಧವ ರಾಣಿ ರಾಜನೊಂದಿಗೆ ವ್ರತವನ್ನಾಚರಿಸಲು ಸಿದ್ಧಳಾದಳು. ರಾಜ ಸೂತ್ರವನ್ನು ಕಟ್ಟಿಕೊಳಲು ಇಷ್ಟಪಡಲಿಲ್ಲ. ಇಲ್ಲದೆ ರಾಣಿ ತನ್ನ ಕೈಗೆ ಕಟ್ಟಿಕೊಂಡಿದ್ದ ಸೂತ್ರವನ್ನೂ ಕಿತ್ತೆಸೆದನು ವ್ರತ-ಉತ್ಸವಗಳು ಕ್ಷತ್ರಿಯರಿಗೆ ಶೋಭೆ ನೀಡದು, ಯುದ್ಧದಲ್ಲಿ ಕಾಪಾಡುವುದೇ ಕ್ಷತ್ರಿಯನ ಧರ್ಮ, ಆರಾಧನೆ ಎಂದು ಅವನು ಬಗೆದಿದ್ದನು. ಕಿತ್ತೆಸೆದ ಸೂತ್ರವನ್ನು ದಾಸಿಯರು ಎಚ್ಚರಿಕೆಯಿಂದ ಎತ್ತಿಟ್ಟರು. ಅದನ್ನು ನವಲವಾಟನಿಗೆ ತಲುಪಿಸಿದರು. ಕಿರಿಯ ರಾಣಿಯಾದ ಚಿಮಾದೇವಿಯು ಅದೇ ಸೂತ್ರವನ್ನು ನವಲವಾಟನಿಂದ ಪಡೆದು ಸ್ವತಃ ಭಕ್ತಿಯಿಂದ ವ್ರತವನ್ನು ಕೈಗೊಂಡು, ರಾಜನ ಅಪರಾಧವನ್ನು ಕ್ಷಮಿಸಲು ಕೇಳಿಕೊಂಡಳು. ಕೈಗೊಂಡ ವ್ರತವನ್ನು ರಾಜನಿಗೆ ತಿಳಿಯದಂತ ಪೂರ್ಣಗೊಳಿಸಿದಳು. ಮಾತೆ ಕಿರಿಯ ರಾಣಿಗೆ ಒಲಿದಳು. ಅವಳು ರಾಜನೊಂದಿಗೆ ಸುಖದಿಂದಿರ ತೊಡಗಿದಳು.

ಹಿರಿಯ ರಾಣಿ ಈಗ ರಾಜನಿಗೆ ಬೇಡವಾದಳು. ಮಾತೆಯ ಕೋಪಕ್ಕೂ ತಪ್ಪು ಮಾಡದಿದ್ದರೂ ಕರ್ಮವಶದಿಂದ ಪಾತ್ರಳಾದಳು. ರಾಣಿವಾಸವನ್ನೇ ತೊರೆದು ಕಾಡುಮೇಡುಗಳಲ್ಲಿ ದುಃಖ ತಪ್ತಳಾಗಿ ಅಲೆತೊಡಗಿದಳು. ಕೃಶವಾಗತೊಡಗಿದಳು ಅಲ್ಲಿನ ಆಶ್ರಮದಲ್ಲಿದ್ದ ಮುನಿಜನರಿಗೆ ಈಕೆಯ ಬಗ್ಗೆ ತುಂಬಾ ಕರುಣೆ ಮೂಡಿತು. ಕಾಡಿನಲ್ಲಿಯೇ ಭಕ್ತಿಯಿಂದ ಮತ್ತೆ ಮಾತೆಯ ವ್ರತಾಚರಣೆ ಮಾಡಲು ಸಲಹೆ ನೀಡಿದರು. ತಾವೇ ಮುಂದೆ ನಿಂತು ಹಿರಿಯ ರಾಣಿಯ ಕೈಯಲ್ಲಿ ವ್ರತಾಚರಣೆಯನ್ನು ಶಾಸ್ತ್ರೋಕ್ತವಾಗಿ ಪೂರ್ಣಗೊಳ್ಳುವಂತೆ ನೋಡಿಕೊಂಡರು. ರಾಣಿಯ ದಾರುಣ ದುಃಖವನ್ನು ಕಂಡು ಮಾತೆಯ ಹೃದಯವೂ ಕರಗಿತು ಪ್ರಸನ್ನಳಾಗಿ ಕ್ಷಿಪ್ರದಲ್ಲಿಯೇ ರಾಜನನ್ನು ಸೇರುವಳೆಂದು ಹಾರೈಸಿ ಮಾಯವಾದಳು

Sri Vidyabharathi Book Centre, Sringeri

CC-O. In Public Domain. Digitized by eGangotri

ಇತ್ತ ಬಿಮಾದೇವಿ ರಾಜನಿಗೆ ಸಮಯವರಿತು ಹಿರಿಯ ರಾಣಿಯ ಮನ ನೋಯಿಸದಿರಲು ತಿಳಿಹೇಳಿದಳು ಬೇಹುಗಾರರಿಂದ ಕಾಡಿನಲ್ಲಿ ದಿಕ್ಕಿಲ್ಲದೆ ಪರಿತಪಿಸುತ್ತಿರುವ ರಾಣಿಯ ಬಗ್ಗೆ ತಿಳಿದು ಈಗ ಇಬ್ಬರ ಮನವೂ ಕರಗಿತು. ಇಬ್ಬರೂ ರಥದಲ್ಲಿ ಕಾಡಿಗೆ ಬಂದರು. ಆಶ್ರಮ ಮುನಿಗಳ ರಕ್ಷಣೆಯಲ್ಲಿ ಖಿನ್ನವದನಳಾಗಿ ಸೊರಗುತ್ತಿದ್ದ ಆಕೆಯನ್ನು ಆದರದಿಂದ ಸತ್ಕರಿಸಿ, ಅರಮನೆಗೆ ರಥದಲ್ಲಿ ಕರೆದುಕೊಂಡು ಹೋದರು. ಈರ್ವರು ರಾಣಿಯರನ್ನೂ ಕೂಡಿ ರಾಜ ಚಿರಕಾಲ ಸುಖದಿಂದಿದ್ದನು ನವಲವಾಟನೂ ಮಾತೆಯ ಕೃಪೆಯಿಂದ ತನ್ನ ಪಾಲಿಗೆ ಬಂದ ರಾಜ್ಯವನ್ನು ಸುವ್ಯವಸ್ಥೆಯಿಂದ ಆಳತೊಡಗಿನು.

–o–

Sri Vidyabharathi Book Centre, Sringeri

CC-O. In Public Domain. Digitized by eGangotri

ವರಮಹಾಲಕ್ಷ್ಮಿಯ ಕೀರ್ತನೆ

ಭಾಗ್ಯದ ಲಕ್ಷ್ಮಿ ಬಾರಮ್ಮ, ನಮ್ಮಮ್ಮ ನೀ ಸೌಭಾಗ್ಯದ ಲಕ್ಷ್ಮಿ ಬಾರಮ್ಮ ||
ಹೆಜ್ಜೆಯ ಮೇಲೆ ಹೆಜ್ಜೆಯ ನಿಕ್ಕುತ ಗೆಜ್ಜೆ ಕಾಲ್ಗಳ ಧ್ವನಿಯನು ಮಾಡುತ
ಸಜ್ಜನಸಾಧು ಪೂಜೆಯ ವೇಳೆಗೆ ಮಜ್ಜಿಗೆಯೊಳಗಿನ ಬೆಣ್ಣೆಯಂತೆ ||೧||
ಕನಕವೃಷ್ಟಿಯ ಕರೆಯುತ ಬಾರೆ ಮನಕೆ ಮಾನವ ಸಿದ್ಧಿಯ ತೋರೆ
ದಿನಕರ ಕೋಟಿ ತೇಜದಿ ಹೊಳೆವ ಜನಕರಾಯನ ಕುಮಾರಿ ಬೇಗ ||೨||
ಅತ್ತಿತ್ತಗಲದೆ ಭಕ್ತರ ಮನೆಯಲಿ ನಿತ್ಯಮಹೋತ್ಸವ ನಿತ್ಯಸುಮಂಗಳ
ಸತ್ಯವ ತೋರುವ ಸಾಧು ಸಜ್ಜನರ ಚಿತ್ತದಿ ಹೊಳೆವ ಪುತ್ಥಳಿ ಬೊಂಬೆ ||೩||
ಸಂಖ್ಯೆ ಇಲ್ಲದ ಭಾಗ್ಯವ ಕೊಟ್ಟು ಕಂಕಣ ಕೈಯ ತಿರುವುತ ಬಾರೆ
ಕುಂಕುಮಾಂಕಿತ ಪಂಕಜಲೋಚನೆ ವೆಂಕಟರಮಣನ ಬಿಂಕದ ರಾಣಿ ||೪||
ಸಕ್ಕರೆ ತುಪ್ಪದ ಕಾಲುವೆ ಹರಿಸಿ ಶುಕ್ರವಾರದ ಪೂಜೆಯ ವೇಳೆಗೆ
ಅಕ್ಕರೆವುಳ್ಳ ಅಳಗಿರಿ ರಂಗನ ಚೊಕ್ಕ ಪುರಂದರ ವಿಠಲನ ರಾಣಿ ||೫||

ಪಾಲಿಸೆ ಎನ್ನ ಶ್ರೀ ಮಹಾಲಕ್ಷ್ಮಿ । ಪಾಲಿಸೆ ಎನ್ನನು ಪಾಬ್ಧಿ ಸಂಜಾತೆ ||ಪ||
ಲಲಿತಾಂಗಿ ಶುಭದೇವಿ ಮಂಗಳದೇವಿ || ಅನುಪಲ್ಲವಿ ||
ವೇದಾಭಿಮಾನಿ ಸಾರೆಸಾಕ್ಷಿ ಶ್ರೀಧರಮಣಿ । ಕಾದುಕೊ ಎನ್ನಯ ಪಾದ
ಸೇವಕರನ್ನು ಆದಿಶಕ್ತಿ ಸರ್ವಧಾರೆ ಗುಣ ಪೂರ್ಣೆ ||೧||
ದಯದಿಂದ ನೋಡೆ ಭಜಿಪ ಭಕ್ತ ಭಯದೂರದೂಡೆ
ದಯಪಾಲಿಸೆ ಮಾತೆ ತ್ರೈಲೋಕ ವಿಖ್ಯಾತೆ। ಜಯದೇವಿಸುಪ್ರದೆ ದಯ
ವದನನ ಪ್ರೀತೆ ||೨||
ನೀನಲ್ಲದನ್ಯರು ರಕ್ಷೆರನು ಕಾಣೆನಾ ಮುನ್ನ ದಾನವಾಂತಕ ಸಿರಿಪುರಂದರ
ಧ್ಯಾನಿಪಭಕುತರ ಮಾನ ಮಾನನಿನ್ನದು ತಾಯೆ ||೩||

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ನಮ್ಮ ಪ್ರಕಟನೆಗಳು

ವಚನದೇವಿ ಮಹಾತ್ಮೆ
ಶ್ರೀ ರಾಮಕಥಾ ಮಹಿಮೆ
ಹತ್ತು ಜನ ಮಹಾಪತಿವ್ರತೆಯರ ಕಥೆಗಳು
ವಚನ ಹರಿಶ್ಚಂದ್ರನ ಕಥೆ
ಐದು ಶುಕ್ರವಾರದ ಹಾಡುಗಳು
ಮಂಗಳಗೌರೀ ಹಾಡುಗಳು
ಹರಿಭಕ್ತಿಸಾರ
ಶ್ರೀ ವೆಂಕಟೇಶ ಸುಪ್ರಭಾತಂ
ಭಕ್ತಿಗೀತೆಗಳು
ಸಂಪ್ರದಾಯದ ಹಾಡುಗಳು
ಯಕ್ಷಗಾನ ಸತ್ಯವ್ರತನ ಪುಣ್ಯ ಚರಿತ್ರೆ
ಯಕ್ಷಗಾನ ಸಾನಂದ ಗಣೇಶ ಚರಿತ್ರೆ
ಯಕ್ಷಗಾನ ಪುರುರವ ಚರಿತ್ರೆ
ಯಕ್ಷಗಾನ ಶನಿದೇವರ ಮಹಾತ್ಮೆ
ವಚನ ಶನಿದೇವರ ಮಹಾತ್ಮೆ
ವಚನ ಪುರುರವ ಚಕ್ರವರ್ತಿಯ ಕಥೆ
ಪುರಂದರದಾಸರ ಕೃತಿಗಳು
ತ್ಯಾಗರಾಜರ ಕೀರ್ತನೆಗಳು
ಮಹಾಭಾರತದ ಸ್ವಾರಸ್ಯ ಕಥೆಗಳು
ಸಸ್ವರ ನಿತ್ಯದೇವತಾರ್ಚನೆ
ತಿರುಪ್ಪಾವೈ
ಶ್ರೀ ವೈಷ್ಣವ ಭಗವಧಾರಧನ ಕ್ರಮ
ಶ್ರೀ ವೈಷ್ಣವ ನಿತ್ಯ ಸಂಧ್ಯಾವಂದನೆ
ಮುಕುಂದಮಾಲಾ ಸ್ತೋತ್ರ
ಪಂಚತಂತ್ರ ಕಥೆಗಳು

ಶ್ರೀ ಸಂತೋಷ ಪ್ರಕಾಶನ
Sri Vidyabharathi Book Centre, Sringeri
ಬೆಲೆ : ರೂ. 6-00